ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 4
ರೂ. 5/-
ಜನವರಿ 25, 2009
ಕನ್ನಡ ವಾರಪತ್ರಿಕೆ





ಕರ್ನಾಟಕ ಹಿಂದುತ್ವವಾದಿಗಳ ಭಯೋತ್ಪಾದಕ ಜಾಲ



ವಿಶ್ವ ಆರ್ಥಿಕ ಬಿಕ್ಕಟ್ಟು : ಸುನಾಮಿ ಹುಟ್ಟಿದ್ದು ಹೇಗೆ ?



ಕೇಳುವವರಿಲ್ಲ ಸ್ಲಂವಾಸಿಗಳ ಗೋಳು

ಮೂರನೆಯ ಪರ್ಯಾಯ : ಒಗ್ಗೂಡುತ್ತಿರುವ ಶಕ್ತಿ



ಚೀನಾ : ಸುಧಾರಣೆಗಳ ಮೂವತ್ತು ವರ್ಷಗಳು

ಸಾಹಿತ್ಯದಲ್ಲಿ ಬದ್ಧತೆಯ ಪ್ರಶ್ನೆ ಮತ್ತು ಗೋರ್ಕಿ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಸಾಹಿತ್ಯದ ಉದ್ದೇಶವೇನು? ಆತ್ಮತೃಪ್ತಿಗಾಗಿಯೋ, ಅದು ಸಮಾಜಕ್ಕಾಗಿಯೋ? ಸಾಹಿತಿಗೆ ಸಾಮಾಜಿಕ ಬದ್ಧತೆ ಬೇಕೆ? ಬೇಕಿದ್ದರೆ ಎಂತಹ ಬದ್ಧತೆ ಬೇಕು?

ಕಳೆದವಾರದಿಂದ

ಹಾಗೆಂದು, ಯಾವುದೇ ಮಾರ್ಕ್ಸ್‌ವಾದಿ ಪಕ್ಷವು ಲೇಖಕನ ಸ್ವಾತಂತ್ರ್ಯವನ್ನು ನಿರ್ಬಂಧಿಸುತ್ತದೆ ಎಂಬುದು ತಪ್ಪು ಗ್ರಹಿಕೆ. ಏಕೆಂದರೆ, ಮಾರ್ಕ್ಸ್‌ವಾದಿ ಪಕ್ಷಕ್ಕೆ ಸಾಹಿತ್ಯ, ಕಲೆ ಇತ್ಯಾದಿ ಮೇಲಂತಸ್ತಿನ (Super Structure) ಬಗೆಗೆ ಸ್ಪಷ್ಟವಾದ ಅರಿವಿರುತ್ತದೆ. ಅದಿಲ್ಲದಿದ್ದರೆ ಅದೊಂದು ಮಾರ್ಕ್ಸ್‌ವಾದಿ ಪಕ್ಷವಾಗಿರುವುದು ಸಾಧ್ಯವೇ ಇಲ್ಲ. ಆದರೆ, ಲೇಖಕನಿಗೆ ಸ್ವಾತಂತ್ರ್ಯವಿರಬೇಕೆಂಬುದು ಶತಃಸಿದ್ಧ. ಹಾಗಿರುವಲ್ಲಿ ಲೇಖಕನೊಬ್ಬ ಒಂದು ಕ್ರಾಂತಿಕಾರಿ ಪಕ್ಷಕ್ಕೆ ಬದ್ಧನಾಗಿರುವುದು ಆತನ ಮೂಲಭೂತ ಸೃಜನಶೀಲ (Creative) ಸ್ವಾತಂತ್ರ್ಯಕ್ಕೆ ದಕ್ಕೆಯನ್ನುಂಟು ಮಾಡುವುದಿಲ್ಲವೆ? ಏಕೆಂದರೆ, ದಿನನಿತ್ಯದ ಕ್ರಾಂತಿಕಾರಿ ಪ್ರಕ್ರಿಯೆಯಲ್ಲಿ ಆತನ ಭಾಗವಹಿಸುವಿಕೆ, ಕ್ರಾಂತಿಕಾರಿ ಪಕ್ಷದ ಶಿಸ್ತಿಗೆ ಬದ್ಧನಾಗಿರುವಿಕೆ- ಆತನ ಸ್ವಂತದ ಅಭಿವ್ಯಕ್ತಿಗೆ ಪ್ರತಿಕೂಲವಾಗುವುದಿಲ್ಲವೆ? ಎಂಬುದು ಸಾಮಾನ್ಯವಾಗಿ ಕೇಳಿ ಬರುವ ಪ್ರಶ್ನೆ.

ಒಬ್ಬ ಪ್ರತಿಭಾವಂತ ಲೇಖಕ ಮತ್ತು ಅಷ್ಟೇ ಪ್ರತಿಭಾವಂತ ಕಮ್ಯೂನಿಸ್ಟ್ ಲೇಖಕ ಇವರ ನಡುವಿನ ವ್ಯತ್ಯಾಸವೇನೆಂದರೆ-ಕಮ್ಯೂನಿಸ್ಟ್ ಲೇಖಕನಿಗೆ ತಾನು ಏನಾಗಿದ್ದೇನೆ; ಏನು ಮಾಡಬೇಕಾಗಿದೆ ಎಂಬುದು ತಿಳಿದಿರುತ್ತದೆ. ಬೂರ್ಶ್ವಾ ಸಾಹಿತಿಗಳು ಕೂಡಾ-ಜಗತ್ತಿನ ಅತಿ ಶ್ರೇಷ್ಠ ಪ್ರತಿಭಾವಂತರ ಸಾಲಿನಲ್ಲಿ ಗುರುತಿಸುವ ಮಾಕ್ಸಿಂ ಗೋರ್ಕಿಯವರು ಮಾರ್ಕ್ಸ್‌ವಾದಿ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದರು. ಇನ್ನೊಂದೆಡೆ ಅವರು ತನ್ನ ವರ್ಗ-ಶತ್ರುವಿನ ಮೇಲೆ ಸೈದ್ಧಾಂತಿಕ ಹಾಗೂ ವ್ಯವಹಾರಿಕ ದೃಷ್ಟಿಯಲ್ಲಿ ಆಕ್ರಮಣ ಮಾಡುವ ಕ್ರಾಂತಿಕಾರಿಯೂ ಆಗಿದ್ದರು. ಕ್ರಾಂತಿಯು ಪರಿಸ್ಥಿತಿಗಳಿಂದ ಸಂಘಟಿತವಾಗುವ ಸತ್ಯ ಜೀವನದ ಪರಿಸ್ಥಿತಿಗಳು ಮನುಷ್ಯನನ್ನು ಕ್ರಾಂತಿಕಾರಿ ಪರಿವರ್ತನೆಯ ಕಡೆಗೆ ದೂಡಿ ಬಿಡುತ್ತವೆ. ಇದನ್ನು ಸ್ಪಷ್ಟವಾಗಿ ಗುರುತಿಸುವಲ್ಲಿ ಪಕ್ಷಕ್ಕೆ ಬದ್ಧರಾದ ಮಾಕ್ಸಿಂಗೋರ್ಕಿಯವರ ಮಹಾನ್ ಯಶಸ್ವಿಯಾಗಿತ್ತು.

ಅಂತೆಯೇ, ಗೋರ್ಕಿ ಮತ್ತು ಲೆನಿನರ ನಡುವೆ ಎಷ್ಟು ಮೈತ್ರಿ ಇತ್ತೋ-ಅಷ್ಟೇ ರಾಜಿಗೊಪ್ಪದ ಕ್ರಾಂತಿಕಾರಿ ಲೇನಿನ್‌ರೊಡನೆ ಕಲಾಕಾರ ಗೋರ್ಕಿಯವರಿಗೆ ಭಿನ್ನಮತವೂ ಇತ್ತು. ಆದರೆ, ಕಲಾವಿದ ಗೋರ್ಕಿಗೆ ಲೆನಿನ್ ಎಂದೂ ನಿರ್ಬಂಧ' ವಿಧಿಸುತ್ತಿರಲಿಲ್ಲ. ಲೆನಿನ್ ಗೋರ್ಕಿಯವರಿಗೆ ಹೇಳುತ್ತಿದ್ದರು:

"ಸೃಜನಶೀಲ ಕಲೆಗೆ ಸಂಬಂಧಿಸಿದ ಎಷ್ಟೊ ವಿಚಾರಗಳಲ್ಲಿ ನೀವು ಸರ್ವಶ್ರೇಷ್ಠ ನಿರ್ಣಾಯಕರೆಂಬ ವಿಚಾರದಲ್ಲಿ ನನಗೆ ಪೂರ್ಣ ಸಮ್ಮತಿಯಿದೆ. ಸಾಹಿತ್ಯವನ್ನು ಯಾವುದೇ ಯಾಂತ್ರಿಕ ದೃಷ್ಟಿಕೋಣದ ಒಂದೇ ಅಳತೆಗೋಲಿನಿಂದ ಅಳೆಯಲಾಗುವುದಿಲ್ಲ." ಈ ಕುರಿತು ಲೆನಿನರ ಸ್ಪಷ್ಟೋಕ್ತಿ ಹೀಗಿದೆ:

"ನಾವು ಪಕ್ಷದ ಸಾಹಿತ್ಯ ಮತ್ತು ಅದರ ಮೇಲೆ ಪಕ್ಷ ನಿಯಂತ್ರಣದ ಸಂದರ್ಭದಲ್ಲಿ ಮಾತನಾಡುತ್ತಿದ್ದೇನೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಇಚ್ಛಾನುಸಾರವಾಗಿ ಯಾವುದೇ ಅಂಕುಶವಿಲ್ಲದೇ ಏನನ್ನಾದರೂ ಬರೆಯುವ ಹೇಳುವ ಸ್ವಾತಂತ್ರ್ಯ ಖಂಡಿತವಾಗಿಯೂ ಇದೆ. ಅಂತೆಯೇ ಪಕ್ಷವೂ ಸೇರಿದಂತೆ ಎಲ್ಲಾ ಸಾಮೂಹಿಕ ಸಂಘಟನೆಗಳಿಗೂ ತಮ್ಮ ಪಕ್ಷದ ಮರೆಯಲ್ಲಿ ಪಕ್ಷ ವಿರೋಧಿ ಸದಸ್ಯರನ್ನು ಪಕ್ಷದಿಂದ ಹೊರದಬ್ಬಲೂ ಕೂಡ ಸ್ವಾತಂತ್ರ್ಯವಿದೆ. ಪಕ್ಷವು ಒಂದು ಸ್ವತಂತ್ರ ಸಂಘಟನೆ. ಇದು ಪಕ್ಷ ವಿರೋಧಿ ಹಿಂಬಾಲಕರುಗಳಿಂದ ತನ್ನನ್ನು ಸ್ವತಂತ್ರ ಗೊಳಿಸಿಕೊಳ್ಳದಿದ್ದರೆ ಮೊದಲು ಸೈದ್ಧಾಂತಿಕವಾಗಿ, ಆನಂತರ ಭೌತಿಕವಾಗಿ ಅದು ಒಡೆದು ಹೋಗುತ್ತದೆ. ಪಕ್ಷ ಮತ್ತು ಪಕ್ಷವಿರೋಧಿಗಳ ನಡುವೆ ಒಂದು ವಿಭಾಜಕ ರೇಖೆಯನ್ನು ಎಳೆಯಲು ಪಕ್ಷದ ಕಾರ್ಯಕ್ರಮ ಇದ್ದೇ ಇದೆ."

ಇಷ್ಟಕ್ಕೂ 'ಪೂರ್ಣ ಸ್ವಾತಂತ್ರ್ಯ' ಅಥವಾ 'ನಿರಪೇಕ್ಷ್ಯ ಸ್ವಾತಂತ್ರ್ಯ' ಎಂಬುದು ಎಲ್ಲಿದೆ? ಅದು ಇಲ್ಲವೇ ಇಲ್ಲ. ಇಂಥ ಸ್ವಾತಂತ್ರ್ಯದ ಕುರಿತು ಮಾತನಾಡುವುದೇ ಧೂರ್ತತನ. ಲೆನಿನ್ ಅವರನ್ನು ಮತ್ತೆ ಉದ್ಧರಿಸುವುದಾದರೆ:-

"ದುಡಿಯುವ ಜನ ಬಡತನದಲ್ಲಿ ಬದುಕುತ್ತಿರುವಾಗ ಅವರ ದುಡಿಮೆಯ ಮೇಲೆ ಕೊಬ್ಬಿರುವ ಬೆರಳೆಣಿಕೆಯ ಶ್ರೀಮಂತರ ಬಂಡವಾಳಶಾಹಿ ಶಾಸನದ ಮೇಲೆ ಆಧರಿಸಲ್ಪಟ್ಟ ಸಮಾಜದಲ್ಲಿ ನಿಜವಾದ ಸ್ವಾತಂತ್ರ್ಯವು ಸಾಧ್ಯವೇ ಇಲ್ಲ. ಲೇಖಕ ಮಹಾಶಯರೇ, ನಿಮ್ಮ ಪವಿತ್ರ ಅಭಿನಯ ಕಲೆಗೆ ಪೂರಕವೆಂಬಂತೆ ವೇಶ್ಯಾವೃತ್ತಿಯನ್ನು ತೋರಿಸಲು ಬೇಡಿಕೆ ಮಂಡಿಸುವ, ನಿಮ್ಮಿಂದ ಅಶ್ಲೀಲ ಚಿತ್ರ, ಪೇಯಿಂಟಿಂಗ್ಸ್ ಬಯಸುವ ಬಂಡವಾಳ ಶಾಹಿ ಪ್ರಕಾಶಕರಿಂದ ಮತ್ತು ಬಂಡವಾಳ ಶಾಹಿ ಅಭಿರುಚಿಯುಳ್ಳ ಓದುಗರಿಂದ ನೀವು ಸ್ವತಂತ್ರರೇ? ಸ್ವಾತಂತ್ರ್ಯದ ಈ ಸಂಪೂರ್ಣ ಕಲ್ಪನೆಯೇ ಬಂಡವಾಳಶಾಹಿ ಹಾಗೂ ಅರಾಜಕತಾವಾದಿಗಳ ಶಾಬ್ದಿಕ ಬುಡುಬುಡಿಕೆಯಾಗಿದೆ. ಸಮಾಜದೊಳಗಿದ್ದು ಯಾರೂ ಸಮಾಜದಿಂದ ಪೂರ್ತಿಯಾಗಿ ಸ್ವತಂತ್ರರಾಗಿರುವುದು ಸಾಧ್ಯವೇ ಇಲ್ಲ"

(ಒಂದು ಅಡಿ ಟಿಪ್ಪಣಿ: ನಮ್ಮ ಭಾರತದ ಪರಿಸ್ಥಿತಿಯನ್ನೇ ನೋಡಿ. ಇಲ್ಲಿ ನ್ಯಾಯಕ್ಕಾಗಿ ಹೋರಾಡುವವರನ್ನು ಎನ್‌ಕೌಂಟರ್‌ಗಳಲ್ಲಿ ಮುಗಿಸಲಾಗುತ್ತದೆ. ಸಾಮೂಹಿಕ ನರಮೇಧದ ರೂವಾರಿ ಮುಖ್ಯಮಂತ್ರಿಯಾಗಿ ವಿಜೃಂಭಿಸುತ್ತಲೇ ಇದ್ದಾಗ ಗುಜರಾತ್ ರಾಜ್ಯವು ಭಾರತದಲ್ಲಿದ್ದರೂ ಅದಕ್ಕೆ ಭಾರತದ ಸಂವಿಧಾನ ಅನ್ವಯಿಸುವುದಿಲ್ಲ. ಸರಣಿ ಬಾಂಬ್ ಸ್ಫೋಟದ ಆರೋಪಿಗಳಿಗೆ ತಕ್ಷಣ ಶಿಕ್ಷೆಯಾಗುತ್ತದೆ. ಅದಕ್ಕಿಂತ ಲಕ್ಷಪಟ್ಟು ಕೊಲೆಗಳಿಗೆ ಕಾರಣವಾದ ಫ್ಯಾಸಿಸ್ಟ್ ಸ್ಫೋಟಕರು ಆರಾಮದಲ್ಲಿರುತ್ತಾರೆ. ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದ ಒಳ ಸಂಚಿನ ಪ್ರತಿಷ್ಠಿತ ವ್ಯಕ್ತಿಗಳು ಈ ದೇಶದಲ್ಲಿ ಆರುವರ್ಷ ಆಡಳಿತ ನಡೆಸಿ ನಮ್ಮ ಪ್ರಜಾಪ್ರಭುತ್ವದ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ! ಲಕ್ಷಾಂತರ ರೈತರ ಆತ್ಮಹತ್ಯೆಗೆ ಕಾರಣರಾದವರು ಯಾರು ಎಂಬುದು ನಮ್ಮ ಬಹುತೇಕ ಸ್ವಾತಂತ್ರ್ಯಪ್ರಿಯ (!) ಸಾಹಿತಿಗಳಿಗೆ ಗೊತ್ತೇ ಇಲ್ಲ. ಏಕೆಂದರೆ ಹೆಚ್ಚಿನವರು ಅಂತವರ ಎಂಜಿಲನ್ನೇ ತಿನ್ನುವವರು. ದೇಶದಾದ್ಯಂತ ಅಲ್ಪಸಂಖ್ಯಾತ ಹಾಗೂ ದಲಿತರ ಮೇಲೆ ಬಗೆಬಗೆಯಲ್ಲಿ ಹಲ್ಲೆ, ದರೋಡೆ, ಕೊಲೆ ಅತ್ಯಾಚಾರ ಮಾಡುವ ಕಿರಾತಪಡೆಗಳನ್ನು ಹೊಂದಿದ ಪಕ್ಷವೊಂದು ರಾಷ್ಟ್ರೀಯ ಪಕ್ಷವಾಗಿ ಮನ್ನಣೆಗಳಿಸಿ ಉತ್ತರೋತ್ತರವಾಗಿ ಬೆಳೆಯುತ್ತಿದೆ. ಇಲ್ಲಿಯ ರಾಜಕೀಯ, ಪ್ರಶಾಸನಿಕ, ಪೋಲೀಸು, ನ್ಯಾಯಾಂಗ ಎಲ್ಲವೂ ಕಡು ಭ್ರಷ್ಟವೂ ಕ್ರೂರವೂ ಆಗಿದೆ. ಇಂದು ಹಿಂಸೆಯೇ ನಮ್ಮ ನಾಗರೀಕತೆಯ ಪ್ರಧಾನ ಲಕ್ಷಣ. ಇಂಥ 'ಸುವರ್ಣ ಯುಗ' ದಲ್ಲಿ ವಾಕ್ ಹಾಗೂ ಬರಹದ ಸ್ವಾತಂತ್ರ್ಯದ ಬಗೆಗೆ ಏನೆಂದು ಮಾತನಾಡಲಿ? ಸತ್ಯಕ್ಕಾಗಿ ಹೋರಾಡಲು ಸಿದ್ಧನಿರುವಾತ ಹುತಾತ್ಮನಾಗಲೂ ತಯಾರಿರಬೇಕು.

ಸಾಹಿತಿಯ ಬದ್ಧತೆಯ ಪ್ರಶ್ನೆಯ ಕುರಿತು ಲೆನಿನ್ ಅವರ ವಿಚಾರವನ್ನು Vledimir Shctirbna ಹೀಗೆ ವಿವರಿಸುತ್ತಾರೆ.

"Lenin demonstrated that writers should have a thorugh knowledge of life which was the main source from which art was the main source from which art drew its strength and power of conviction, its ability to influence the minds and hearts of millions of people, and to teach them how to think, feel and act correctly.

In interpreting the concept of artistic truth Lenin developed the principles of materialistic aesthetics which by truth, implies that the imaginative content of a work of art should correspond to the objective image of reality.

Lenin never supported those authors who ignoring the truth of life, merely wanted to set out their own divistic views in bellevs letter form Lenin regarded every serious work of literature as a live human document reflecting the epoch's actual historical process and phenomena.

In practically every statement that Lenin made on problem of literature he mentioned how truthfully and profoundly this or that writer is one book or another succeeded in reflecting the life and ideas of his day"

ಲೆನಿನ್ ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತಾರೆ : -

"ಸಾಹಿತ್ಯವು ವಾಸ್ತವದಲ್ಲಿ ಸ್ವತಂತ್ರವಾಗುವುದು ಅದು ನೇರವಾಗಿ ದುಡಿಯುವ ಜನವರ್ಗದ ಜತೆಗೆ ಸೇರಿದಾಗ ಮಾತ್ರ ದುಡಿಯುವ ವರ್ಗದೊಂದಿಗೆ ಸೇರಿಕೊಂಡ ಸಾಹಿತ್ಯವು ಏತಕ್ಕೆ 'ಸ್ವತಂತ್ರ' ಸಾಹಿತ್ಯವಾಗುತ್ತದೆಂದರೆ ಅದು ಮೇಲಿನ ಅಂತಸ್ತಿನಲ್ಲಿರುವ ಬೆರಳೆಣಿಕೆಯ ಭಾರೀ ಪತನಗ್ರಸ್ಥ ರೋಗಿಗಳಿಗಾಗಿ ಬರೆಯಲ್ಪಡುವುದಿಲ್ಲ ಬದಲಿಗೆ ದೇಶದ ಸೌಂದರ್ಯ ಶಕ್ತಿ ಮತ್ತು ಭವಿಷ್ಯವಾಗಿರುವ ಕೋಟಿಗಟ್ಟಳೆ ಶ್ರಮಜೀವಿಗಳಿಗಾಗಿ ಮಾತ್ರ ಅದು ಸ್ವತಂತ್ರವಾಗುತ್ತದೆ."

ಆದ್ದರಿಂದ ಬದ್ಧತೆ ಬರಬೇಕಾದುದು ಆತ್ಯಂತಿಕವಾಗಿ ಸಾಮಾಜಿಕ ಯಾಥಾರ್ಥಕ್ಕೆ. ಈ ಸಾಮಾಜಿಕ ಯಥಾರ್ಥದಲ್ಲಿ ಒಂದು ನಿರಂತರತೆಯಿದೆ. ಈ ನಿರಂತರತೆ ಪ್ರತೀ ಭಾರಿಯೂ ಅತೀತದಿಂದ ತನ್ನನ್ನು ಸಂರಕ್ಷಿಸಲ್ಪಡುತ್ತಾ ಅಂತೆಯೇ ಅತೀತದಿಂದ ಸ್ವತಃ ಮುಕ್ತವಾಗಿಯೂ ಇರುತ್ತದೆ. ಇದು ಮಾನವ ವಿಕಾಸದ ದ್ವಂದ್ವಮಾನ ಪ್ರಕ್ರಿಯೆ. ಈ ಸಂದರ್ಭದಲ್ಲಿ ನಾನು ಇ. ಎಂ. ಎಸ್. ನಂಬೂದಿರಿಪಾಡ್ ಅವರ ಮಾತುಗಳನ್ನು ಉದ್ಧರಿಸಲು ಬಯಸುತ್ತೇನೆ:-

"ನನಗೆ ಒಂದು ಘಟನೆ ನೆನಪಿಗೆ ಬರುತ್ತದೆ. ಒಮ್ಮೆ ಚರ್ಚೆಯಲ್ಲಿ ಘೋರ ಕಮ್ಯುನಿಸ್ಟ್ ವಿರೋಧಿಯೊಬ್ಬ ಕಮ್ಯುನಿಸ್ಟರು ಒಂದು ಕೈಯಲ್ಲಿ 'ಕೆಪಿಟಲ್' ಅನ್ನೂ ಇನ್ನೊಂದು ಕೈಯಲ್ಲಿ ಋಗ್ವೇದವನ್ನೂ ಹಿಡಿದುಕೊಳ್ಳುವರೆಂದು ನಿಂದಿಸಿದ. ಆ ಸಭೆಯಲ್ಲಿ ನಾನಿದ್ದೆ. ನನಗೆ ತತ್‌ಕ್ಷಣ ಉತ್ತರಿಸುವ ಅವಕಾಶವುಂಟಾಯಿತು.

(ಮುಂದುವರಿಯುವುದು)

ಜನಶಕ್ತಿ ಕನ್ನಡ ವಾರಪತ್ರಿಕೆ

ಸಂಪಾದಕೀಯ

ಬೆಳಗಾಂ ಅಧಿವೇಶನ : ಅರ್ಥಹೀನ ಆಡಂಬರ, ಜನರ ಮರೆತ ಸರ್ಕಾರ

ಬೆಳಗಾಂನಲ್ಲೀಗ ಆರಂಭಗೊಂಡಿರುವ ವಿಧಾನಸಭೆಯ ಅಧಿವೇಶನ ಜನತೆಯಲ್ಲಿ ಹಲವು ನಿರೀಕ್ಷೆಗಳನ್ನು ಹುಟ್ಟಿಸಿದೆ. ಪ್ರಾದೇಶಿಕ ಅಸಮಾನತೆ, ಕೇಂದ್ರೀಕೃತ ಅಧಿಕಾರದ ವ್ಯವಸ್ಥೆ ಎದುರಿನಲ್ಲಿ ತಮ್ಮನ್ನು ಕಡೆಗಣಿಸಲಾಗುತ್ತಿದೆ ಎಂಬ ಭಾವನೆಯು ಸಹಜವೇ. ಆ ನಿರೀಕ್ಷೆಗಳಿಗೆ ತಕ್ಕಂತೆ ಇಲ್ಲಿ ಸ್ಪಂದಿಸದೇ ಆಡಳಿತ ಪಕ್ಷ ತನ್ನನ್ನು ವೈಭವೀಕರಿಸಿಕೊಳ್ಳಲು ಪೂರ್ಣ ಗಮನ ನೀಡಿದೆ. ಮೊದಲ ದಿನದಂದು ನಡೆದ ಬಾಜಾ ಬಜಂತ್ರಿಗಳ ಅಬ್ಬರ, ಮುಖ್ಯಮಂತ್ರಿ ಯಡಿಯೂರಪ್ಪನವರ ಮೆರವಣಿಗೆ ಬಿಜೆಪಿಯು ಪಾಳೇಗಾರಿ ಗುಂಗಿಗೆ ಅರಸೊತ್ತಿಗೆಯ ಮೌಲ್ಯಗಳಿಗೆ ಬದ್ಧವಾಗಿರುವುದನ್ನೇ ತೋರಿಸುತ್ತದೆ.

ಬಹಳ ಮುಖ್ಯವಾಗಿ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲ ಠಾಕೂರ್‌ರವರ ಭಾಷಣ ಅತ್ಯಂತ ನೀರಸ ಮಾತ್ರವಲ್ಲ, ಜನತೆಯ ಪ್ರಶ್ನೆಗಳಿಗೆ ತೋರಿದ ನಿರ್ಲಕ್ಷ್ಯತನ, ರಾಜ್ಯ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಿಗೆ ಬೆನ್ನು ತೋರಿಸಿದ ಪಲಾಯನತೆ.


ರಾಜ್ಯ ಸರ್ಕಾರದ ನಿಲುವು ಕೈಗೊಂಡ ಕ್ರಮಗಳು, ಮುಂದಿನ ಯೋಜನೆ, ಆದ್ಯತೆಯ ವಿಷಯಗಳ ಬಗ್ಗೆ ಸರ್ಕಾರದ ನೀತಿಯನ್ನು ರಾಜ್ಯಪಾಲರ ಮೂಲಕ ಹೇಳಿಸುವುದು ವಾಡಿಕೆ. ಹಾಗೆ ನೋಡಿದರೆ ರಾಜ್ಯಪಾಲರ ಈ ಭಾಷಣದಲ್ಲಿ ಗಂಭೀರವಾಗಿ ಗಮನಹರಿಸುವಂತಹದ್ದು ಏನೂ ಇಲ್ಲ. ಸರ್ಕಾರವೇ ಈ ಡಂಗುರ ಹೊಡೆದುಕೊಂಡಂತೆ ಬೆಂಗಳೂರಿನಾಚೆ ನಡೆಯುವ ಈ ಅಧಿವೇಶನ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿ ಮತ್ತಿತರೆ ಸಮಸ್ಯೆಗಳಿಗೆ ಪರಿಹಾರ ನೀಡಲಿದೆಯೆಂದು ಹೇಳಲಾಗಿತ್ತು. ಆದರೆ ರಾಜ್ಯಪಾಲರ ಭಾಷಣದಲ್ಲಿ ಕೇವಲ ಅಭಿವೃದ್ಧಿ ಸಾಧಿಸುವ ಘೋಷಣೆ ಪುನಃ ನೀಡಲಾಗಿದೆಯೇ ಹೊರತು ಯಾವುದೇ ನಿರ್ದಿಷ್ಟ ಯೋಜನೆಗೆ ಹಣ ನೀಡಿಕೆಯಾಗಲಿ ಇಲ್ಲವೇ ಇಲ್ಲ. ಹೈ.ಕ.ಪ್ರದೇಶವನ್ನು 371ನೇ ಕಲಂಮಿಗೆ ಸೇರಿಸಿದಲ್ಲಿ ಅಭಿವೃದ್ಧಿ ಸಾಧಿಸಬಹುದು ಎಂದು ಹೇಳಲಾಗಿದೆ. ಭಯೋತ್ಪಾದನೆಯ ಬೆದರಿಕೆ, ಸಂಭವನೀಯತೆಯನ್ನು ಎದುರಿಸಲು ವಿವರ ಯೋಜನೆ ಮತ್ತು ಸರ್ವ ಸಮ್ಮತ ಅಭಿಪ್ರಾಯ ರೂಪಿಸದೇ ಎನ್.ಎಸ್.ಜಿ. ಘಟಕವನ್ನು ರಾಜ್ಯದಲ್ಲಿ ಕೇಂದ್ರ ಸ್ಥಾಪಿಸಲಿಲ್ಲ ಎಂದು ದೂರಲಾಗಿದೆ. ಅಂದರೆ ಸರ್ಕಾರ ತಾನು ಮಾಡಬೇಕಾದ್ದನ್ನು ಮಾಡದೇ ಕೇವಲ ಕೇಂದ್ರ ಸರ್ಕಾರದ ಮೇಲೆ ದೂಷಣೆ ಮಾಡಿ ಹೊಣೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದೆ.

ಜಾಗತಿಕ ಆರ್ಥಿಕ ಕುಸಿತದಿಂದಾಗಿ ರಾಜ್ಯದ ಮೇಲೆ ಅಪಾರವಾದ ಹೊರೆ ಸಂಕಷ್ಟಗಳು ಬರುತ್ತಲಿದೆ. ಇದನ್ನು ಅಂದಾಜಿಸುವ, ಎದುರಿಸುವ ಕಾದೆಯೇ ಇಲ್ಲ. ತೆರಿಗೆ-ಆದಾಯ ಹಣ ಸಂಗ್ರಹ 5000 ಕೋಟಿಯಷ್ಟು ಕುಸಿದಿದ್ದರೂ ಕೋಟಿಗಳ ಧಾರಾಳ ದಾನದ ಘೋಷಣೆ ನಿಲ್ಲಲೇ ಇಲ್ಲ. ಈ ಅವಧಿಯಲ್ಲಿ ಕ್ರೈಸ್ತರ ಚರ್ಚ್‌ಗಳ ಮೇಲೆ ನಡೆದ ಧಾಳಿಗಳಾಗಲೀ, ಮುಸ್ಲಿಂ ಅಲ್ಪಸಂಖ್ಯಾತರ ಮೇಲಿನ ದಾಳಿಗಳು, ದಲಿತರ ಮೇಲಿನ ಹಲ್ಲೆ, ರೈತರ ಆತ್ಮಹತ್ಯೆ... ಕೋಮುಗಲಭೆ, ಎಬ್ಬಿಸುವ ಯತ್ನಗಳು, ವಿಸ್ತರಿಸುತ್ತಿರುವ ಸಂಘ ಪರಿವಾರದ ಭಯೋತ್ಪಾದನೆ ಇತ್ಯಾದಿಗಳನ್ನು ಎದುರಿಸುವ ಶಾಂತಿ, ಕೋಮು ಸೌಹಾರ್ದತೆ ಕಾಯುವ ಭರವಸೆಯನ್ನು ಇಲ್ಲಿ ನೀಡಲಾಗಿಲ್ಲ ಎಂಬುದೇ ಆತಂಕದ ವಿಷಯ. ಅಂದರೆ ಒಳಗೊಂದು, ಹೊರಗೊಂದು! ಅದರಂತೆ ರೇಷನ್ ಕಾರ್ಡ್ ಸಮಸ್ಯೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿ, ಅಸಂಘಟಿತರ ಸಮಸ್ಯೆ, ಇತ್ಯಾದಿಗಳು ಪ್ರಸ್ತಾವನೆಗೇ ಬಂದಿಲ್ಲ.

ಹೀಗೆ ಬಿಜೆಪಿ ಸರ್ಕಾರ ಕೇವಲ ರಂಗು ರಂಗಿನ ಪ್ರಚಾರಕ್ಕೆ ಆದ್ಯತೆ ನೀಡುತ್ತಿದೆಯಲ್ಲದೇ ಮೂಲ ಪ್ರಶ್ನೆಗಳನ್ನು ನಿರ್ಲಕ್ಷಿಸಿದೆ. ಈ ಮೂಲಕ ಅದು ಜನವಿರೋಧಿ ನಿಲುವನ್ನು ಬಹಿರಂಗಕ್ಕೆ ಬಂದಿದೆ.

ಕಲಾಪಗಳಿಗೆ ಸಮಯವನ್ನು ತೀರಾ ಕಡಿಮೆ ಇರಿಸಿ, ವ್ಯಾಪಕ ಚರ್ಚೆ, ಪ್ರಶ್ನೋತ್ತರಗಳನ್ನು ಮಿತಿಗೊಳಿಸಿರುವುದು ವಿರೋಧ ಪಕ್ಷಗಳ ಅವಕಾಶವನ್ನು ಕುಗ್ಗಿಸಿದೆ. ಇಂತಹ ಬರಿ ಪ್ರಚಾರದ ಕೋಟಿ ರೂಪಾಯಿಗಳ ಜನರ ತೆರಿಗೆ ಹಣದ ವೆಚ್ಚದ ಅಧಿವೇಶಗಳಿಂದ ಏನು ಪ್ರಯೋಜನ? ಅಧಿವೇಶನವನ್ನೂ ಲೋಕಸಭಾ ಚುನಾವಣಾ ಸ್ಟಂಟ್‌ಗೆ ಬಿಜೆಪಿ ಬಳಸುತ್ತಿರುವುದಕ್ಕೆ ಏನನ್ನಬೇಕು?


ಬಿಜೆಪಿಗೀಗ ಮೂರು ಭಾವಿ ಪ್ರಧಾನಿಗಳು



ಕರ್ನಾಟಕದಲ್ಲಿ 'ಮತಯಾತ್ರೆ'ಗೆ ಬಂದುಹೋದ ಭಾವಿ ಪ್ರಧಾನಿ ಹೆಗಲ ಮೇಲೆ ಮತ್ತಿಬ್ಬರು 'ಭಾವಿ'ಗಳು ಹತ್ತಿ ಕುಳಿತಿದ್ದಾರೆ! ಸಂಘ ಪರಿವಾರ ಪ್ರಣೀತರೊಬ್ಬರಾದರೆ, ಗುತ್ತೇದಾರಿ ಬಂಡವಾಳಗಾರರ ಪ್ರಶಂಸಿತ ಇನ್ನೊಬ್ಬರು! ರಾತ್ರಿ ಕಂಡ 'ಬಾವಿ'ಗೆ ಹಗಲು ಬೀಳಲಾದೀತೆ?

ಮೊನ್ನೆ ಮತ್ತೆ ಕರ್ನಾಟಕಕ್ಕೆ ಎಲ್.ಕೆ.ಅಡ್ವಾನಿ ಬಂದು ಹೋದರು. ಈ ಬಾರಿ ಅವರ ಭೇಟಿ ಯುವಜನರನ್ನು ಗುರಿಯಾಗಿಸಿತ್ತು. ಬೆಂಗಳೂರಿನಲ್ಲಿ ಸ್ವಾಮಿ ವಿವೇಕಾನಂದರ ಕಂಚಿನ ಪುತ್ಥಳಿ ಅನಾವರಣ, ಹುಬ್ಬಳ್ಳಿಯಲ್ಲಿ ಆರ್.ಎಸ್.ಎಸ್.ನ ಜನಸಂಘದ ನಾಯಕನಾಗಿದ್ದ ಜಗನ್ನಾಥರಾವ್ ಜೋಷಿ ಬಗೆಗಿನ ಪುಸ್ತಕದ ಬಿಡುಗಡೆ, ಎಂದಿನಂತೆ ಅಡ್ವಾನಿಯನ್ನು 'ಭಾವಿ' ಪ್ರಧಾನಿ ಎಂದು ಬಿಂಬಿಸುವಲ್ಲಿ, ಪ್ರಚಾರ ಸಂಘಟಿಸುವಲ್ಲಿ ಸಂಘಪರಿವಾರ ಹಿಂದೆ ಬೀಳಲಿಲ್ಲ.

ಲೋಕಸಭಾ ಚುನಾವಣಾ ಹಿನ್ನೆಲೆಯಲ್ಲಿ ಮುಖ್ಯ ಚುನಾವಣಾ ಆಯುಕ್ತರು ರಾಜ್ಯಕ್ಕೆ ಬಂದು ಹೋಗಿರುವುದರಿಂದ ಏಪ್ರಿಲ್ ಮೇ ತಿಂಗಳಲ್ಲಿ ಚುನಾವಣೆಗಳು ಖಚಿತವಾಗಿವೆ. ಎಲ್ಲಾ ಪಕ್ಷಗಳೂ ರಂಗ ತಾಲೀಮು ಆರಂಭಿಸಿವೆ. ಈ ಭಾವಿ ಪ್ರಧಾನಿ ನಿಜ ಪ್ರಧಾನಿ ಆಗಬೇಕೆಂದರೆ ಈ ಬಾರಿ ಬಿಜೆಪಿ ಪಕ್ಷ ವಿಪರೀತ ಕಸರತ್ತು ನಡೆಸಬೇಕು. ಉತ್ತರ ಭಾರತದ ಇತ್ತೀಚಿನ ಫಲಿತಾಂಶಗಳು, ಇತರೆಡೆ ಎನ್.ಡಿ.ಎ.ಗೆ ಬಲ ಸಿಗದೇ ದುರ್ಬಲವಾಗುತ್ತಿರುವುದು ಅದರ ಚಿಂತೆ ಹೆಚ್ಚು ಮಾಡಿದೆ. ಹೀಗಾಗಿ ಕರ್ನಾಟಕದಿಂದ ಜನರಿಗೆ ಮರಳು ಮಾಡಲು ಹೆಚ್ಚು ಅವಕಾಶಗಳಿದ್ದು, ಹೆಚ್ಚು ಲೋಕಸಭಾ ಸ್ಥಾನ ಕನಿಷ್ಠ 25 ಆದರೂ ಇಲ್ಲಿಂದಲೇ ಗಳಿಸಬಹುದೆಂಬ ಮಹದಾಸೆಯನ್ನು ಬಿಜೆಪಿ ಇರಿಸಿಕೊಂಡಿದೆ. ಹೀಗಾಗಿ ಅದು ತಮ್ಮ ಗಮನವನ್ನು ಇಲ್ಲಿಯೇ ವಿಪರೀತವಾಗಿ ಕೇಂದ್ರೀಕರಿಸಿದೆ.



ಅಖಿಲ ಭಾರತ ಮಟ್ಟದಲ್ಲಿ ಹಳೆ ಮತದಾರರನ್ನು ಉಳಿಸಿಕೊಳ್ಳುವುದೇ ಹೇಗೋ? ಆದರೆ ಹೊಸ ಮತದಾರರನ್ನೇ ಸೆಳೆಯಲು ಬಹಳ ನಾಜೂಕಿನ ತಂತ್ರ ಹೆಣೆದಿದೆ. ಯುವಜನರನ್ನು ಸೆಳೆಯುವುದೇ ಅವರ ಈ ಗುರಿ. ಹೀಗಾಗಿ 'ಏಕ್ ಕಾಮ್ ದೇಶ್‌ಕೆ ನಾಮ್' 'ದೇಶದ ಹೆಸರಿನಲ್ಲಿ ಒಂದು ಕೆಲಸ' ಎಂದು ಯುವಜನರನ್ನು ಆಕರ್ಷಿಸಲು ವಿಶೇಷವಾದ ಪ್ರಚಾರವನ್ನು ಕೈಗೊಂಡಿದೆ. ಕರ್ನಾಟಕದಲ್ಲಿ ಭಯೋತ್ಪಾದನೆ ವಿರುದ್ಧದ ಅಭಿಯಾನವನ್ನು ಮತೀಯತೆ ಆಧಾರದಲ್ಲಿ ಕೊಂಡೊಯ್ದು ವಿಭಜನೆ ತರಲು ಹೊಂಚು ಹಾಕಿ ಬಿಜೆಪಿ ಕ್ರಿಯಾರಂಗಕ್ಕೆ ಇಳಿದಿದೆ. ಹೀಗೆ ಯುವಜನರನ್ನು ಸೆಳೆಯಲು ಅದರ ಬತ್ತಳಿಕೆಯಲ್ಲಿ ಎಂತಹ ಬಾಣಗಳಿವೆಯೋ ಆತಂಕದಿಂದಲೇ ಗಮನಿಸಬೇಕಿದೆ.

ಅಂದ ಹಾಗೆ ಅಡ್ವಾನಿಯವರು ತಾವು ಪ್ರಶ್ನಾತೀತ ನಾಯಕರೆಂದು ಬಿಜೆಪಿ ಒಂದು ವೇಳೆ ಗೆದ್ದರೆ ತಾವೇ ಪ್ರಧಾನಿ ಎಂದೂ ಹೇಳುತ್ತಿದ್ದಾರೆ. ಆದರೀಗ ಅವರ ದನಿಯೂ ಕ್ಷೀಣವಾಗುತ್ತಿದೆ. ಅವರದೇ 'ಶಿಸ್ತಿನ ಪಕ್ಷ'ದಲ್ಲಿ ಮಾಜಿ ಉಪರಾಷ್ಟ್ರಪತಿ ಭೈರೋನ್‌ಸಿಂಗ್ ಶೆಖಾವತ್ ತಾನೇ ಹಿರಿಯನಾಗಿದ್ದು, ತಾನೇ ಪ್ರಧಾನಿ ಏಕಾಗಬಾರದು ಎಂದು ಧ್ವನಿ ಎತ್ತಿದ್ದಾರೆ. ಇದು ಒಂಟಿ ದನಿಯಲ್ಲ, ಸಂಘ ಪರಿವಾರದೊಳಗಿನ ಒಡಕು ದನಿಯದು ಎಂದು ಹೇಳಲಾಗುತ್ತಿದೆ. ಇಷ್ಟು ಸಾಲದು ಎಂದು ಗುಜರಾತ್‌ನ ಅಭಿವೃದ್ಧಿ ಮುಖವಾಡದ 'ನರಹಂತಕ ನರೇಂದ್ರ ಮೋದಿ'ಯೂ ಕೂಡ ತಾನೇ ಮುಂದಿನ ಪ್ರಧಾನಿ ಎಂದು ಬಿಂಬಿಸಿಕೊಳ್ಳುತ್ತಿದ್ದಾನೆ ಅಥವಾ ಬಿಂಬಿಸಲಾಗುತ್ತಿದೆ. ಮೇಲಾಗಿ ಈಗಾಗಲೇ ಅಂಬಾನಿ, ಮಿತ್ತಲ್‌ನಂತಹ ಭಾರತದ ಹಿರಿಯ ಗುತ್ತೇದಾರ ಬಂಡವಾಳಿಗರೂ ಮೋದಿಯನ್ನೇ ಶಿಫಾರಸ್ಸು ಮಾಡಿದ್ದಾರೆ! ಬಂಡವಾಳಗಾರರ ಲೂಟಿಗೆ ಮುಕ್ತ ಅವಕಾಶ ಕಲ್ಪಿಸುವ ಅಭಿವೃದ್ಧಿ ಮಾದರಿಯ ಮೋದಿ ಪ್ರಧಾನಿಯಾದರೆ ಆ ಅಧಿಕಾರವನ್ನು ಅವರಿಗೆ ಧಾರೆ ಎರೆಯಬೇಕಲ್ಲವೇ? ಫ್ಯಾಶಿಸಂ ಎಂಬುದು ಜನಾಂಗವಾದದ ಉಗ್ರ ಪ್ರತಿಪಾದಕನಾಗಿರುವುದೇ ಬಂಡವಾಳಶಾಹಿ ಸಾಮ್ರಾಜ್ಯಶಾಹಿಯನ್ನು ಸಮರ್ಥಿಸಲು ಬಲಗೊಳಿಸಲು.

ಭಾವಿ ಪ್ರಧಾನಿಗಳ ಸಂಖ್ಯೆ ಹೆಚ್ಚಳವಾದ ಈ ಸಂಗತಿಗಳು ರಾಜ್ಯಕ್ಕೆ ಬಂದಿದ್ದ ಅಡ್ವಾಣಿಯ ಬೆನ್ನು ಹತ್ತಿ ಬೇತಾಳನಂತೆ ಕಾಡಿವೆಯಂತೆ. ಆದಾಗ್ಯೂ ಸಂಘ ಪರಿವಾರ ಜನರಲ್ಲಿ ಇಂತಹ ಗೊಂದಲ ಸೃಷ್ಟಿಸಿ ಮತ ಸೆಳೆಯಲು ಯತ್ನ ನಡೆಸುವುದಿಲ್ಲ ಎಂದು ಹೇಳಲಾಗದು. ಮತ್ತೆ ರಾಜ್ಯಕ್ಕೆ ಅಡ್ವಾನಿ ಬಂದರೆ ಬರಿಗೈಯಲ್ಲಿ ಕಳಿಸಬೇಕಲ್ಲವೇ? ○

ಎಲ್ಲವೂ ಕೋಟಿಗಳ ಲೆಕ್ಕದಲ್ಲೇ....

ಯಡಿಯೂರಪ್ಪನವರ ಸರ್ಕಾರ ಎರಡುನೂರು ದಿನಗಳನ್ನು ಪೂರೈಸಿದೆ. ಬಹುಮತ ಪಡೆದು ಬೀಗುತ್ತಿದೆ. ಹಿಂದೆ ನೂರು ದಿನಗಳಿಗೇ ನಭೋ ಮಂಡಲ ಬಿರಿಯುವಂತೆ ಪ್ರಚಾರಿಸಿಕೊಂಡಿದ್ದ ಬಿಜೆಪಿ ಯಡಿಯೂರಪ್ಪನವರು ಈಗೇಕೆ ಮೌನವಾಗಿದ್ದಾರೆ? ಹೇಳಿಕೊಳ್ಳುವಷ್ಟು ಏನೂ ಇಲ್ಲವೆಂದೇ ಅಥವಾ ಏನನ್ನಾದರೂ ಹೇಳಿಕೊಂಡರೆ ಜನ ನಂಬಬೇಕಲ್ಲಾ ಎಂಬ ಆತಂಕವೇ? ಆದಾಗ್ಯೂ ಈ ಎರಡು ನೂರು ದಿನಗಳಲ್ಲಿ ಮತ್ತೇ ಭರವಸೆಗಳು, ಬೊಗಳೆಗಳೇ. ಆದರೆ ಸಂಘ ಪರಿವಾರದ ಗುಪ್ತ ಅಜೆಂಡಾಗಳನ್ನು ಈ ಸರ್ಕಾರ ದಿನದಿನದಿಂದ ದಿನಕ್ಕೆ ಹೆಚ್ಚು ಹೆಚ್ಚಾಗಿ ಜಾರಿಗೊಳಿಸಲಾಗುತ್ತಿದೆ. ಮಾಡಿದ ಜನವಿರೋಧಿ ಕೆಲಸಗಳನ್ನು ಸಮರ್ಥಿಸಿಕೊಳ್ಳುತ್ತಿದೆ. ಕಳಂಕಿತ ಸಚಿವರನ್ನು ಹೊತ್ತೊಯ್ಯುತ್ತಿದೆ. ಭಿನ್ನಮತ ವ್ಯಕ್ತಪಡಿಸಿದವರ ಮೇಲೆ ಬ್ರಹ್ಮಾಸ್ತ್ರಗಳನ್ನೇ ಬಳಸುತ್ತಿದೆ. ಈಗ ಮುಖ್ಯಮಂತ್ರಿಗಳು ಬೆಂಗಳೂರಿನ ರಸ್ತೆಗಳಲ್ಲಿ ಗಸ್ತು ತಿರುಗುತ್ತಿದ್ದಾರೆ. ಒಂದೆಡೆ ಲೋಕಸಭಾ ಚುನಾವಣೆ ಇನ್ನೊಂದೆಡೆ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗಳ ನಿರೀಕ್ಷೆ! ಅದಕ್ಕೆ ಮತದಾರರ ಮೇಲೆ ಎಲ್ಲಿಲ್ಲದ ಪ್ರೀತಿ. ಹೀಗಿರುವಾಗ 200 ದಿನಗಳ ಅವರ ಆಡಳಿತ ವೈಖರಿ, ಸೃಷ್ಟಿಸಿದ ಸಮಸ್ಯೆ, ಸಂಕಷ್ಟಗಳನ್ನು ಜನ ಮುಖ್ಯಮಂತ್ರಿಗಳು ಬಂದಾಗ ಸುರಿದು ಹಾಕುತ್ತಿದ್ದಾರೆ. ಆದರೆ ಎಲ್ಲಾ ಭರವಸೆ, ಭಾರಿ ಆಶ್ವಾಸನೆ, ಎಲ್ಲವೂ ಕೋಟಿಗಳ ಲೆಕ್ಕದಲ್ಲಿ. ○

ಯಾವ ಹುತ್ತದಲ್ಲಿ ಯಾವ ಹಾವ್ರೋ ?

ಯುದ್ಧಗಳ ಮಾತಿನ ಕಾವು ಕಮ್ಮಿಯಾದರೂ ಅದು ಇನ್ನೂ ಮಾರ್ಧನಿಸುತ್ತಲೇ ಇದೆ. ಅಲ್ಲಲ್ಲಿ 'ಯುದ್ಧ ಬೇಡ ರಾಜತಾಂತ್ರಿಕ ಮಾರ್ಗವಿದೆ' ಎಂಬ ವಿವೇಕದ ನುಡಿಗಳು ಕೇಳಿಬರುತ್ತಿದ್ದರೂ ಉದ್ವಿಗ್ನ ಪರಿಸ್ಥಿತಿ ಎಂಬ ಹುಲ್ಲಿನ ಬಣವೆ ಬಳಿ ಬೆಂಕಿಕಡ್ಡಿ ಗೀರಲು ಕುಂತವರು ಚಳಿ ಕಾಯಿಸಿಕೊಳ್ಳಲು ಕಾದಿದ್ದಾರೆ.

ದೇಶದುದ್ದಗಲ ಜನವರಿಯ ಶೀತಗಾಳಿ ಬೀಸುತ್ತಿದೆ. ಪತ್ರಿಕೆ ಪುಟ ತಿರುವಿ ಹಾಕಿದರೆ ಮಂಡ್ಯದಲ್ಲಿ ಲಾರಿ ಪ್ರಹಾರದ ಸುದ್ದಿ. ಸೈನಿಕರ ನೇಮಕಾತಿಯ ಸುದ್ದಿ ಕೇಳಿ ದೂರದ ಊರುಗಳಿಂದ ಬಂದ ಯುವಕರು 'ಹೊರ ಜಿಲ್ಲೆಗಳವರಿಗೆ ಸಂದರ್ಶನ ಇಲ್ಲ' ಅಂದರೆ ಬಿಡುತ್ತಾರಾ? ಹಾಗಂತ ಜಾಹಿರಾತಿನಲ್ಲಿ ಯಾಕೆ ಹಾಕಿಲ್ಲ ಅಂತ ಕೇಳಿದ್ದಾರೆ. ಪಾಪ ಸಂದರ್ಶನ ಮಾಡುವುದಿಲ್ಲ ಎಂದಾಗ ಎಷ್ಟು ನಿರಾಶೆಯಾಗಿರಬಹುದು. ಕೊನೆಗೆ ಲಾರಿ ಪ್ರಹಾರ. ಚಳಿಗಾಲಕ್ಕೆ ಬಿಸಿಬಿಸಿ ಉಡುಗೊರೆ. ಸೈನ್ಯಕ್ಕೆ ಸೇರಲಾಗದಿದ್ದರೆ ಯಾಕಿಷ್ಟು ನಿರಾಶೆ.

ಯುದ್ಧದ ಕಿಡಿಹಾರುವ ಹೊತ್ತಲ್ಲೂ ಸೈನ್ಯಕ್ಕೆ ಸೇರಲು ಅದೇನು ಉತ್ಸಾಹ!? 'ಶತ್ರು'ಗಳ ದಾಳಿಯಿಂದ ದೇಶ ರಕ್ಷಿಸುವ ರಣೋತ್ಸಾಹವೋ. ಇಲ್ಲ ಕೇವಲ ಹೊಟ್ಟೆ ಪಾಡಿನ ದಾರಿಯೋ? ಏನಾದರೂ ಇರಲಿ ಒಟ್ಟಾರೆ ಸಂದರ್ಶನವಂತೂ ಆಗಲಿಲ್ಲ.

ಉತ್ತರ ಪ್ರದೇಶದಿಂದ ಒಂದು ಸುದ್ದಿ ಜನವರಿ 8, ಶುಭ ಶುಕ್ರವಾರದಂದು ಚಳಿ ತಡೆಯಲಾರದೆ 'ಮೈ ತಣ್ಣ'ಗಾಗಿ ಹೋದವರು ಒಟ್ಟು 18 ಮಂದಿ. ಉಡಲು ತೊಡಲು ಬೆಚ್ಚನೆ ಬಟ್ಟೆ, ಹೊಟ್ಟೆ ತುಂಬ ರೊಟ್ಟಿ ಸಿಕ್ಕರೆ ನಡುಗಿಸುವ ಚಳಿ ಗಾಳಿಯನ್ನು ಎದುರಿಸುವ ಕಸುವು ಬಂದೀತು. ಇಲ್ಲ. ತುತ್ತಿಗೂ ತತ್ವಾರ ಎನ್ನುವ ಮಂದಿ, ಮನೆಯಿಲ್ಲದೇ, ದೇಗುಲದ ಜಗಲಿಯಲ್ಲಿ, ಸೇತುವೆ ಕೆಳಗೆ, ಮುಚ್ಚಿದ ಅಂಗಡಿ ಸಾಲುಗಳ ಬಾಗಿಲ ಮುಂದಿನ ಕಟ್ಟೆಗಳ ಮೇಲೆ ತಲೆಯಿಟ್ಟು ಮಲಗಿದ ಎಷ್ಟೋ ಜನಕ್ಕೆ ಬೆಳಕು ಹರಿಯುವುದೇ ಇಲ್ಲ?

ಯುದ್ಧ ಇಂಥವರಿಗೇನು ಕೊಟ್ಟೀತು. ರೊಟ್ಟಿಯನ್ನೇ? ಕೌದಿಯನ್ನೇ? ಗ್ರನೇಡು. ಬಾಂಬುಗಳು ಸಿಡಿವ ನಾಡಿನಲ್ಲಿ ಚಳಿಯಾದರೂ ಕಡಿಮೆಯಾದೀತೇ?

ಯುದ್ಧ - ಅದೊಮ್ಮೆ ಶುರುವಾದರೆ ಕನಿಷ್ಟ ಮೈಮರಗಟ್ಟಿ ಶೀತ ಸಮಾಧಿಯಾದವರ ಸಾವು ಹೀಗೆ ಪತ್ರಿಕೆಯ ಪುಟಗಳಲ್ಲಿ ಸುದ್ದಿಯಾಗಿ ಓದುಗರನ್ನು ಕಾಡುವುದಿಲ್ಲ. ಅಲ್ಲಿ ದೇಶಭಕ್ತ ಸೈನಿಕರ ಹೆಣಗಳ ಸಾಲುಗಳಿರುತ್ತವೆ. ದೇಶಕ್ಕಾಗಿ ಸತ್ತವರ ಮುಂದೆ ಚಳಿಯಿಂದ ಸತ್ತವರಿಗಾಗಿ ಶಿಲಾಶಾಸನ ಕೆತ್ತುವುದುಂಟೆ?

'ಕ್ಷೌರ ಉದ್ಯಮದ ಮೇಲೆ ಬಹುರಾಷ್ಟ್ರೀಯ ಕಂಪನಿಗಳು ದಾಳಿ ಮಾಡಿವೆ. ಕ್ಷೌರದಂಗಡಿ ತೆರೆಯಲು ಅವರಿಗೆ ಬಿಡಬೇಡಿ' ಅಂತ ಸವಿತಾ ಸಮಾಜದ ಸಾವಿರಾರು ಜನ ಬೆಂಗಳೂರಿನಲ್ಲಿ ಧಿಕ್ಕಾರ ಕೂಗಿದ್ದಾರೆ. ಪಾರಂಪರಿಕ ವೃತ್ತಿಯನ್ನು ತೊರೆದು ಬೇರೆ ಬೇರೆ ಉದ್ಯೋಗಗಳಿಗೆ ತೆರಳಿದವರು ಎಷ್ಟೋ ಮಂದಿ ಇದ್ದರೂ, ಹೊಟ್ಟೆಪಾಡಿಗಾಗಿ ಅದೇ ವೃತ್ತಿ ಪರಂಪರೆಯ ತೇರು ಎಳೆಯುತ್ತಿರುವವರದೂ ದೊಡ್ಡ ಸಂಖ್ಯೆಯೇ. ರಾಜ್ಯದಲ್ಲಿ 40 ಲಕ್ಷ ಜನ ಸವಿತಾ ಸಮಾಜದವರಿದ್ದಾರಂತೆ. ಅದರಲ್ಲಿ 25 ಲಕ್ಷ ಜನರಾದರೂ ಇದೇ ವೃತ್ತಿಯಿಂದ ಬರುವ ಆದಾಯವನ್ನು ಅವಲಂಬಿಸಿದ್ದಾರಂತೆ.

ಭಾರತಕ್ಕೂ, ಪಾಕಿಸ್ತಾನಕ್ಕೂ ಯುದ್ಧವಾದರೆ ಇವರಿಗೇನಾದರೂ ಲಾಭವಿದೆಯೇ? ವೃತ್ತಿ ಪರಂಪರೆಯ ತೇರು ಎಳೆಯುವುದನ್ನು ಬಿಟ್ಟು ಬದಲಿ ದಾರಿಯಲ್ಲಿ ಹೊರಟ ಸವಿತಾ ಸಮುದಾಯದ ಕೆಲವರಾದರೂ ಮಂಡ್ಯದಲ್ಲಿ ಶುಭ ಶುಕ್ರವಾರ ಲಾರಿ ಏಟು ತಿಂದವರಲ್ಲಿದ್ದಾರೆಯೇ? ಇರಬಹುದೇನೋ ಗೊತ್ತಿಲ್ಲ. ಕ್ಷೌರ ಮಾಡುವುದು, ದೇಶಪ್ರೇಮದ ಕೆಲಸವೇ ಅಲ್ಲವೇ? ಯುದ್ಧ ಮಾಡಿ ಕೊಲ್ಲುವು ದೇಶಪ್ರೇಮವಾದರೆ ಕ್ಷೌರ ಮಾಡುವುದೂ ದೇ ಪ್ರೇಮ ಯಾಕಾಗಬಾರದು?

ಯುದ್ಧ ನಡೆದರೆ ನೇಮಕಾತಿ ಬೇಗ ಬ ಆಗಬಹುದೇ? ಯುದ್ಧ ಉದ್ಯೋಗ ಹೆಚ್ಚಿಸುವುದೇ? ಯುದ್ಧವೂ ಒಂದು ಉದ್ಯಮವ

ಅಗೋ ಅಮೇರಿಕದ ದೊಡ್ಡಣ್ಣ. ನ ಮನೆಯೊಳಗೆ ಹೇಗೆ ಮೂಗು ತೂರಿಸುತ್ತಿದ್ದಾ ಅವನೀಗ ನ್ಯಾಯಪೀಠದಲ್ಲಿ ಕುಳಿತ ನ್ಯಾಯಾಧೀ ಯುದ್ಧವಾದರೆ ಶಸ್ತ್ರದ ವ್ಯಾಪಾರ. ಸಂಧಾನವಾದ ನ್ಯಾಯದ ವ್ಯಾಪಾರ.

ಅಲ್ಲಿ ಪಾಲಿಸ್ಟೈನ್‌ನಲ್ಲಿ ಮನೆ, ಆಸ್ಪತ್ರೆ, ಶಾಲೆ ಮೇಲೆ ಬಾಂಬು, ಗ್ರನೇಡು ಸುರಿದು ಹೆಂಗಸ ಮಕ್ಕಳು, ಅಸಹಾಯಕರ ರಕ್ತ ನೆಕ್ಕುತ್ತಾ ಇಸ್ರೇ ಸೇನೆ ಕುಣಿಯುತ್ತಿದ್ದರೆ ಇಲ್ಲಿ 'ಸಂಶೋಧ ಡಾ.ಎಂ.ಚಿದಾನಂದಮೂರ್ತಿಗಳು ಇಸ್ರೇಲಿ ಸೈನ ದಕ್ಷತೆ, ಶಿಸ್ತು, ಅವರ ಗುರಿಯ ಕರಾರುವಾಕ್ಕತನ ಭಾರತಕ್ಕೂ ಮಾದರಿ ಅಂತ ವಿ.ಕ. ಪತ್ರಿಕೆ ಲೇಖನದಲ್ಲಿ ಸಂಶೋಧನಾತ್ಮಕ ಷ ಬರೆಯುತ್ತಿರುವಾಗ ಇವರಿಗೂ ಯಾವುದಾ ಅಮೇರಿಕದ ವಿ.ವಿ.ಯ ಡಾಕ್ಟರೇಟ್ ಸಿಗಬಹು ಅನಿಸುತ್ತಿದೆ? ಸಿಗಬಹುದೇನೋ ಯಾರು ಬಲ್ಲ ಸಿಐಎ ಮಹಿಮೆ! ಯಾರು ಬಲ್ಲರು ಯಾವ ಹುತ್ತ ಯಾವ ಹಾವೋ?

ಭಯೋತ್ಪಾದನೆ, ರಾಜಕೀಯ, ಧರ್ಮ, ಬಿಸಿನೆಸ್ಸು

'ದಿನಕ್ಕೊಂದು ಕಂಪನಿ ಮುಳುಗಿ ಹೋಗ್ತಿದೆ. ಎಲ್ಲಾ ಬಿಸಿನೆಸ್ಸೂ ಎಕ್ಕುಟ್ಟೋಗಿ ಎಲ್ಲಾ ಪಾಪರ್ ಚೀಟಿ ತಗೋತಿವೆ. ಸರಿಯಾಗಿ ನಡಿತಿರೋ ಬಿಸಿನೆಸ್ಸು ಅಂದ್ರೆ, ಅದೊಂದೇ ನೋಡು'.

'ಅದ್ಯಾವುದು ಗುರು ಇಷ್ಟೆಲ್ಲಾ ಅವಾಂತರದಲ್ಲೂ ಸರಿಯಾಗಿ ನಡಿತಿರೋ ಬಿಸಿನೆಸ್ಸು'?

'ಅದೇ ಕಣಪಾ ಶಿಷ್ಯ, ಭಯೋತ್ಪಾದನೆ ಬಿಸಿನೆಸ್ಸು. ಅದೊಂದೇ ಕರಕ್ಕಾಗಿ ನಡೀತಿರೋದು?.

'ಇದೇನಪ್ಪಾ ಗುರುವೇ ಹೊಸಾ ವರಸೆ ತೆಗೆದಿದಿಯಾ'?

''ಹೊಸದೂ ಎಲ್ಲ ಏನೂ ಇಲ್ಲ, ಮೊದಲಿನಿಂದಲೂ ಈ ಭಯೋತ್ಪಾದನೆ ಅನ್ನೋದು ಒಂದು ಮಲ್ಟಿನ್ಯಾಶನಲ್ ಬಿಸಿನೆಸ್ಸೇ. ಇದರ ಹೆಡ್ಡು, ಹೆಡ್ಡಾಫೀಸೂ ಎಲ್ಲಾ ಎಲ್ಲಾ ಆ ಅಮೆರಿಕವೇ.?

'ನೀನು ಏನು ಹೇಳ್ತಿದಿಯೋ ಅರ್ಥ ಆಗ್ತಿಲ್ಲ ಗುರು'.

'ಅರ್ಥ ಆಗ್ತಿಲ್ವಾ' 'ಅ ಆ ಇ ಈ ಇಂದ ಶುರು ಮಾಡೋಣ, ನಿನ್ನ ಪ್ರಕಾರ ಬಿಸಿನೆಸ್ಸು ಅಂದ್ರೇನು'?

'ಬಿಸಿನೆಸ್ಸು ಅಂದ್ರೆ ವ್ಯಾಪಾರ'

'ಒಂದು ವಾಕ್ಯದ ಉತ್ರ ಅಲ್ಲ, ಸ್ವಲ್ಪ ಡೀಟೈಲಾಗಿ ಹೇಳು'.

'ಅದೇ, ಬಂಡವಾಳ ಹೂಡೋದು, ವಸ್ತುಗಳನ್ನು ಉತ್ಪಾದನೆ ಮಾಡೋದು, ಅದರ ವಿತರಣೆ, ಮಾರಾಟ ಮಾಡೋದು ಲಾಭ ಪಡೆಯೋದು'.

'ಕರೆಕ್ಟ್, ಸರಿಯಾಗಿ ತಿಳ್ಕೊಂಡಿದೀಯ ಶಿಷ್ಯ. ಈಗ ಹೇಳು ಬಂಡವಾಳ ಹೂಡಿ ಶಸ್ತ್ರಾಸ್ತ್ರಗಳನ್ನು ತಯಾರಿಸಿದವರು ಏನು ಮಾಡಬೇಕು'?

'ಮಾರಬೇಕು, ಸರಕಾರಗಳಿಗೆ ತಾನೆ ಶಸ್ತ್ರಾಸ್ತ್ರಗಳನ್ನು ಮಾರೋದು'?.

'ಸರಿ, ಸರ್ಕಾರಗಳು ಶಸ್ತ್ರಾಸ್ತ್ರಗಳನ್ನು ಖರೀದಿಸೀ, ಖರೀದಸೀ ಇಟ್ಟುಕೊಳ್ಳುತ್ತವೆ. ಅವು ಬಳಕೆಯಾಗದೆ ಹೋದರೆ ಏನಾಗುತ್ತೆ? ಸರಕಾರಗಳು ಶಸ್ತ್ರಾಸ್ತ್ರಗಳನ್ನು ಖರೀದಿ ಮಾಡುವುದು ಕಡಿಮೆಯಾಗುತ್ತೆ. ?

ಕ್ವಾಟ್ಲೆ
ಶ್ರೀ

'ಹೌದು ಗುರು, ವ್ಯಾಪಾರ ಕಡಿಮೆಯಾದರೆ, ಶಸ್ತ್ರಾಸ್ತ್ರಗಳನ್ನು ತಯಾರು ಮಾಡಿದವರಿಗೆ ನಷ್ಟ ಆಗುತ್ತೆ.'

'ಸರಿಯಾಗಿ ಹೇಳಿದೆ ಶಿಷ್ಯ. ಅದಕ್ಕೆ ಈ ಶಸ್ತ್ರಾಸ್ತ್ರಗಳನ್ನು ತಯಾರಿಸಿದೋರು ಏನ್ಮಾಡಿದ್ರೂ' ಪುಂಡರು ಪೋಕರಿಗಳು, ಕೇಡಿಗಳಿಗೆ ಫ್ರೀಯಾಗಿ ಶಸ್ತ್ರಾಸ್ತ್ರಗಳನ್ನು ಕೊಟ್ಟು, ಅವರನ್ನು ಬೆಳೆಸಿದರು. ಆಗೇನಾಯ್ತು ಅಂದ್ರೆ, ಆ ಕೇಡಿಗಳು ಆ ಶಸ್ತ್ರಾಸ್ತ್ರಗಳನ್ನು ಬಳಸಿ ಅಂದರೆ, ಭಯೋತ್ಪಾದನೆ ಮಾಡಿ, ಹಣ ಸಂಪಾದಿಸಿ ಇನ್ನಷ್ಟು ಮತ್ತಷ್ಟು ಶಸ್ತ್ರಾಸ್ತ್ರಗಳನ್ನು ಖರೀದಿಮಾಡಲು ಶುರುಮಾಡಿದರು.'

'ಓ ಓಂಗಾ ಕತೆ,'?

'ಹೌದು ಮತೆ, ಈ ಕೇಡಿಗಳು, ದುಷ್ಟರನ್ನು ಎದುರಿಸಲು ಸರಕಾರಗಳೂ ಶಸ್ತ್ರಾಸ್ತ್ರಗಳನ್ನು ಬಳಕೆ ಮಾಡಬೇಕಾಯಿತು. ಅವೂ ಇನ್ನಷ್ಟು ಹೆಚ್ಚು ಹೆಚ್ಚು ಶಸ್ತ್ರಾಸ್ತ್ರಗಳನ್ನು ಕೊಳ್ಳಬೇಕಾಯಿತು.'

'ಹೌದು ಗುರು ಹಾಗೇ ಕೆಲವು ದೇಶಗಳೇ ಇಂಥ ದುಷ್ಟರ ಕೈಗೆ ಸಿಕ್ಕು ಅವು ಇತರ ದೇಶಗಳ ಮೇಲೆ ಯುದ್ಧವನ್ನೆ ಮಾಡುತ್ತವೆ. ಯುದ್ಧ ಅಂದ ಮೇಲೆ ಈ ಶಸ್ತ್ರಾಸ್ತ್ರಗಳನ್ನು ತಯಾರಿಸೋರಿಗೆ ಸುಗ್ಗಿ. ಹೀಗೇ ನೋಡು ಅವರಿಗೆ ಒಳ್ಳೆ ಬಿಸಿನೆಸ್ಸು.'

'ಆದ್ರೆ ಗುರು ಈ ಭಯೋತ್ಪಾದನೆ ಅಂದ್ರೆ, ಶಸ್ತ್ರಾಸ್ತ್ರಗಳ ಬಿಸಿನೆಸ್ ಮಾತ್ರನಾ'?

'ಅಷ್ಟು ಸರಳ ಅಲ್ಲ ಶಿಷ್ಯ, ಇದೂ ಒಂದು ಮುಖ ಅಷ್ಟೆ, ಬೇರೆ ಬೇರೆ ಥರ ಭಯೋತ್ಪಾದನೆ ಮಾಡೋರೂ ಇದಾರೆ, ಈ ಭಯೋತ್ಪಾದನೆ ಹೆಸರು ಹೇಳಿಕೊಂಡು ಲಾಭ ಮಾಡ್ತಿರೋರು ಇದಾರೆ.'

'ಅಬ್ಬಬ್ಬಾ, ಭಯೋತ್ಪಾದನೆ ಹೆಸರಲ್ಲೂ ಲಾಭ ಮಾಡ್ತಾರ'?

'ಹೌದು, ಶಿಷ್ಯ, ಯಾರೋ ನಿಮ್ಮನ್ನೆಲ್ಲಾ ಮತಾಂತರ ಮಾಡಿಬಿಡ್ತಾರೆ, ಯಾರದೋ ಜನಸಂಖ್ಯೆ ಜಾಸ್ತಿಯಾಗಿ ನೀವೆಲ್ಲಾ ಕಡಿಮೆಯಾಗಿ, ನಿರ್ನಾಮ ಆಗಿ ಹೋಗ್ತೀರ. ಗುಮ್ಮ ಬಂತು ಗುಮ್ಮ ಅಂತ ಜನಗಳಿಗೆ ಭಯ ಪಡಿಸೋದು ಅದನ್ನೇ ಹೇಳೀ, ಹೇಳೀ, ಜನರ ಮನಸ್ಸಿನಲ್ಲಿ ಭಯ ಹುಟ್ಟಿಸುವುದು ಭಯೋತ್ಪಾದನೆ ಅಲ್ಲವೇ ಶಿಷ್ಯಾ'?.

'ಛೇ, ಇದು ನಾನು ಒಪ್ಪಲ್ಲ ಗುರು, ಇದು ಅಧಿಕಾರ ಹಿಡಿಯಲು ನಡೆಸುವ ರಾಜಕೀಯ ಅಲ್ವೇ'?

'ಅಧಿಕಾರ ಪಡೆದ ಮೇಲೆ ತಮ್ಮ ಪಕ್ಷದ ಪರಿವಾರದ ಕಾರ್ಯಕರ್ತರಿಗೆ ಸರ್ಕಾರದ ಹಣವನ್ನು ಅಂದರೆ ಜನರ ಹಣವನ್ನು ಕಳ್ಳೆ ಪುರಿ ಹಾಗೆ ಹಂಚೋದು ರಾಜಕೀಯವೋ ಬಿಸಿನೆಸ್ಸೋ'?

'ನೀನು ಯಾವ ವಿಷಯ ಹೇಳ್ತಿದೀಯ ಗುರು'

'ಅದೇ, 'ಭಯೋತ್ಪಾದನೆ ವಿರುದ್ಧ ತಮಾಷೆ' ಅದೂ ಇದೂ ಅಂತ ಹೇಳಿ, ಚಡ್ಡಿ ಹುಡುಗರಿ ಐದು ಕೋಟಿ ರೂಪಾಯಿ ಕೊಟ್ಟಿದ್ದಾರಲ್ಲ ಅ ಬಗ್ಗೆ.'

'ಏ ಅದು ಧರ್ಮ ಕಾರ್ಯ ಗುರು, ಪಕ್ಷಕ್ಕ ದುಡಿಯುವವರ ಋಣ ತೀರಿಸುವುದು ಧರ್ಮ ಅಲ್ಲವೇ'?

'ಛೀ, ಛೆ, ಛೀ. ಭಯೋತ್ಪಾದನೆ, ರಾಜಕೀಯ ಧರ್ಮ, ಬಿಸಿನೆಸ್ಸು ಎಲ್ಲ ಸೇರಿಸಿ ನನಗೇ ಗೊಂದಲ ಮಾಡಬೇಡ. ಆ ಚಡ್ಡಿ ಹುಡುಗರು ಭಯೋತ್ಪಾದನ ವಿರುದ್ಧ ತಮಾಷೆ ಮಾಡಬೇಕೋ' ಸೀಟಿ ಸೀಟು ಗಳನ್ನು ಸರ್ಕಾರ ಖಾಸಗಿಯವರಿಗೆ ಮಾರಿ ಕೊಂಡಿದ್ದರ ಬಗ್ಗೆ ಹೋರಾಟ ಮಾಡಬೇಕೋ'

'ಈಗ ಸರಕಾರದ ಹಣವನ್ನು ಚನ್ನಾಗಿ ತಿಂದು ಕೊಬ್ಬಿದರೆ, ಆಮೇಲೆ ಬೇರೆ ಪಕ್ಷದ ಸರಕಾರದ ವಿರುದ್ಧ ಹೋರಾಡಬಹುದು.'

'ಅಂದರೆ ಚಿಡ್ಡಿ ಹುಡುಗರು ಮಾಡುವುದು ಹೋರಾಟ ಅಲ್ಲ ರಾಜಕೀಯ' ಅದೂ ಧರ್ಮದ ಹೆಸರಿನಲ್ಲಿ. ಇದು ಭಯೋತ್ಪಾದನೆ ಅಲ್ಲವೇ'?


'ಅಯ್ಯೋ, ಮತ್ತೆ, ಭಯೋತ್ಪಾದನೆ ರಾಜಕೀಯ, ಧರ್ಮ, ಬಿಸಿನೆಸ್ಸು ಎಲ್ಲಾ ಸೇ ಗೊಂದಲ ಶುರುವಾಯ್ತು, ನಡೀ ಗುರು ಕಾಫಿ ಕುಡಿಯೋಣ.'

ಅದು ಲಜ್ಜಗೇಡಿ ಸರ್ಕಾರ... ಮೊಳಗಿತ್ತು ಅಲ್ಲಿ ಧಿಕ್ಕಾರ

ಗಳೂರಿನ ಮಹಾತ್ಮಗಾಂಧಿ ಪ್ರತಿಮೆ, ಬನ್ನಪ್ಪ ಾರ್ಕ್, ಪುರಭವನದ ಮೆಟ್ಟಿಲು, ಇವು ರಾಜ್ಯದಲ್ಲಿ ಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಹೆಚ್ಚು ಚ್ಚು ಪ್ರತಿಭಟನೆಗಳಿಗೆ ಸಾಕ್ಷಿಯಾಗುತ್ತಿವೆ. ಂಥದೊಂದು ತೀವ್ರ ಪ್ರತಿಭಟನೆ ಜನವರಿ 12, 009ರಂದು ಟೌನ್‌ಹಾಲ್ ಮುಂಭಾಗದಲ್ಲಿ ಡೆಯಿತು. ತುಂಬಾ ಪೂರ್ವ ತಯಾರಿಯೊಂದಿಗೆ ಡೆದ ಕಾರ್ಯಕ್ರಮವೇನಲ್ಲ. ಆದರೂ ಜನರು ಂದರು. ನಿರೀಕ್ಷೆಗೂ ಮೀರಿ ಬಂದರು. ಹೌದು ಆ ಷಯವೇ ಅಂಥದ್ದು. ಪತ್ರಿಕೆಗಳಿರುವುದಾದರೂ ಯಾತಕ್ಕೆ? ಸಮಾಜದ ಓರೆಕೋರೆ ಬಿಂಬಿಸಿ ಅದನ್ನು ಮಾಜದ ಗಮನಕ್ಕೆ ತಂದು ಸರಿಮಾಡಿಕೊಂಡು ಮುಂದೆ ಹೋಗುವುದಕ್ಕಲ್ಲವೇ? ಆಳುವವರು ಅಧಿಕಾರಸ್ಥರು ಮಾಡುವ ತಪ್ಪುಗಳು, ಸಮಾಜಕ್ಕೆ ಆಗುವ ಹಾನಿಗಳಿಗೆ ಕನ್ನಡಿ ಹಿಡಿಯುವುದಲ್ಲವೇ ು ಕೆಲಸ.

ಅದನ್ನೆಲ್ಲಾ ಮಾಡಬೇಡಿ, ಮಾಡಿದರೆ ನೋಡಿ ಡಿಯುತ್ತೇವೆ ಅನ್ನುತ್ತಾರೆ ಅಧಿಕಾರಸ್ಥರು. ಅದರಲ್ಲೂ ಈ ಅಧಿಕಾರಸ್ಥರಿಗೆ ಕೋಮುವಾದದ ಮದ ತಲೆಗೇರಿ ಬಿಟ್ಟಿದ್ದರಂತೂ ಮುಗಿಯಿತು. ಈಗ ಹೀಗೆ ಆಗಿರುವುದು. ಆ ಕರಾವಳಿ ಅಲೆಯ ಕತ್ತು ಹಿಸುಕಲು ನಿಂತು ಬಿಟ್ಟಿದೆ ರಾಜ್ಯದ ಲಜ್ಜೆಗೇಡಿ ಬಿಜೆಪಿ ಸರ್ಕಾರ. ಅದಕ್ಕೆ ಎಲ್ಲರೂ ಸೇರಿ ಹೇಳಿದ್ದು ಅಲ್ಲಿ ಧಿಕ್ಕಾರ.

'ಜನಶಕ್ತಿ' ಬಳಗ, ಸಮುದಾಯ, ಎಸ್‌ಎಫ್‌ಐ, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆ, ಸಿಪಿಐ(ಎಂ), ಸಿಐಟಿಯು, ಪ್ರಾಂತ ರೈತ ಸಂಘ, ಪ್ರಾಂತ ಕೂಲಿಕಾರರ ಸಂಘ, ಟಿಪ್ಪುಸುಲ್ತಾನ್ ಸಂಯುಕ್ತರಂಗ, ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್) ಹೀಗೆ ವಿವಿಧ ಸಂಘಟನೆ, ಚಳುವಳಿಗಳ ಕಾರ್ಯಕರ್ತರು, ಮುಖಂಡರು ಅಲ್ಲಿ ನೆರೆದರು. ಸಾಹಿತಿ, ಚಿಂತಕರು, ಕಲಾವಿದರು ಅಲ್ಲಿ ಕಂಡರು. ಪತ್ರಿಕೆಯೊಂದರ ಹತ್ಯೆಗೆ ನಿಂತಿರುವ ಸರ್ಕಾರಕ್ಕೆ ಮಾತಿನ ಛಡಿಏಟು ಕೊಟ್ಟರು. ಆ ಮಾತೆಂಬ ಏಟುಗಳ ಕಿಡಿ ಹರಳನ್ನು ಹಾಗೆ ಇಲ್ಲಿ ಜೋಡಿಸಿ ಇಡಲಾಗಿದೆ. ನೋಡಿ ಪ್ರತಿಭಟನಾ ಕಾರ್ಯಕ್ರಮದ ಸಂಚಾಲನೆಯನ್ನು ನಡೆಸಿದವರು ಭರತ್‌ರಾಜ್, ಡಿವೈಎಫ್‌ಐ ರಾಜ್ಯಕಾರ್ಯದರ್ಶಿ, ಕೊನೆಯಲ್ಲಿ ವಂದಿಸಿದವರು ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ಅನಂತನಾಯಕ್.



ಕರಾವಳಿ ಕರ್ನಾಟಕದಿಂದ ಪ್ರತ್ಯೇಕವಾಗಿದೆಯೇ?

'ಅಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಕರಾವಳಿ ಕರ್ನಾಟಕದಿಂದ ಪ್ರತ್ಯೇಕವಾಗಿ ಬಿಟ್ಟಿದೆಯೇನೋ ಅನಿಸುತ್ತದೆ. ಕರಾವಳಿಯಲ್ಲಿ ಮೃದುವಾಗಿ ಹೇಳಿದರೆ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳುವ ಪರಿಸ್ಥಿತಿ ಇಲ್ಲ. ಹೀಗಾಗಿ ಪತ್ರಿಕೆಯು ಹೇಳುವುದನ್ನು ಸ್ವಲ್ಪ ಹರಿತವಾಗಿ ಹೇಳಿರಬಹುದು. ಅದಕ್ಕಾಗಿ ಪತ್ರಿಕೆಯ ಗಂಟಲು ಹಿಸುಕುವ ಪ್ರಯತ್ನ ಖಂಡನಾರ್ಹ. ಈ ಯತ್ನದ ಹಿಂದೆ ಕರಾವಳಿಯ ಪತ್ರಕರ್ತರ ಕೈವಾಡವೇ ಇದೆ ಎಂಬುದು ತಲೆತಗ್ಗಿಸಬೇಕಾದ ವಿಚಾರ.'

ಡಾ: ಮರುಳಸಿದ್ದಪ್ಪ,
ಸಾಹಿತಿಗಳು

ತುರ್ತು ಪರಿಸ್ಥಿತಿ ವಿರೋಧಿಸಿದ್ದು ಯಾಕೆ?

ಪತ್ರಿಕೆಯಲ್ಲಿ ಏನು ಬೇಕಾದರೂ ಬರೆದರೆ ನಾನು ಬೆಂಬಲಿಸುವವನಲ್ಲ. ಆದರೆ ಅದನ್ನೆದುರಿಸಲು ಕೆಲವು ಕ್ರಮಗಳಿವೆ. ನಾಗರೀಕ

ಪುಟ 13ಕ್ಕೆ

ಡಾ. ಆಚಾರ್ಯರು ತುರ್ತು ಪರಿಸ್ಥಿತಿಯ ದಿನಗಳನ್ನು ನೆನಪಿಸಿಕೊಳ್ಳಬೇಕು

'ಕರಾವಳಿ ಅಲೆ'ಯ ಸಂಪಾದಕರ ಮೇಲೆ ಕ್ರಿಮಿನಲ್ ಕಾನೂನುಗಳಡಿಯಲ್ಲಿ ಮೊಕದ್ದಮೆಗಳು, ಕೈಕೋಳ ಹಾಕಿ ನಡೆಸಿಕೊಂಡು ಹೋದದ್ದು ತುರ್ತು ಪರಿಸ್ಥಿತಿಯ ದಿನಗಳನ್ನು ನೆನಪಿಸುತ್ತಿದೆ. ಆಗ ಬಿಜೆಪಿ ಮುಖಂಡರು ಇಂತದ್ದನ್ನೆಲ್ಲಾ ಪ್ರತಿಭಟಿಸಿ ಜೈಲಿಗೂ ಹೋಗಿದ್ದರು. ಆದರೆ ಈಗ?



ಅವರ ರಾಜ್ಯಭಾರದಲ್ಲಿ ಅದೇ ನಡೆಯುತ್ತಿದೆ. ಆಗ ಅವರ ಜತೆ ಅದೇ ಕಾರಣಕ್ಕಾಗಿ ಜೈಲುವಾಸ ಅನುಭವಿಸಿದ ವಿ.ಜೆ.ಕೆ. ನಾಯರ್ ಡಾ.ವಿ.ಎಸ್. ಆಚಾರ್ಯರಿಗೆ ಒಂದು ಪತ್ರ ಬರೆದು ಇದನ್ನು ನೆನಪಿಸಿದ್ದಾರೆ. ಈಗ ರಾಜ್ಯದ ಗೃಹಮಂತ್ರಿಯಾಗಿರುವ ಆಚಾರ್ಯರಿಗೆ ಈಗ ಸಿಪಿಐ(ಎಂ) ರಾಜ್ಯಕಾರ್ಯದರ್ಶಿಯಾಗಿರುವ ಕಾಂ. ವಿಜೆಕೆ ಜನವರಿ 6 ರಂದು ಬರೆದಿರುವ ಈ ಪತ್ರ ಹೀಗಿದೆ.

ಇವರಿಗೆ,
ಡಾ.ವಿ.ಎಸ್.ಆಚಾರ್ಯ
ಗೃಹ ಮಂತ್ರಿಗಳು
ಕರ್ನಾಟಕ ಸರಕಾರ

ಮಾನ್ಯರೇ,

ಆಂತರಿಕ ತುರ್ತು ಪರಿಸ್ಥಿತಿಯ ಸಮಯದಲ್ಲಿ ನಾವಿಬ್ಬರು ಜೈಲಿನಲ್ಲಿ ಜತೆಯಲ್ಲಿ ಪತ್ರಿಕಾ ಸ್ವಾತಂತ್ರ್ಯ ಕುರಿತಂತೆ ಹೊಂದಿದ್ದ ಮೌಲ್ಯಗಳಿಗೆ ಸ್ವಲ್ಪ ಬೆಲೆಯಿರಬಹುದು ಮತ್ತು 'ಕರಾವಳಿ ಅಲೆ'ಯ ಸಂಪಾದಕರಾದ ಬಿ.ವಿ.ಸೀತಾರಾಮ್ ರವರ ಬಂಧನಗಳು, ಅವರಿಗೆ ಕೈಕೋಳ ಹಾಕಿದ್ದು ಇತ್ಯಾದಿಗಳಿಂದ ಎದ್ದಿರುವ ಪ್ರಶ್ನೆಗಳನ್ನು ಪರಿಹರಿಸುವಲ್ಲಿ ತಾವು ತುಸು ಆಸಕ್ತಿ ವಹಿಸುತ್ತೀರಿ ಎಂಬ ಆಶಯದೊಂದಿಗೆ ತಮಗೆ ವೈಯಕ್ತಿಕವಾಗಿ ಈ ಪತ್ರವನ್ನು ಬರೆಯುತ್ತಿದ್ದೇನೆ.

ಮೊತ್ತಮೊದಲಿಗೆ, ತುರ್ತು ಪರಿಸ್ಥಿತಿಯ ವೇಳೆ ಪತ್ರಿಕಾ ಸ್ವಾತಂತ್ರ್ಯ ಮಹತ್ವದ ಪ್ರಶ್ನೆಯಾಗಿತ್ತು. ಈ ವಿಷಯದಲ್ಲಿ ಪ್ರತಿಭಟಿಸಿ ನಾವೆಲ್ಲಾ ಜೈಲಿಗೆ ಹೋದೆವು ಎಂಬುದನ್ನು ನೆನಪಿಸಿಕೊಳ್ಳ ಬಯಸುತ್ತೇನೆ. ಅಂದು ಹಿರಿಯ ವಕೀಲರಾಗಿದ್ದ ಶ್ರೀ ರಾಮ ಜೋಯಿಸರು ನಾಗರಿಕ ಹಕ್ಕುಗಳನ್ನು ಎತ್ತಿ ಹಿಡಿಯುವಲ್ಲಿ ವಹಿಸಿದ ಪಾತ್ರ, ಅದಕ್ಕಾಗಿ ಆ ಅವಧಿಯಲ್ಲಿ ಅವರನ್ನು ಜೈಲಿಗೆ ಕಳಿಸಿದ್ದು ನನಗೆ ಚೆನ್ನಾಗಿ ನೆನಪಿದೆ. ಎ.ಕೆ. ಗೋಪಾಲನ್‌ರವರು ಆಂತರಿಕ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಸಂಸತ್ತಿನಲ್ಲಿ ಮಾಡಿದ್ದ ಭಾಷಣವನ್ನು ಪ್ರಕಟಿಸಿದ್ದಕ್ಕಾಗಿ ನನ್ನನ್ನು ಬಂಧಿಸಿದ್ದರಿಂದ ನಿಮ್ಮೆಲ್ಲರೊಂದಿಗೆ ಅದೇ ಜೈಲು ಆವರಣದಲ್ಲಿರುವ ಅದೃಷ್ಟ ನನ್ನದಾಗಿತ್ತು.

ನಾವು ಸೇರಿರುವ ವಿಭಿನ್ನ ರಾಜಕೀಯ ಪಕ್ಷಗಳು ಏನೇ ನಿಲುವುಗಳನ್ನು ತಳೆದಿದ್ದರೂ, ಕೆಲವೊಮ್ಮೆ ವಿರುದ್ಧ ನಿಲುವುಗಳನ್ನು ತಳೆದಿದ್ದರೂ ಕೆಲವು ಮೂಲಭೂತ ನೀತಿಗಳನ್ನು ನಾವೆಲ್ಲಾ ಎತ್ತಿ ಹಿಡಿಯುತ್ತೇವೆ. ಪತ್ರಿಕಾ ಸ್ವಾತಂತ್ರ್ಯ ಅಂತವುಗಳಲ್ಲಿ ಮಹತ್ವದ್ದು. ಪ್ರತಿಯೊಂದು ಸ್ವಾತಂತ್ರ್ಯಕ್ಕೂ ಕೆಲವು ಸಕಾರಣವಾದ ಮಿತಿಗಳಿರುವಂತೆ ಪತ್ರಿಕಾ ಸ್ವಾತಂತ್ರ್ಯವೂ ಮಾನಹಾನಿ ಕಾನೂನಿಗೆ ಒಳಪಟ್ಟಿದೆ. ಆದರೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲೇ ಹಲವಾರು ಹೋರಾಟಗಳು ನಡೆದದ್ದು ಪತ್ರಿಕಾ ಸ್ವಾತಂತ್ರ್ಯದ ವಿರುದ್ಧ ಕ್ರಿಮಿನಲ್ ಕಾನೂನಿನ ಬಳಕೆಯ ವಿರುದ್ಧವೇ.

ಲೋಕಮಾನ್ಯ ತಿಲಕರ ಮೇಲಿನ ಮೊಕದ್ದಮೆ ಇದಕ್ಕೆ ಉನ್ನತ ಉದಾಹರಣೆ. 1908ರಲ್ಲಿ ಬ್ರಿಟಿಶರು ಕ್ರಿಮಿನಲ್ ಕಾನೂನಿನ ಅಡಿಯಲ್ಲಿ ಅವರನ್ನು ಬಂಧಿಸಿದಾಗ ಮುಂಬಯಿಯ ಸಮಸ್ತ ದುಡಿಯುವ ಜನಗಳು ಮುಷ್ಕರ ನಡೆಸಿದರು, ಮತಪ್ರದರ್ಶನಗಳನ್ನು ನಡೆಸಿದರು. ಇದರಿಂದ ವಸಾಹತುಶಾಹೀ ಸರಕಾರ ಅವರನ್ನು ಬಿಡುಗಡೆ ಮಾಡಲೇ ಬೇಕಾಗಿ ಬಂತು. ಅದನ್ನು ಕಂಡು 'ಬೀದಿಗಳು ಲೇಖನಿಯ ರಕ್ಷಣೆಗೆ ನಿಂತಿವೆ' ಎಂದು ಲೆನಿನ್ ಟಿಪ್ಪಣಿ ಮಾಡಿದ್ದರು.

ಸ್ವಾತಂತ್ರ್ಯ ಆಂದೋಲನದಾದ್ಯಂತ ಬರವಣಿಗೆಯ ವಿರುದ್ಧ ಕ್ರಿಮಿನಲ್ ಬೆದರಿಕೆಗಳ ಅಸಂಖ್ಯ ಉದಾಹರಣೆಗಳಿವೆ. ಮತ್ತು ನಮ್ಮ ಮೂಲಭೂತ ಹಕ್ಕುಗಳು ಈ ಸ್ವಾತಂತ್ರ್ಯದ ಭರವಸೆ ನೀಡಿವೆ. ಜೂನ್ 25, 1975 ರಿಂದ ಮಾರ್ಚ್ 22, 1977 ರ ನಡುವಿನ ಅಲ್ಪ ಅವಧಿಯನ್ನು ಬಿಟ್ಟರೆ ಈ ಹಕ್ಕಿನ ಭರವಸೆ ಇತ್ತು. ಈ ಸ್ವಾತಂತ್ರ್ಯ ಒಂದು ಜೀವಂತ ಪ್ರಾಣಿಗೆ ಉಸಿರಿದ್ದಂತೆ. ಇದು ನಮ್ಮ ದೇಶದ ಎಲ್ಲಾ ಸ್ವಾತಂತ್ರ್ಯಪ್ರೇಮಿಗಳೂ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾದ್ದು.

'ಕರಾವಳಿ ಅಲೆ'ಯಲ್ಲಿ ಏನೇ ಬಂದಿದ್ದರೂ, ಆ ಬರವಣಿಗೆಗಳ ಬಗ್ಗೆ ನಮ್ಮ ನಿಲುವು ಏನೇ ಇದ್ದರೂ, ಯಾರಿಗಾದರೂ ಅದರಿಂದ ನೋವಾಗಿದ್ದರೆ ಮಾನನಷ್ಟ ಕಾನೂನನ್ನು ಅನ್ವಯಿಸಿದರಷ್ಟೇ ಸಾಲದೇ? ಆ ಪತ್ರಿಕೆಯ ಸಂಪಾದಕರ ವಿರುದ್ಧ ಕ್ರಿಮಿನಲ್ ಕಾನೂನನ್ನು ಪ್ರಯೋಗಿಸುವುದು ಮಹಾನ್ ಲೋಕಮಾನ್ಯರನ್ನು ಜೈಲಿನಲ್ಲಿಟ್ಟಷ್ಟೇ ಮತ್ತು ಶ್ರೀ ರಾಮ ಜೋಯಿಸರನ್ನು ಬಂಧನಕ್ಕೊಳಗಾದವರ ಪರವಾಗಿ ರಿಟ್ ಹಾಕಿದ್ದಕ್ಕಾಗಿ ಜೈಲಿಗೆ ಕಳಿಸಿದಷ್ಟೇ ಅನ್ಯಾಯದ್ದು ಎಂದು ನನ್ನ ಭಾವನೆ.

ಶ್ರೀ ಸೀತಾರಾಮ್ ವಿರುದ್ಧ ಕ್ರಿಮಿನಲ್ ಕಾನೂನಿನ ಅಡಿಯಲ್ಲಿ ಒಂದಕ್ಕಿಂತ ಹೆಚ್ಚು ಮಾನನಷ್ಟ ಮೊಕದ್ದಮೆಗಳನ್ನು ಹಾಕಲಾಗಿದೆ ಎಂದು ಕೇಳಿದ್ದೇನೆ. ಅವರಿಗೆ ಕೈಕೋಳ ಹಾಕಿ ಕರೆದುಕೊಂಡು ಹೋದ ರೀತಿ ಕೂಡಾ ತುರ್ತು ಪರಿಸ್ಥಿತಿ ಕಾಲದಲ್ಲಿ ನಮ್ಮನ್ನೆಲ್ಲಾ ನಡೆಸಿಕೊಂಡ ಕರಾಳ ರೀತಿಯನ್ನು ನೆನಪಿಸುತ್ತದೆ.

ಈ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಬೇಕು ಮತ್ತು ಒಂದು ಪತ್ರಿಕೆಯ ಸಂಪಾದಕ ಕ್ರಿಮಿನಲ್ ಕೇಸುಗಳಿಂದ ಮುಕ್ತಗೊಳ್ಳುವಂತೆ ಹಾಗೂ ಅವರು ತಮ್ಮ ಪತ್ರಿಕೆಯನ್ನು ಬೇರೆ ಯಾವುದೇ ಪತ್ರಿಕೆಯಂತೆ ನಡೆಸಲು ಬಿಡುವಂತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿಮ್ಮನ್ನು ವಿನಂತಿಸಿಕೊಳ್ಳುತ್ತೇನೆ. ನಿಜ, ಯಾವುದಾದರೂ ಮಾನಹಾನಿಯ ಪ್ರಶ್ನೆಯಿದ್ದರೆ, ಅವರು ಅಥವಾ ಅವರ ಪತ್ರಿಕೆಯನ್ನು ಸಿವಿಲ್ ಮೊಕದ್ದಮೆಗೆ ಒಳಪಡಿಸಬಹುದು ಮತ್ತು ಇಂತಹ ಯಾವುದೇ ತೀರ್ಪಿನ ನಂತರ ಸರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು.

ಈ ಕೋರಿಕೆಯನ್ನು ನೀವು ಜಾಗರೂಕತೆಯಿಂದ ಪರಿಶೀಲಿಸುತ್ತೀರಿ ಎಂದು ಆಶಿಸುತ್ತೇನೆ.

ಧನ್ಯವಾದಗಳೊಂದಿಗೆ,

ನಿಮ್ಮ ವಿಶ್ವಾಸಿ
ವಿ ಜೆ ಕೆ ನಾಯರ್

ಮಂಡ್ಯ: ಮಾರಾಟವಾದ ನಗರಸಭೆ - ಗಣಿ ದಣಿಗಳಿಂದ ಖರೀದಿ

ಆಪರೇಷನ್ ಕಮಲದ ಹೆಸರಿನ ಅನೈತಿಕ, ಅಕ್ರಮ ವ್ಯವಹಾರಗಳಲ್ಲಿ ಮಂಡ್ಯ ನಗರಸಭೆಯ ಬಹಳಷ್ಟು ಸದಸ್ಯರು ಮಾರಾಟವಾಗಿ ಬಿಟ್ಟಿದ್ದಾರೆ. ಕಾಂಗ್ರೆಸ್ ಶೂನ್ಯಕ್ಕಿಳಿದಿದ್ದರೆ, ಜೆಡಿ(ಎಸ್) ಮುಖಭಂಗಕ್ಕೀಡಾಗಿದೆ. ಮತ ನೀಡಿ ಗೆಲ್ಲಿಸಿದ ಜನರಿಗೆ ದ್ರೋಹ ಬಗೆಯಲಾಗಿದೆ.

ಕಳೆದ 6 ತಿಂಗಳಿನಿಂದ ನಡೆಯುತ್ತಿದ್ದ ನಗರಸಭಾ ಸದಸ್ಯರ ಖರೀದಿ ಪ್ರಕ್ರಿಯೆ ಮುಕ್ತಾಯವಾಗಿದೆ. ಜನವರಿ 16 ರಂದು ನಡೆದ ಕೇವಲ 2 ಸದಸ್ಯರ ಬಲ ಹೊಂದಿರುವ ಬಿ.ಜೆ.ಪಿ. ತಂದ ಅವಿಶ್ವಾಸ ನಿರ್ಣಯದ ಪರ 26 ವಿರುದ್ಧವಾಗಿ 10 ಮತಗಳು ಚಲಾವಣೆಯಾಗಿ ಈ ಮೂಲಕ ಜಿಲ್ಲಾ ಬಿ.ಜೆ.ಪಿ. ನೇತತ್ವದಲ್ಲಿ ಗಣಿಧಣಿಗಳ ಪ್ರಾಯೋಜಕತ್ವದಲ್ಲಿ "ಆಪರೇಷನ್ ಕಮಲ" ಯಶಸ್ವಿಯಾಗಿದೆ.

35 ಸದಸ್ಯ ಬಲದ ನಗರಸಭೆಯಲ್ಲಿ 23 ಜೆಡಿ(ಎಸ್), 6 ಕಾಂಗ್ರೇಸ್, 6 ಪಕ್ಷೇತರರು ಇದ್ದರು. ಒಬ್ಬ ಕಾಂಗ್ರೇಸ್ ಸದಸ್ಯ ನಿಧನ ಹೊಂದಿದ್ದ. ಈಗ 'ಆಪರೇಷನ್ ಕಮಲ'ದ ಗುಂಪಿನಲ್ಲಿ 14 ಜೆ.ಡಿ.(ಎಸ್), ಎಲ್ಲ 5 ಕಾಂಗ್ರೇಸ್, ಎಲ್ಲ 6 ಪಕ್ಷೇತರರೂ ಗುರುತಿಸಿಕೊಂಡಿದ್ದಾರೆ. **ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಬಿ.ಜೆ.ಪಿ. ಪರ ಮತ ನೀಡಿ ಅಚ್ಚರಿ ಮೂಡಿಸಿದ್ದಾರೆ.** ಸ್ವಪಕ್ಷೀಯರಿಂದಲೇ ಮಾಜಿ ಸಂಸದ ಜಿ. ಮಾದೇಗೌಡರ ಮೇಲೆ ಮಾರಣಾಂತಿಕ ಹಲ್ಲೆ ನಡೆದು, ಕ್ರಮ ಜರುಗಿಸದ ಪೊಲೀಸರ ಪಕ್ಷಪಾತ ವಿರೋಧಿಸಿ ಜಿಲ್ಲಾ ಕೋರ್ಟ್‌ನಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು.

ಕಳೆದ 1 ವಾರದಿಂದ ಈ ಎಲ್ಲಾ ಸದಸ್ಯರು ಮಂಡ್ಯದಿಂದ ಹೊರಗಡೆ ಅಂತರ ರಾಜ್ಯ ಪ್ರವಾಸದಲ್ಲಿದ್ದರು. ಈ ಎಲ್ಲಾ ವ್ಯವಸ್ಥೆಗಳನ್ನು ಕರುಣಾಕರ ರೆಡ್ಡಿ, ಜನರ್ಧಾನ ರೆಡ್ಡಿ ವಹಿಸಿಕೊಂಡಿದ್ದರು. ಪ್ರತಿಯೊಬ್ಬ ಸದಸ್ಯರಿಗೂ 10 ಲಕ್ಷ ರೂ.ಗಳ ಹಣ ಸೇರಿದೆ. ಈ ರೀತಿ ಅಕ್ರಮ ವ್ಯವಹಾರದಲ್ಲಿ ಕೈ ಬದಲಾಗಿರುವ ಕೋಟಿಗಟ್ಟಲೆ ಹಣಕ್ಕೆ ಇಲ್ಲಿನ ರಿಯಲ್ ಎಸ್ಟೇಟ್ ಉದ್ಯಮಿಗಳು ತಮ್ಮ ಶಕ್ತಾನುಸಾರವಾಗಿ ಕೊಡುಗೆ ನೀಡಿದ್ದಾರೆ. ಕೇವಲ 2 ಸದಸ್ಯರು ಹೊಂದಿದ್ದ ಬಿ.ಜೆ.ಪಿ. ನಗರಸಭೆಯನ್ನು ಹಿಡಿತಕ್ಕೆ ತೆಗೆದುಕೊಂಡಿರುವ ರೀತಿಯಿಂದಾಗಿ ಹೇಸಿಗೆ ಹುಟ್ಟಿಸಿದೆ. ಅವಿಶ್ವಾಸ ಮತದ ಸಭೆ ಪತ್ರಕರ್ತರಿಗೆ ಅವಕಾಶ ನೀಡದೆ ಅವಮಾನವೀಯವಾಗಿ ನಡೆಸಿ ಕೊಂಡಿದ್ದಾರೆ. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರ ಬದಲಾಗಿ ಬಿ.ಜೆ.ಪಿ. ಜೊತೆ ಗುರುತಿಸಿಕೊಂಡಿದ್ದ ಹಾಲಿ ಉಪಾಧ್ಯಕ್ಷ ವಹಿಸಿ ಸಭೆಯನ್ನು ಹಣ- ಬೆದರಿಕೆಯ ಮರ್ಜಿಯಲ್ಲೆ ನಡೆಸಿದ್ದಾರೆ. ಇಡೀ ನಗರದಾದ್ಯಂತ 144 ಸೆಕ್ಷನ್ ಜಾರಿಗೊಳಿಸಿ ಸಭೆ ನಡೆಸಿರುವುದು ಇದೇ ಮೊದಲು. ಆದರೆ ಪ್ರವಾಸದಿಂದ ನೇರವಾಗಿ ಸಭೆಗೆ ಬಂದ ಸದಸ್ಯರುಗಳನ್ನು ಸ್ವಾಗತಿಸಲು ಬಿ.ಜೆ.ಪಿ. ಕಾರ್ಯಕರ್ತರು ನಡೆಸಿದ ಸಭೆಗಾಗಲೀ, ಗೆದ್ದ ನಂತರ ಪಟಾಕಿ ಸಿಡಿಸಿದ ಕಾರ್ಯಕರ್ತರುಗಳಿಗಾಗಲೀ 144 ಸೆಕ್ಷನ್ ಲೆಕ್ಕಕ್ಕಿರಲಿಲ್ಲ. ಇದು ಹೇಗೆ ಸರ್ಕಾರಿ ಯಂತ್ರವನ್ನು ಬಿ.ಜೆ.ಪಿ. ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.



'ಸೂಕ್ತ' ಬಂದೋಬಸ್ತ್‌ನಲ್ಲಿ ಪ್ರಜಾಪ್ರಭುತ್ವದ ಮೇಲೆ ಅತ್ಯಾಚಾರ!

ಶಾಸನ ಸಭೆಗೆ ಮಾತ್ರ ಸೀಮಿತವೇ ?

ಶಾಸನ ಸಭೆಯಲ್ಲಿ ಸರಳ ಬಹುಮತಕ್ಕೆ, ಕೊರತೆ ಇರುವ ಸಂಖ್ಯೆನ್ನು ಸರಿಮಾಡಿಕೊಳ್ಳಲು ಮಾತ್ರ 'ಆಪರೇಷನ್ ಕಮಲ ' ನಡೆಸುವುದಾಗಿ ಘೋಷಿಸಿದ್ದ ರಾಜ್ಯ ಬಿ.ಜೆ.ಪಿ ಹಾಗೂ ಯಡಿಯೂರಪ್ಪನವರ ಠಕ್ಕುತನ ಮಂಡ್ಯದಲ್ಲೂ ಬಯಲಾಗಿದೆ. ಇಲ್ಲೂ ಕೂಡ ಮಂಡ್ಯ ನಗರದ ಅಭಿವೃದ್ಧಿಗೆ 'ಅಪರೇಷನ್ ಕಮಲ' ನಡೆಸಲಾಗಿದೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಮಂಡ್ಯ ನಗರ ಅಭಿವೃದ್ಧಿಯಾಗಲು ನಗರಸಭೆ ಬಿ.ಜೆ.ಪಿ.ಯ ಹಿಡಿತಕ್ಕೆ ಬರಬೇಕು ಎನ್ನುವುದು ಹಾಸ್ಯಾಸ್ಪದ. ಅಷ್ಟೆ ಅಲ್ಲಾ ಪ್ರಜಾಪ್ರಭುತ್ವ ವಿರೋಧಿಯಾದದ್ದು, ಇಂತಹ ಜನದ್ರೋಹಿ ಕಾರ್ಯಾಚರಣೆಯನ್ನು ಅಭಿವ?ದ್ಧಿಗಾಗಿ ಎಂದು ಹೇಳುತ್ತಿರುವುದು ನಾಚಿಕೆ ಗೇಡು.

ಕೋಮುವಾದಿ ರಾಜಕೀಯಕ್ಕೆ ವೇದಿಕೆ

ಹಲವಾರು ವರ್ಷಗಳಿಂದ ನಿರಂತರವಾಗಿ ವಿಶೇಷವಾಗಿ ಮಂಡ್ಯ ನಗರದಲ್ಲಿ ಕೋಮು ಗಲಬೆಗಳನ್ನು ನಡೆಸಲು ಹಲವು ವಿಫಲ ಯತ್ನಗಳನ್ನು ಬಿ.ಜೆ.ಪಿ.- ಆರ್.ಎಸ್.ಎಸ್. ನಡೆಸಿದೆ. ಹಿಂದೆ ಶಂಕರಮಠದ ನಗರಸಬೆ ಆಸ್ತಿಯನ್ನು ಕಬ್ಜಾ ಮಾಡಿ ವಿಗ್ರಹಗಳನ್ನು ಸ್ಥಾಪನೆ ಮಾಡಿ ಉದ್ವಿಗ್ನ ಪರಿಸ್ಥಿತಿ ಉಂಟು ಮಾಡಿದ್ದರು. ಗೋಮಾಂಸ ಸಾಗಾಣೆ ನೆಪದಲ್ಲಿ ದಾಂಧಲೆ ನಡೆಸಿ ಉದ್ವಿಗ್ನ ಸ್ಥಿತಿಗೆ ಕಾರಣವಾಗಿತ್ತು. ಈಗ ಇದರ ಅಪಾಯ ಹೆಚ್ಚಾಗಿದೆ. ಈಗ ಸಂಪೂರ್ಣ ಹಿಡಿತದಲ್ಲಿರುವ ನಗರಸಭೆಯನ್ನು ಇಂತಹ ಕೋಮುವಾದಿ ರಾಜಕೀಯಕ್ಕೆ ವೇದಿಕೆಯಾಗಿ ಬಳಸಿ ಕೋಮು ಸೌಹರ್ದತೆಗೆ ಭಂಗ ಉಂಟು ಮಾಡುವ ಅವಕಾಶವಾಗಿ ನಗರಸಭೆಯನ್ನು ಬಿ.ಜೆ.ಬಿ. ಬಳಸುತ್ತದೆ. ಇಂತಹ ಯತ್ನಗಳನ್ನು ವಿಫಲಗೊಳಿಸುವ ಎಲ್ಲಾ ಪ್ರಗತಿಪರ, ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳು ಪ್ರಜ್ಞಾಪೂರ್ವಕ ಎಚ್ಚರಿಕೆ ಅಗತ್ಯವಾಗಿದೆ.

ಜೆ.ಡಿ.ಎಸ್. - ಕಾಂಗ್ರೇಸ್‌ಗೆ ಮುಖಭಂಗ

ಮಂಡ್ಯ ನಗರದ ಜೆ.ಡಿ.(ಎಸ್) ಶಾಸಕ ಎಂ.ಶ್ರೀನಿವಾಸರ ನೆಚ್ಚಿನ ಶಿಷ್ಯರಾಗಿದ್ದ ಅನೇಕರು ಬಿ.ಜೆ.ಪಿ.ಗೆ ಹೋಗಿದ್ದಾರೆ. ಚಲುವರಾಯಸ್ವಾಮಿ ಜೊತೆ ನಿಕಟ ಸಂಬಂಧ ಹೊಂದಿದ್ದ ಮಂಡ್ಯ ನಗರಸಭಾ ಸದಸ್ಯರನ್ನು ಜೆ.ಡಿ.(ಎಸ್)ನಲ್ಲಿ ಉಳಿಸಿಕೊಳ್ಳುವಲ್ಲಿ ಚಲುವರಾಯಸ್ವಾಮಿ, ಶ್ರೀನಿವಾಸ್ ವಿಫಲರಾಗಿದ್ದಾರೆ. ಕಾಂಗ್ರೇಸ್‌ನ ಎಲ್ಲಾ ಸದಸ್ಯರು 'ಅಪರೇಷನ್ ಕಮಲ' ದ ಮೂಲಕ ಬಿ.ಜೆ.ಪಿ. ಸೇರಿ ಕಾಂಗ್ರೇಸ್ ಪ್ರತಿನಿಧಿಸುವ ಒಬ್ಬರೂ ಇಲ್ಲದಂತಾಗಿದೆ. ನಗರಸಭೆ ಅಸ್ತಿತ್ವಕ್ಕೆ ಬಂದಂದಿನಿಂದಲೂ ಆಳ್ವಿಕೆ ಮಾಡಿದ್ದ ಕಾಂಗ್ರೇಸ್‌ಗೆ ಹಾಗೂ ಇದೇ ಮೊದಲ ಬಾರಿಗೆ ನಗರಸಭೆ ಅಧಿಕಾರ ಹಿಡಿದ್ದ ಜೆ.ಡಿ.(ಎಸ್)ಗೆ ಭ... ಮುಖಭಂಗವಾಗಿದೆ. ಕೋಮುವಾದಿ ರಾಜಕೀ... ವಿರುದ್ಧ ಸೆಣಸದೆ ಅವಕಾಶ ವಾದಿ ರಾಜಕೀಯ... ಮಣೆ ಹಾಕಿದ್ದರ ಫಲ ಇಂ... ಕಾಂಗ್ರೇಸ್-ಜೆ.ಡಿ.(ಎಸ್) ಗೆ ತಿರುಗು ಬಾಣವಾ... ಪರಿಣಮಿಸಿದೆ.

ಮಂಡ್ಯ ಅಂದರೆ 144

ಉಪಚುನಾವಣೆಯ ಫಲಿತಾಂ... ದಿನವಾದ ಡಿಸೆಂಬರ್ 30ರಿಂದ ಜನ... 16ರ ತನಕ ಮಂಡ್ಯದಲ್ಲಿ ಸೆಕ್ಷನ್ 14... ಅನ್ವಯ ನಿಷೇದಾಜ್ಞೆ ಜಾರಿಯಲ್ಲಿತ್ತು... ಜನರ ಮೇಲೆ ಸೇರಬಾರದು ಎ... ಕಟಾಜ್ಞೆಯನ್ನು ಬಿ.ಜೆ.ಪಿ. ಸರ... ಹೊರಡಿಸಿತ್ತು. 15 ದಿನಗಳಿಗೂ ಹೆಚ್ಚು ಕ... ಯಾವುದೇ ವಿಶೇಷ ಸಂದ... ಇಲ್ಲದಿದ್ದಾಗಲೂ 144 ಸೆಕ್ಷನ್ ಜ... ಮಾಡಿದ್ದು, ಇದೇ ಮೊದಲು.

ಚುನಾವಣೆ ಎಣಿಕೆ ಮುಗಿದ ತ... ಬಿ.ಜೆ.ಪಿ. ಕಾರ್ಯಕರ್ತರಿಂದ ನಡೆದ ಮಾ... ಸಂಸದ ಜಿ.ಮಾದೇಗೌಡರ ಮೇಲಿನ ಮಾರಣಾಂ... ಹಲ್ಲೆ ಹಾಗೂ ಗಾಂಧಿಭವನದ ಮೇಲೆ ದಾಂ... ಪ್ರಕರಣದಿಂದ ಶುರುವಾರ ನಿಷೇದಾಜ್ಞೆ, ಪ್ರಮು... ಆರೋಪಿ ಬಿ.ಜೆ.ಪಿ. ಪರಾಜಿತ ಅಭ್ಯರ್ಥಿ ಡಿ... ತಮ್ಮಣ್ಣ ನಿರೀಕ್ಷಣಾ ಅರ್ಜಿ ವಿಚಾರ... ಮುಗಿಯುವವರೆಗೂ ಜಾರಿಯಲ್ಲಿತ್ತು. ಆನಂ... ನಗರಸಭೆಯ ಅವಿಶ್ವಾಸ ಮತ ನಿರ್ಣಯ ಸಂಬ... ಇದು ನಗರಸಭೆ ಜನವರಿ 16ರ ಸಭೆ ತ... ಮುಂದುವರೆಯಿತು.

ರಾಜ್ಯ ಸರ್ಕಾರ 144 ಅನ್ನು ಬಳಸಿ ಮಂಡ್ಯ... ಆಡಳಿತ ನಡೆಸುತ್ತಿದೆ. ಜನರು ತಮ್ಮ ಪ್ರಜಾಸತ್ತಾ... ಹಕ್ಕುಗಳನ್ನು ಚಲಾಯಿಸಲು ನಾಗರೀಕ ಸಮಸ್ಯೆಗ... ಹೇಳಿಕೊಳ್ಳುವ ಅವಕಾಶವನ್ನು ರಕ್ಷಣೆ ಮಾಡು... ಬದಲು ನಿರ್ದಯವಾಗಿ ನಡೆಸಿಕೊಳ್ಳುತ್ತಿದೆ. ... ಸರ್ವಾಧಿಕಾರಿ ಬಿ.ಜೆ.ಪಿ. ಸರ್ಕಾರದ ಜನ ವಿರೋ... ವರ್ತನೆ ಜನರಲ್ಲಿ ಹೇಸಿಗೆ ಹುಟ್ಟಿಸಿದೆ. ನ... ಆಡಳಿತದ ವಿರುದ್ಧ ಜನ ಹಿಡಿಶಾಪ ಹಾಕುತ್ತಿದಾ...

ವರದಿಗಾ...

ಬಿ.ಬಾಲಕೃಷ್ಣಶೆಟ್ಟಿ ನಿಧನ


ಮಂಗಳೂರಿನ ಪಕ್ಷದ ಹಿರಿಯ ಸಂಗಾತಿಗಳಲ್ಲಿ ಒಬ್ಬರಾದ ಕಾಮ್ರೆಡ್ ಬೋಳಾರ ಬಾಲಕೃಷ್ಣಶೆಟ್ಟಿಯವರು ಅಲ್ಪಕಾಲದ ಅನಾರೋಗ್ಯದಿಂದ ಡಿಸೆಂಬರ್ 8ರಂದು ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಪತ್ನಿ ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಮಂಗಳೂರಿನಲ್ಲಿ ಹಂಚಿನ ಕಾರ್ಮಿಕರನ್ನು ಸಂಘಟಿಸಿ ಹಂಚಿನ ಕಾರ್ಮಿಕರ ಹೋರಾಟದ ಮುಂಚೂಣಿಯಲ್ಲಿದ್ದು, ಪಕ್ಷದ ಸಂಪರ್ಕಕ್ಕೆ ಬಂದ ಬಾಲಕೃಷ್ಣಶೆಟ್ಟಿಯವರು ಕೊನೆಯವರೆಗೂ ಪಕ್ಷದ ಬೋಳಾರ ಶಾಖೆ ಸದಸ್ಯರಾಗಿದ್ದರು ಹಾಗೂ ಎಸ್.ಕೆ. ಟೈಲ್ ವರ್ಕರ್ಸ್ ಯೂನಿಯನ್ನಿನ ಕೋಶಾಧಿಕಾರಿಯಾಗಿದ್ದರು.

ಹಂಚಿನ ಕಾರ್ಖಾನೆಯಿಂದ ನಿವೃತ್ತಿ ಹೊಂದಿದ ಬಳಿಕ ಪಕ್ಷದ ದ.ಕ.ಜಿಲ್ಲಾ ಸಮಿತಿ ಕಛೇರಿ ಎ.ಕೆ.ಜಿ.ಭವನ ದ ಕಛೇರಿ ಸಹಾಯಕರಾಗಿ ರಾತ್ರಿ ಹಗಲೂ ದುಡಿದಿದ್ದರು.

ಅಗಲಿದ ಹಿರಿಯ ಸಂಗಾತಿ ಬಿ.ಬಾಲಕೃಷ್ಣಶೆಟ್ಟಿಯವರಿಗೆ ಪಕ್ಷದ ದ.ಕ.ಜಿಲ್ಲಾ ಸಮಿತಿ, ನಗರ ಸಮಿತಿ, ಬೋಳಾರ ಶಾಖೆ ಹಾಗೂ ಎಸ್.ಕೆ. ಟೈಲ್ ವರ್ಕರ್ಸ್‌ಯೂನಿಯನ್, ಸೌತ್‌ಕೆನರಾ ಬೀಡಿ ವರ್ಕರ್ಸ್ ಫೆಡರೇಷನ್ ಸಂತಾಪ ವ್ಯಕ್ತಪಡಿಸಿವೆ.

ಎಂ.ಕೆ.ಭಟ್‌ರವರ ನಿಧನ ತೀವ್ರ ಸಂತಾಪ



1980 ರ ದಶಕದ ಆರಂಭದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಯ ಕರ್ನಾಟಕ ರಾಜ್ಯ ಕಾರ್ಯದರ್ಶಿಯಾಗಿದ್ದ ಕಾಂ.ಎಂ.ಕೆ.ಭಟ್‌ರವರ ನಿಧನಕ್ಕೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿಯು ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಹಾಗೂ ಅವರ ಕುಟುಂಬಕ್ಕೆ ಸಾಂತ್ವನ ತಿಳಿಸಿದೆ.

1970 ರಲ್ಲಿ ಎಸ್‌ಎಫ್‌ಐನ ಸಂಸ್ಥಾಪನಾ ಸಮ್ಮೇಳನದಲ್ಲಿ ಭಾಗವಹಿಸಿದ್ದ ಭಟ್ ರವರು ಅಖಿಲ ಭಾರತ ಪದಾಧಿಕಾರಿ, ರಾಜ್ಯದ ಪ್ರಧಾನ ಕಾರ್ಯದರ್ಶಿಯಾಗಿದ್ದರು.

1978 ರಿಂದ 1982 ರವರೆಗೆ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿಯಾಗಿ ಜವಾಬ್ದಾ... ನಿರ್ವಹಿದರು, 85 ರವರೆಗೂ ರಾಜ್ಯ ಸಮಿತಿಯ ಸದಸ್ಯರಾಗಿದ್ದರು. ಅವರು ಪಕ್ಷದ ಐಕ್ಯರಂಗ ವಾರಪತ್ರಿಕೆಯ ಸಂಪಾದಕರಾಗಿಯೂ, ಕರ್ನಾಟಕ ಪ್ರಾಂತರೈತ ಸಂಘದ ಮುಖಂಡರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿವೆ. ಕೋಮುವಾದ, ಯುಪಿಎ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಗಳು ಹಾಗೂ ಅಮೆರಿಕದ ಬಾಲಂಗೋಚಿಯಾಗುವ ಧೋರಣೆಗಳ ವಿರುದ್ಧ ಎಡಪಕ್ಷಗಳು ತಳೆದ ದೃಢ ನಿಲುವು, ನಡೆಸಿದ ಹೋರಾಟ ಈಗ ದೇಶದಲ್ಲಿ ಮೂರನೇ ಪರ್ಯಾಯವೊಂದನ್ನು ರೂಪಿಸುವ ಪ್ರಕ್ರಿಯೆಗೂ ಸಹಕಾರಿಯಾಗಿ ಬರುತ್ತಿದೆ. ಈ ಕುರಿತು ಒಂದು ಚಿತ್ರ.

ಚುನಾವಣೆಗಳೆಂಬ ಸಮರದತ್ತ

ಮೂರನೇ ಪರ್ಯಾಯ ಒಗ್ಗೂಡುತ್ತಿರುವ ಶಕ್ತಿ

ಭಾರತ ದೇಶದೊಳಗಿನ ರಾಜಕೀಯ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬಂದರೆ ಭಾರತದ ಮಹಾಜನತೆ ಮತ್ತೊಂದು ಮಹತ್ವದ ರಾಜಕೀಯ ಪ್ರಯೋಗಕ್ಕೆ ಸಜ್ಜಾಗುತ್ತಿದೆಯೇನೋ ಅಂತ ಯಾರಿಗಾದರೂ ಅನಿಸದಿರದು. ಹಲವು ರಾಜಕೀಯ ವಿಶ್ಲೇಷಕರು ಇನ್ನೂ ರೂಪುಗೊಳ್ಳುತ್ತಿರುವ ರಾಜಕೀಯ ಪರಿಸ್ಥಿತಿಯೊಂದರ ಕುರಿತು ಈಗಾಗಲೇ ಬರೆಯಲಾರಂಭಿಸಿದ್ದಾರೆ. ಭವಿಷ್ಯದ ರಾಜಕೀಯ ಪರಿಸ್ಥಿತಿ ಏನೆಂಬುದು ಸ್ಪಷ್ಟವೇನಲ್ಲ. ಆದರೆ ಅದೊಂದು ಭಿನ್ನ ರಾಜಕೀಯ ಪರಿಸ್ಥಿತಿ ಎಂಬುದಂತೂ ಸ್ಪಷ್ಟವಾಗಿ ಕಾರಣಲಾರಂಭಿಸಿದೆ.

ಬದಲಾವಣೆ ಬಯಸುತ್ತಿರುವ ಜನತೆ:

ಭಾರತದ ಜನಸಾಮಾನ್ಯರು, ದುಡಿಯುವ ಜನತೆ ಆಳುವ ಸರ್ಕಾರ ನೀತಿಗಳ ಫಲವಾಗಿ ಬಸವಳಿದಿದ್ದಾರೆ. ಆರ್ಥಿಕ ನೀತಿಗಳ ವಿಚಾರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೂ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೂ ನಡುವೆ ಬಾರಿ ವ್ಯತ್ಯಾಸ ಇಲ್ಲ ಎಂಬುದು ಜನರ ಜೀವನಾನುಭವವಾಗಿದೆ. ಈ ಎರಡೂ ಸರ್ಕಾರಗಳ ಅಡಿಯಲ್ಲಿ ಅದೇ ಶ್ರೀಮಂತರ ಪರವಾದ, ಕಾರ್ಪೋರೇಟ್ ಕಂಪನಿಗಳ, ಬಂಡವಾಳಿಗರ ಪರವಾದ ನೀತಿಗಳೇ ಜಾರಿಯಾಗಿದ್ದು. ಹೊಸ ಆರ್ಥಿಕ ನೀತಿ ಅಂದರೂ ಜಾಗತೀಕರಣ-ಉದಾರೀಕರಣ ಅಂದರೂ, ಎರಡನೇ ತಲೆಮಾರಿನ ಸುಧಾರಣೆ ಅಂದರೂ ಅದರ ಅರ್ಥ ಒಂದೇ ಬಡಜನರ ಬದುಕನ್ನು ಹಿಂಡುವುದು. ದುಡಿಯುವ ಜನರ ಹಕ್ಕಿನ ಮೇಲೆ ದಾಳಿ ಮಾಡುವುದು.

ಇಂತಹ ನೀತಿಗಳ ಫಲವಾಗಿ ಭಾರತದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆ ಮತ್ತು ಅವರ ಸಂಪತ್ತಿನ ಗಾತ್ರ ಬೆಳೆಯುತ್ತಿದೆ. ಅದೇ ಕಾಲಕ್ಕೆ ಭಾರತ ಜನರ ಬದುಕು ದುಸ್ತರವಾಗುತ್ತಾ ಸಾಗುತ್ತಿದೆ. ಬೆಲೆ ಏರಿಕೆ ತಡೆಯುವುದರಲ್ಲಿ, ಜನರಿಗೆ ಜೀವನಾವಶ್ಯಕವಾದ ರೇಷನ್ ಒದಗಿಸುವುದರಲ್ಲಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಾರಿ ಬೆಲೆ ಕುಸಿತವಾಗಿದ್ದರೂ ದೇಶದೊಳಗೆ ಪೆಟ್ರೋಲಿಯಂ ಬೆಲೆ ಇಳಿಸುವಲ್ಲಿ ಕೇಂದ್ರ ಯುಪಿಎ ಸರ್ಕಾರಕ್ಕೆ ಆಸಕ್ತಿಯೇ ಇಲ್ಲ. ಅದರ ಆಸಕ್ತಿ ಏನಿದ್ದರೂ ಮತ್ತಷ್ಟು ಮತ್ತಷ್ಟು ಉದಾರೀಕರಣ ನೀತಿ ಜಾರಿ ಮಾಡಿ. ವಿಮಾರಂಗ, ಬ್ಯಾಂಕಿಂಗ್ ರಂಗವನ್ನು ವಿದೇಶಿ ಕಂಪನಿಗಳಿಗೆ ತೆರೆಯುವುದರತ್ತಲೇ ಇದೆ.

ಮನಮೋಹನರ ದಿವಾಳಿ ನೀತಿಗಳು

ಬಂಡವಾಳಶಾಹಿಯ ಸ್ಫೂರ್ತಿ ಕೇಂದ್ರ ಅಮೇರಿಕಾದಲ್ಲಿ ಆರ್ಥಿಕ ಅಲ್ಲೋಕ ಕಲ್ಲೋಲವಾಗಿದೆ. ಅದು ಬೃಹತ್ ಆರ್ಥಿಕ ಬಿಕ್ಕಟ್ಟಿನ ಸ್ವರೂಪ ತಾಳಿ ಇಡೀ ಜಗತ್ತನ್ನು ಅಪ್ಪಳಿಸುತ್ತಿದೆ. ವಿವಿಧ ದೇಶಗಳ ಆರ್ಥಿಕತೆಗಳು ತತ್ತರಿಸುತ್ತಿವೆ. ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತಕ್ಕೆ ಬಿಕ್ಕಟ್ಟಿನ ಪರಿಣಾಮ ಅಷ್ಟಾಗಿ ತಟ್ಟಿಲ್ಲ. ಇಂದಿಗೂ ಭಾರತದ ಆರ್ಥಿಕತೆಯಲ್ಲಿ ಸಾರ್ವಜನಿಕ ಹಣಕಾಸು ಸಂಸ್ಥೆಗಳ ಪಾತ್ರವೇ ದೊಡ್ಡದಾಗಿರುವುದು. ಕೇಂದ್ರ ಸರ್ಕಾರವು ಈ ರಂಗದಲ್ಲಿ ತರಲು ಉದ್ದೇಶಿಸಿದ್ದ ಉದಾರೀಕರಣ ನೀತಿಗಳನ್ನು ಜಾರಿಗೆ ತರಲು ಬಿಡದೇ ಎಡಪಕ್ಷಗಳು ಪ್ರತಿರೋಧ ಒಡ್ಡಿದ್ದೇ ಇದಕ್ಕೇ ಕಾರಣ. ಆದರೆ ಈಗ ಕಾಂಗ್ರೆಸ್‌ಗೆ ಭಾರತ ಇತರ ದೇಶಗಳಷ್ಟು ಬಿಕ್ಕಟ್ಟಿಗೆ ಸಿಲುಕದೇ ಉಳಿದಿರುವುದರಲ್ಲಿ ಎಡಪಕ್ಷಗಳ ಪಾತ್ರ ಕಾಣಿಸುತ್ತಿಲ್ಲ. ಬ್ಯಾಂಕ್ ರಾಷ್ಟ್ರೀಕರಣದ ಇಂದಿರಾ ಪರಂಪರೆ ಕಾಣುತ್ತಿದೆ. ನರಸಿಂಹರಾಯರು ಮನಮೋಹನರ ಬ್ಯಾಂಕ್, ವಿಮಾ ಸಂಸ್ಥೆಗಳ ಖಾಸಗೀಕರಣ ಯತ್ನಗಳು ನೆನಪಿಗೆ ಬರುತ್ತಿಲ್ಲ.

ಸ್ಥಾನ ಮರೆದ ವಿರೋಧ ಪಕ್ಷ!

ಪಾರ್ಲಿಮೆಂಟ್‌ನಲ್ಲಿ ಮುಖ್ಯ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿರುವ ಬಿಜೆಪಿ ಅದರ ಸ್ಥಾನ ಏನೆಂದು ಎಷ್ಟೋ ಸಾರಿ ಎಡಪಕ್ಷಗಳು ನೆನಪಿಸಿಕೊಡಬೇಕಾಯಿತು. ಜನರ ಬದುಕಿನ ಪ್ರಶ್ನೆಯನ್ನಾಧರಿಸಿದ ಹೋರಾಟವಿಲ್ಲ. ಕೋಮುವಾದಿ ಪ್ರಚಾರ, ದ್ವೇಷಪೂರಿತ ವಿಚಾರಗಳೇ ಅದರ ಆದ್ಯತೆ. ಹಿಂದೂತ್ವವಾದಿ ಸಂಘಟನೆಗಳ ಭಯೋತ್ಪಾದಕ ಕೃತ್ಯಗಳನ್ನು ಒಂದೆಡೆ ಸಮರ್ಥಿಸುತ್ತಾ ಮತ್ತೊಂದು ಭಯೋತ್ಪಾದನೆ ವಿರೋಧಿ ಆಂದೋಲನದ ಹೆಸರಿನಲ್ಲಿ ಇಡೀ ಅಲ್ಪ ಸಂಖ್ಯಾತ ಸಮುದಾಯದ ವಿರುದ್ಧವೇ ಕೋಮುವಾದಿ ಪ್ರಚಾರದಲ್ಲಿ ತೊಡಗಿದೆ.

ಜನತೆ ಗಮನಿಸುತ್ತಿದ್ದಾರೆ

ಜನತೆ ಎಲ್ಲವನ್ನು ಗಮನಿಸುತ್ತಿದ್ದಾರೆ. ಎಷ್ಟೋ ಜನಕ್ಕೆ ಟಿ.ವಿ.ನೋಡುವ ಅನುಕೂಲಗಳಲ್ಲದಿದ್ದರೂ, ಪತ್ರಿಕೆ ಓದಲು ಬರದಿದ್ದರೂ ದೇಶದ ಎಷ್ಟೋ ಆಗುಹೋಗುಗಳು ಅವರು ತಿಳಿಯಬಲ್ಲರು. ರೇಷನ್ ಕಾರ್ಡ್ ಕಿತ್ತು ಕೊಳ್ಳುವ, ರೇಷನ್ ಕಿತ್ತುಕೊಳ್ಳುವ ಸರ್ಕಾರದ ನೀತಿಯನ್ನು ಅವರು ಟಿ.ವಿ. ನೋಡಿಯೇ ತಿಳಿದುಕೊಳ್ಳಬೇಕಿಲ್ಲ.

ಮೊನ್ನೆ ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಭಯೋತ್ಪಾದನೆಯಂತಹ ವಿಚಾರದಲ್ಲಿಯೂ ಅವರು ಬಿಜೆಪಿ ನಡೆಸಿದ ವಿಕೃತ ಪ್ರಚಾರಗಳಿಗೆ ಬಲಿ ಬೀಳಲಿಲ್ಲ. ಸಾಕಷ್ಟು ಪ್ರಬುದ್ಧ ತೀರ್ಪನ್ನೂ ನೀಡಿದರು.

ಆರು ರಾಜ್ಯಗಳ ವಿಧಾನ ಸಭಾ ಚುನಾವಣೆಯಲ್ಲಿ ರಾಜಸ್ಥಾನದಲ್ಲಿ ಬಿಜೆಪಿ ಸೋತಿದೆ. ಆದರೆ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತವೇನೂ ಸಿಗಲಿಲ್ಲ. ಮಧ್ಯಪ್ರದೇಶ, ಛತ್ತೀಸ್‌ಘಡದಲ್ಲಿ ಬಿಜೆಪಿ ಅಧಿಕಾರ ಉಳಿಸಿಕೊಂಡರೂ ಮತ ಗಳಿಕೆ ಪ್ರಮಾಣ ಕುಸಿದಿದೆ. ಈ ಎಲ್ಲಾ ರಾಜ್ಯಗಳಲ್ಲಿ ಬಿಜೆಪಿಯೇತರ, ಕಾಂಗ್ರೇಸೇತರ ಪಕ್ಷಗಳು ತಮ್ಮ ಮತ ಗಳಿಕೆಯನ್ನು ಸ್ಥಾನಗಳನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿವೆ. ಅಂದರೆ ಜನ ಕಾಂಗ್ರೆಸ್ ಬಿಜೆಪಿಗಳಿಗೆ ಪರ್ಯಾಯವೊಂದರ ಹುಡುಕಾಟದಲ್ಲಿದ್ದಾರೆ. ಕಾಂಗ್ರೇಸ್ಸೇತರ ಬಿಜೆಪಿಯೇತರ ಜಾತ್ಯಾತೀತ ಪರ್ಯಾಯವನ್ನು ನೀಡಿದಲ್ಲಿ ಜನರು ಖಂಡಿತ ಅದನ್ನು ಬೆಂಬಲಿಸಲಿದ್ದಾರೆಂಬ ಸಂಗತಿ ಕಾಣ ಬರುತ್ತಿದೆ.

ಮೂರನೇ ಪರ್ಯಾಯ -ಎಡಪಕ್ಷಗಳ ಯತ್ನ

ಬಿಜೆಪಿ, ಕಾಂಗ್ರೆಸ್ ನೇತೃತ್ವದ ಕೂಟಗಳಿಗೆ ಪರ್ಯಾಯ ರೂಪಿಸಲು ಸಿಪಿಐ(ಎಂ) ಮತ್ತು ಎಡಪಕ್ಷಗಳು ಪ್ರಯತ್ನಿಸುತ್ತ ಬಂದಿವೆ. ಈ ಮೂರನೇ ಪರ್ಯಾಯವು ಕೇವಲ ಕೆಲವು ರಾಜಕೀಯ ಪಕ್ಷಗಳ ಮತ್ತೊಂದು ಕೂಟ ಆಗಬಾರದು. ಈ ವೇದಿಕೆಯು ಸ್ಪಷ್ಟವಾದ ಜನಪರವಾದ ಕಾರ್ಯಕ್ರಮದಲ್ಲಿ ಮಾಡಿ ಬರಬೇಕು ಎಂಬುದು ಎಡಪಕ್ಷಗಳ ದೃಢವಾದ ಧೋರಣೆ. ಇದು ಅಷ್ಟೊಂದು ಸರಳವಾದ ದಾರಿಯಲ್ಲ. ಇದು ಕಲ್ಲು ಮುಳ್ಳುಗಳ ಸಂಘರ್ಷ ಮತ್ತು ಹೋರಾಟದ ಸುದೀರ್ಘ ಹಾದಿ. ಜನತಾ ಆಂದೋಲನ ಈ ಪರ್ಯಾಯವನ್ನು ರೂಪಿಸಬೇಕು. ಎಡಪಕ್ಷ ಅಂತಹ ನೈಜ ಪರ್ಯಾಯಕ್ಕೆ ಶ್ರಮಿಸುತ್ತಿದೆ. ಆದರೆ ಅಲ್ಲಿಯವರೆಗೆ ಕೈ ಕಟ್ಟಿ ಕೂರುವಂತಿಲ್ಲ. ಸಾಧ್ಯವಾದಷ್ಟು ಜನಪರ ನೀತಿಗಳ ಆಧಾರದಲ್ಲಿ ಸಾಧ್ಯವಿರುವ ರಾಜಕೀಯ ಶಕ್ತಿಗಳನ್ನು ಒಗ್ಗೂಡಿಸುವ ಕೆಲಸಕ್ಕೆ ಎಡಪಕ್ಷಗಳು ಯತ್ನಿಸುತ್ತಿವೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ವಿವಿಧ ರಾಜ್ಯಗಳಲ್ಲಿ ಇಂತಹ ಪರ್ಯಾಯಕ್ಕಾಗಿ ಎಡಪಕ್ಷಗಳು ಮುಂದಾಗಿವೆ.

ದಕ್ಷಿಣ ಭಾಗದ ಆಂಧ್ರಪ್ರದೇಶ ಒಂದು ಪ್ರಮುಖ ರಾಜ್ಯ. ಅಲ್ಲಿ ಈಗ ರಾಜಶೇಖರ ರೆಡ್ಡಿಯವರ ನೇತೃತ್ವದ ಕಾಂಗ್ರೆಸ್ ಅಧಿಕಾರದಲ್ಲಿದೆ. ತೆಲುಗುದೇಶಂ ಪಕ್ಷ ಇಲ್ಲಿ ಪ್ರಮುಖ ವಿರೋಧ ಪಕ್ಷದ ಸ್ಥಾನದಲ್ಲಿದೆ. ಈ ಟಿಡಿಪಿ ಪಕ್ಷದೊಂದಿಗೆ ಸಿಪಿಐ, ಸಿಪಿಐ(ಎಂ)ಗಳ ಚುನಾವಣಾ ಹೊಂದಾಣಿಕೆ ಬೆಸೆಯುವಲ್ಲಿ ಸಿಪಿಐ(ಎಂ) ಮುಖ್ಯ ಪಾತ್ರ ವಹಿಸಿದೆ. ತೆಲಂಗಾಣ ಪ್ರಾಂತದ ಮತ್ತೊಂದು ಪ್ರಮುಖ ಪಕ್ಷವಾದ ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಕೂಡ ಈಗ ಟಿಡಿಪಿಯೊಂದಿಗೆ ಕೈ ಜೋಡಿಸಿದೆ. ಆಂಧ್ರ ಪ್ರದೇಶದಲ್ಲಿ ಇದೀಗ ಮತ್ತೊಂದು ರಾಜಕೀಯ ಪಕ್ಷ ಉದಯಿಸಿದೆ. ಜನಪ್ರಿಯ ಚಿತ್ರನಟ ಚಿರಂಜೀವಿ ಅವರ ನಾಯಕತ್ವದ ಪ್ರಜಾರಾಜ್ಯಂ ಆ ಪಕ್ಷ. ಪ್ರಜಾರಾಜ್ಯಂ ಅನ್ನು ಎನ್‌ಡಿಎ ತೆಕ್ಕೆಗೆ ಸೆಳೆಯಲು ಸ್ವತಃ ಬಿಜೆಪಿ ಪಕ್ಷದ ಪ್ರಧಾನಿ ಅಭ್ಯರ್ಥಿ ಎಂದೇ ಬಿಂಬಿಸಲಾಗುತ್ತಿರುವ ಅಡ್ವಾಣಿಯವರೇ ಪ್ರಯತ್ನಪಟ್ಟರೂ ಅದರಿಂದೇನು ಪ್ರಯೋಜನವಾಗಿಲ್ಲ. ಪ್ರಜಾರಾಜ್ಯಂ ಒಂದು ಜಾತ್ಯಾತೀತ ಪಕ್ಷವಾಗಿದ್ದು ಅದು ಬಿಜೆಪಿಯೊಂದಿಗೆ ಕೈ ಜೋಡಿಸದು ಎಂದು ಪ್ರಜಾರಾಜ್ಯಂ ತಿಳಿಸಿರುವುದರಿಂದ ಆಂಧ್ರದಲ್ಲಿ ಬಿಜೆಪಿಗೆ ಬಹುಶಃ ಶೂನ್ಯ ಸಂಪಾದನೆ ಎಂದು ಕಾಣುತ್ತದೆ. ತೆಲುಗುದೇಶಂ ಒಂದು ಪ್ರಾದೇಶಿಕ ಪಕ್ಷವಾದರೂ ರಾಷ್ಟ್ರ ರಾಜಕಾರಣದಲ್ಲಿ ಅದು ಇತ್ತೀಚಿನ ವರ್ಷಗಳಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಕರ್ನಾಟಕ ರಾಜ್ಯದಲ್ಲಿ ಜಾತ್ಯಾತೀತ ಜನತಾದಳದೊಂದಿಗೆ ಎಡಪಕ್ಷಗಳ ಮೈತ್ರಿ ಇರುವುದು ಗೊತ್ತಿರುವ ಅಂಶವೇ ಆಗಿದೆ. ದಕ್ಷಿಣ ತುದಿಯ ಮತ್ತೊಂದು ರಾಜ್ಯ ತಮಿಳುನಾಡಿನಲ್ಲಿ ಎನ್‌ಡಿಎ ಕೂಟಕ್ಕೆ ಹೆಚ್ಚಿನದೇನೂ ಕೈಗೂಡಿಲ್ಲ. ಡಿಎಂಕೆ ಪಕ್ಷವು ರಾಜ್ಯದಲ್ಲಿ ಅಧಿಕಾರದಲ್ಲಿ ಮುಂದುವರಿಯುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲ ನಿರ್ಣಾಯಕವಾಗಿದೆ. ತತ್ವ ಬದ್ಧತೆಗಿಂತ ಅಧಿಕಾರದತ್ತ ಸೆಳೆತ ಹೊಂದಿರುವ ಡಿಎಂಕೆ ಅಮೇರಿಕಾದೊಂದಿನಗಿನ ಅಣು ಒಪ್ಪಂದದಂತಹ ಅತ್ಯಂತ ದೇಶ ವಿರೋಧಿ ಧೋರಣೆ ತಳೆದಾಗಲಾರದರೂ ಯುಪಿಎಯಿಂದ ದೂರ ಸರಿಯುವ ಬದ್ಧತೆ ಪ್ರದರ್ಶಿಸಲಿಲ್ಲ. ತಮಿಳುನಾಡಿನ ಪ್ರಮುಖ ವಿರೋಧ ಪಕ್ಷವಾದ ಎಐಎಡಿಎಂಕೆ ಪಕ್ಷದೊಂದಿಗೆ ಎಡಪಕ್ಷಗಳು ಚುನಾವಣೆ ಮುಂದಾಗಿವೆ.

ಎಐಎಡಿಎಂಕೆ ಒಂದು ಪ್ರಾದೇಶಿಕ ರಾಜಕೀಯ ಪಕ್ಷ. ಇತರೆ ಪ್ರಾದೇಶಿಕ ಪಕ್ಷಗಳ ಗುಣ ಸ್ವಭಾವಗಳೇ ಎಐಎಡಿಎಂಕೆಯ ಧೋರಣೆಯಲ್ಲಿಯೂ ಕಂಡು ಬರುತ್ತದೆ. ಆದರೆ ಅಮೇರಿಕಾ ಭಾರತ ಅಣು ಒಪ್ಪಂದದ ವಿಚಾರದಲ್ಲಿ ಎಐಎಡಿಎಂಕೆಯು ದೃಢವಾದ ವಿರೋಧದ ನಿಲುವನ್ನೇ ತೆಗೆದುಕೊಂಡಿತ್ತು ಎಂಬುದು ಗಮನಾರ್ಹ(ಟಿಡಿಪಿ ಸಹ). ತಮಿಳುನಾಡಿನ ಮತ್ತೊಂದು ಪ್ರಮುಖ ರಾಜಕೀಯ ಪಕ್ಷವಾದ ಎಂ.ಡಿ.ಎಂ.ಕೆ.ಯು ಇದೀಗ ಎಐಎಡಿಎಂಕೆ ಕೂಟದ ಕಡೆಗೆ ವಾಲಿದೆ. ಪಿ.ಎಂ.ಕೆ. ಪಕ್ಷವು ಇನ್ನೂ ಕಾದು ನೋಡುವ ಧೋರಣೆ ಅನುಸರಿಸುತ್ತಿದೆ ಹಾಗೂ ಎಐಎಡಿಎಂಕೆ ಯೊಂದಿಗೆ ಕೈ ಜೋಡಿಸುವ ಸಂಭವ ಹೆಚ್ಚಾಗಿದೆ ಎಂದೂ ಹೇಳಲಾಗುತ್ತಿದೆ.

ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಕಾಂಗ್ರೆಸ್ ನೇತೃತ್ವದ ಯುಡಿಎಫ್ ವಿರುದ್ಧ ಸೆಣಸಲಿದೆ. ಮಹಾರಾಷ್ಟ್ರದಲ್ಲಿ ಸಿಪಿಐ ಹಾಗೂ ರೈತ ಕಾರ್ಮಿಕ ಪಕ್ಷ (ಪಿಡಬ್ಲ್ಯೂಪಿ) ಯೊಂದಿಗೆ ಸಿಪಿಐ(ಎಂ)ನ ಮೈತ್ರಿ ಯತ್ನ ಮತ್ತು ಮಾತುಕತೆ ಪ್ರಕ್ರಿಯೆ ನಡೆದಿದೆ.

ಬಿಎಸ್‌ಪಿಯು ಯಾವುದೇ ಪಕ್ಷದೊಂದಿಗೆ ಚುನಾವಣಾ ಪೂರ್ವ ಮೈತ್ರಿಯಿಲ್ಲ ಎನ್ನುವ ಧೋರಣೆಯನ್ನು ತಳೆದಿರುವುದರಿಂದ ಬಿಎಸ್‌ಪಿಯೊಂದಿಗಿನ ಚುನಾವಣಾ ಹೊಂದಾಣಿಕೆ ಸಾಧ್ಯತೆ ಇಲ್ಲವೆಂಬಂತಾಗಿದೆ. ಬಿಹಾರ ರಾಜ್ಯದಲ್ಲಿ ಚುನಾವಣೆ ಹೊಂದಾಣಿಕೆಯ ಮಾತುಕತೆಯು ಮುಂದುವರಿಯುತ್ತಿವೆ. ಸಿಪಿಐ, ಸಿಪಿಐ(ಎಂ.ಎಲ್)ಗಳ ಜೊತೆ ಸಿಪಿಐ(ಎಂ) ಮಾತುಕತೆ ನಡೆಸುತ್ತಿದೆ. ಮಾತುಕತೆ ಮುಗಿದ ಮೇಲೆ ಸ್ಪಷ್ಟ ಚಿತ್ರಣ ದೊರೆಯುವ ಸಂಭವ ಇದೆ. ಯುಪಿಎ ಅಂಗವಾಗಿರುವ ಪಕ್ಷವು ಈ ಹೊಂದಾಣಿಕೆಗೆ ಕೈ ಜೋಡಿಸುವ ಸಂಭವ ಇದೆ ಎನ್ನಲಾಗಿದೆ.ಪಶ್ಚಿಮ ಬಂಗಾಳದ ತ್ರಿಪುರಾದಲ್ಲಿ ಎಡರಂಗವು ಕಾಂಗ್ರೆಸ್ ಮತ್ತು ಬಿಜೆಪಿ ಹಾಗೂ ಅವುಗಳ ಮಿತ್ರ ಪಕ್ಷಗಳ ವಿರುದ್ಧ ಸೆಣೆಸಲಿದೆ. ಅಸ್ಸಾಂನಲ್ಲಿ ಸಿಪಿಐ ಎಯುಡಿಎಫ್ ಪಕ್ಷಗಳೊಂದಿಗೆ ಚುನಾವಣೆ ಹೊಂದಾಣಿಕೆಯ ಪ್ರಯತ್ನಗಳು ನಡೆದಿವೆ.

ಎನ್.ಡಿ.ಎ. ಸಾಧ್ಯವಾಗದ ಮೈತ್ರಿ

ಒಂದು ಕಾಲದಲ್ಲಿ 23-24 ಪಕ್ಷಗಳ ಮೈತ್ರಿ ಕೂಟ ಎಂದು ಬೀಗುತ್ತಿದ್ದ ಎನ್‌ಡಿಎ ಪಾಳೆಯದಲ್ಲಿ ಹೊರಗೆ ರಣೋತ್ಸಾಹದ ಮಾತಾಡುತ್ತಿದ್ದರೂ ಒಳಗೆ ಚಿಂತೆಯ ಗೆರೆಗಳು ಮೂಡಿವೆ. ಹರ್ಯಾಣದಲ್ಲಿ ಐಎನ್‌ಎಲ್‌ಡಿ, ಅಸ್ಸಾಂನಲ್ಲಿ ಎಜಿಪಿ ಹೊರತುಪಡಿಸಿ ಇತ್ತೀಚಿಗೆ ಎನ್‌ಡಿಎ ಕೂಟಕ್ಕೆ ಯಾವುದೇ ಹೊಸ ಮೈತ್ರಿ ಬೆಸೆಯುವುದು ಸಾಧ್ಯವಾಗಿಲ್ಲ. ಕಂದಮಲ್‌ನ ತೀವ್ರ ಹಿಂಸಾಚಾರದ ನಂತರ ಒರಿಸ್ಸಾದಲ್ಲಿ ಬಿಜೆಡಿ ಬಿಜೆಪಿ ಮೈತ್ರಿಯು ಬಸವಳಿದಂತೆ ಕಾಣುತ್ತಿದೆ. ಬಿಜೆಡಿ ಪಕ್ಷವು ಬಿಜೆಪಬಿಯ ಸಖ್ಯ ತೊರೆದರೂ ಆಶ್ಚರ್ಯವಿಲ್ಲ. ಹತಾಶ ಬಿಜೆಪಿಯು ಅಸ್ಸಾಂನಲ್ಲಿ ಎಜಿಪಿ ಜೊತೆಗೂಡಿ ಅಲ್ಪಸಂಖ್ಯಾತರ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದೆ. ಇತ್ತೀಚಿನ ಅಸ್ಸಾಂ ಬಾಂಬ್ ಸ್ಫೋಟ ಪ್ರಕರಣಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಮುಸ್ಲಿಮರು ಬಲಿಯಾಗಿದ್ದರೂ ಸಹ ಈ ಪಕ್ಷಗಳು ಮುಸ್ಲಿಂ ವಿರೋಧಿ. ವಿಷ ಪ್ರಚಾರ ನಡೆಸಲು ಹೇಸುತ್ತಿಲ್ಲ.

ಎಚ್ಚರ ! ಎಚ್ಚರ !

ಕೇಂದ್ರದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರಬೇಕಾದರೆ, ಅಡ್ವಾಣಿ ಪ್ರಧಾನಿಯಾಗಬೇಕಾದರೆ ಕರ್ನಾಟಕದಲ್ಲಿ ಗೆಲ್ಲುವ ಲೋಕಸಭಾ ಸ್ಥಾನಗಳು ನಿರ್ಣಾಯಕ ಎಂದು ಭಾವಿಸಿರುವ ಬಿಜೆಪಿ ಅದಕ್ಕಾಗಿ ಏನೆಲ್ಲಾ ಮಾಡಲು ಹೊರಟಿದೆ ಮತ್ತು ಅದು ಎಷ್ಟು ಅಪಾಯಕಾರಿ ಎಂದು ವಿವರಿಸಿದ್ದಾರೆ ಲೇಖಕರು.

ಲೋಕಸಭಾ ಚುನಾವಣೆಯತ್ತ ಕಣ್ಣು ನೆಟ್ಟ

ಬಿಜೆಪಿ ಸರ್ಕಾರ ಸ್ಥಿರ ಜನರ ಬದುಕು ಅಸ್ಥಿರ

ಜಿ.ಎನ್.ನಾಗರಾಜ್

ಹೊಲವನ್ನು ಉತ್ತು, ಬಿತ್ತು, ಕಷ್ಟಪಟ್ಟು ಬೆಳೆ ಬೆಳೆದು ಕಣದಲ್ಲಿ ರಾಶಿ ಹಾಕಿ ಮನೆಗೆ ಸಾಗಿಸಬೇಕೆನ್ನುವಾಗ ರಾತ್ರೋ ರಾತ್ರಿ ಕಣಕ್ಕೆ ಕಳ್ಳರು ನುಗ್ಗಿ ರಾಶಿ ಹಾಕಿದ ಧಾನ್ಯವನ್ನು ಕದ್ದೊಯ್ದರೆ ಹೇಗೋ ಹಾಗೆ ದರೋಡೆ ರಾಜಕೀಯ ಮಾಡಿದ ಬಿಜೆಪಿ 7 ಶಾಸಕರನ್ನು ಕೊಂಡು ಅದರಲ್ಲಿ 5 ಅನ್ನು ಮಾತ್ರ ಧಕ್ಕಿಸಿಕೊಂಡು ಕನ್ನಗಳ್ಳತನವನ್ನೇ ಜನತೆಯ ಆಶಿರ್ವಾದ, ಸ್ಥಿರ ಸರ್ಕಾರಕ್ಕೆ ಬೆಂಬಲ ಎಂದು ಬಿಂಬಿಸುತ್ತಿದೆ.

ಚುನಾವಣಾ ಫಲಿತಾಂಶ ಬರುತ್ತಿದ್ದಂತೆಯೇ ವಿವಿಧ ಟಿವಿಗಳಲ್ಲಿ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದ ಬಿಜೆಪಿ ನಾಯಕರ ಮಾತುಗಳೆಲ್ಲಾ ಲೋಕಸಭಾ ಚುನಾವಣೆಗಳ ಕಡೆಗೆ ನೆಟ್ಟಿತ್ತು. ಉತ್ತರದ 5 ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳ ಫಲಿತಾಂಶ ಬಿಜೆಪಿಯನ್ನು ಕಂಗೆಡಿಸಿದೆ. ಕೇಂದ್ರದಲ್ಲಿ ನಾವು ಅಧಿಕಾರಕ್ಕೆ ಬರುವುದು ಸಾಧ್ಯವೇ ಎಂಬ ಪ್ರಶ್ನೆ ಬಿಜೆಪಿಯ ಎಲ್ಲಾ ಅಧಿಕಾರಾಕಾಂಕ್ಷಿಗಳ ಮನಸ್ಸಿನಲ್ಲಿ ಮೂಡಿದೆ. 2004ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಡೆದ ಫಲಿತಾಂಶವನ್ನು ನೆನೆಸಿಕೊಂಡರೆ ಸಾಕು ಯಾರಿಗಾದರೂ ಇದು ಅರ್ಥವಾಗುವಂತಹುದೇ?

ಬಿಜೆಪಿ ಒಟ್ಟು ಪಡೆದ ಸ್ಥಾನಗಳು	138
ರಾಜ್ಯಗಳು	**ಸ್ಥಾನಗಳು**
ಮಧ್ಯಪ್ರದೇಶ	25
ರಾಜಸ್ಥಾನ	21
ಕರ್ನಾಟಕ	18
ಗುಜರಾತ್	14
ಮಹಾರಾಷ್ಟ್ರ	13
ಉತ್ತರಪ್ರದೇಶ	10
ಚತ್ತೀಸ್‌ಗಢ'	10
ಒರಿಸ್ಸಾ	7
ಬಿಹಾರ	5
ಉಳಿದವು	5ಕ್ಕಿಂತ ಕಡಿಮೆ

ಹಿಂದಿನ ಚುನಾವಣೆಗಳಲ್ಲಿ ಕರ್ನಾಟಕವೇ ಮೂರನೆಯದು ಮತ್ತು ಗುಜರಾತ್‌ಗಿಂತ ಹೆಚ್ಚು ಸ್ಥಾನಗಳನ್ನು ನೀಡಿದ ರಾಜ್ಯ. ಈಗ ಎರಡನೇ ರಾಜ್ಯವಾದ ರಾಜಸ್ಥಾನದಲ್ಲಿ ಬಿಜೆಪಿಗೆ ಲೋಕಸಭಾ ಸ್ಥಾನಗಳು ಗಣನೀಯವಾಗಿ ಕಡಿಮೆಯಾಗುವುದರಲ್ಲಿ ಯಾರಿಗೂ ಅನುಮಾನವಿಲ್ಲ. ಮಧ್ಯಪ್ರದೇಶದಲ್ಲಿ ಹಾಗೂ ಛತ್ತೀಸ್‌ಘಡದಲ್ಲಿ ಬಿಜೆಪಿ ಗೆಲುವಿನ ಅಂತರ ಹಾಗೂ ಮತ ಗಳಿಕೆಯ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಸ್ಥಾನಗಳು ಕಡಿಮೆಯಾಗುವ ಸಾಧ್ಯತೆಯೇ ಹೆಚ್ಚು. ಇನ್ನೂ ಬಿಜೆಪಿ ಸ್ಥಾನಗಳನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆ ಯಾವ ರಾಜ್ಯಗಳಲ್ಲಿದೆ? ಉತ್ತರ ಪ್ರದೇಶದಲ್ಲಿ 40-55 ಸ್ಥಾನಗಳವರೆಗೂ ಗಳಿಸುತ್ತಿದ್ದ ಬಿಜೆಪಿ ಹತ್ತಕ್ಕೆ ಕುಸಿದಿದೆ. ಬಿಎಸ್‌ಪಿ ಮೊದಲ ಬಾರಿಗೆ ಸ್ವಂತ ಬಲದಿಂದ ಆಡಳಿತ ಮಾಡುವಂತೆ ತನ್ನ ಬಲವನ್ನು ಹೆಚ್ಚಿಸಿಕೊಂಡಿರುವ ಉತ್ತರ ಪ್ರದೇಶದಲ್ಲಿ ಬಿಜೆಪಿಯ ವಿಧಾನಸಭಾ ಸ್ಥಾನಗಳು ಕುಸಿದಿರುವ ಹಿನ್ನೆಲೆಯಲ್ಲಿ ಅಲ್ಲಿ ಯಾವ ರಾಮಮಂದಿರದ ಮ್ಯಾಜಿಕ್ಕೂ ನಡೆಯುವುದಿಲ್ಲ ಎನ್ನುವುದು ಖಚಿತವಾಗಿದೆ. ಕಾಂಗ್ರೆಸ್ ಆಳುತ್ತಿರುವ ಹಿಂದಿನ ಲೋಕಸಭಾ ಚುನಾವಣೆಗಳಲ್ಲಿ ಹೆಚ್ಚು ಸ್ಥಾನ ಗಳಿಸಿರುವ ಕೆಲ ರಾಜ್ಯಗಳಲ್ಲಿ ಯುಪಿಎ ಮೇಲಿನ ಅತೃಪ್ತಿಯಿಂದ ಬಿಜೆಪಿ ಕೆಲ ಸ್ಥಾನ ಹೆಚ್ಚಿಸಿಕೊಳ್ಳುವ ಸಾಧ್ಯತೆ ಇರಬಹುದು. ಆದರೆ ಅನಿಶ್ಚಿತ.

ಹೀಗಾಗಿ 3ನೇ ಸ್ಥಾನದಲ್ಲಿರುವ ಕರ್ನಾಟಕ ಒಂದನೇ ಸ್ಥಾನಕ್ಕೇರಿ ಬಿಜೆಪಿಯನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತರುವ ಹೊಣೆಯನ್ನು ನಿರ್ವಹಿಸಬೇಕಾಗಿದೆ. ಇದು ಕರ್ನಾಟಕದ ಬಿಜೆಪಿಗೆ, ಮುಖ್ಯವಾಗಿ ಮುಖ್ಯಮಂತ್ರಿಗೆ ಬಿಜೆಪಿ ಕೇಂದ್ರ ನೀಡಿರುವ ಜವಾಬ್ದಾರಿ. ಅದಕ್ಕಾಗಿ ಆರೆಸ್ಸೆಸ್ ಮತ್ತು ಬಿಜೆಪಿ ಹಲವು ತಂತ್ರಗಳನ್ನು ಹೆಣೆಯತೊಡಗಿದೆ.

ಗಳಿಕೆ ಯೋಜನೆ

ಬಿಜೆಪಿಯ ಮೆದುಳಿಂದ ಆರೆಸ್ಸೆಸ್ ಅಥವಾ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಲೋಕಸಭಾ ಚುನಾವಾಣೆಗಳಲ್ಲಿ ಬಿಜೆಪಿ 28ಸ್ಥಾನಗಳನ್ನು ಗಳಿಸಿಕೊಳ್ಳಲು ಬೇಕಾದ ಮತವನ್ನುಗಳಿಸಲು ಯೋಜನೆಗಳನ್ನು ರೂಪಿಸುತ್ತಿದೆ. ಅದೇ ಸಮಯದಲ್ಲಿ ಬಿಜೆಪಿ ಸರ್ಕಾರ ಈಗ ಕನಿಷ್ಠ ಬಹುಮತವನ್ನು ಕೇವಲ ಪಕ್ಷಾಂತರ, ದರೋಡೆ ರಾಜಕೀಯ ಹಣದ ಚೆಲ್ಲಾಟ, ಅಧಿಕಾರ ಹಸ್ತಾಂತರ, ದೇವಗೌಡರ ವಿರುದ್ಧದ ಧಾಳಿ, ಭ್ರಾಂತಿರಾಜಕೀಯಗಳಿಂದ ಮಾತ್ರ ಪಡೆದಿದೆ. ಕರ್ನಾಟಕದ ಜಾತ್ಯಾತೀತ ಮನೋಭಾವದ ಜನತೆ ಕೆಲವು ಕ್ಷಣಿಕ ಕಾರಣಗಳು ಹಾಗೂ ಭ್ರಮೆಗಳಿಂದಾಗಿ ಯಡಿಯೂರಪ್ಪನವರಿಗೆ, ರೆಡ್ಡಿಕುಟುಂಬದ ರಾಜಕೀಯಕ್ಕೆ ನೀಡಿದ ಮತಗಳು ಎಂಬುದನ್ನು ಆರೆಸ್ಸೆಸ್ ಚೆನ್ನಾಗಿ ಅರಿತಿದೆ. ಎರಡು ದಶಕಗಳಿಂದಲೂ ನಿರಂತರವಾಗಿ ಕೋಮುವಾದಿ ರಾಜಕೀಯಕ್ಕೆ ಬಲಿಯಾದ ಕರಾವಳಿ ಹಾಗೂ ಘಟ್ಟಗಳಲ್ಲಿಯೇ ಬಿಜೆಪಿಯ ಬುಡ ಅಲುಗಾಡುತ್ತಿದೆ ಎಂಬುದು ಕೂಡ ಸಂಘ ಪರಿವಾರದ ಆತಂಕವನ್ನು ಹೆಚ್ಚಿಸಿದೆ.

ಮುಸ್ಲಿಮ್ ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಮತ್ತಷ್ಟು ತೀವ್ರಗೊಳಿಸಬೇಕು, ಕ್ರಿಶ್ಚಿಯನ್ನರ ವಿರುದ್ಧದ ಧಾಳಿಯನ್ನು ಮತಾಂತರ ಮೊದಲಾದವುಗಳನ್ನು ಮುಂದುವರೆಸಬೇಕು, ಹೊಸ ನೆಲೆಗಳನ್ನು ಹೊಸ ಕಾರಣಗಳನ್ನು ಸೃಷ್ಟಿಸಿಕೊಳ್ಳಬೇಕು, ಆ ಮೂಲಕ ಹಿಂದೂ ಮತಬ್ಯಾಂಕ್‌ನ್ನು ಮತ್ತಷ್ಟು ವಿಸ್ತರಿಸಿ ಗಟ್ಟಿಗೊಳಿಸಿಕೊಳ್ಳಬೇಕು, ಪ್ರಮುಖವಾಗಿ ಜೆಡಿಎಸ್‌,ನ ಭದ್ರನೆಲೆಯಾದ ದಕ್ಷಿಣ ಕರ್ನಾಟಕವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವುದಕ್ಕೆ ನಡೆಸಿರುವ ಪಕ್ಷಾಂತರ, ಹಾಗೂ ದರೋಡೆ ರಾಜಕೀಯವನ್ನು ಮುಂದುವರೆಸಬೇಕು. ಇದು ಸಂಘಪರಿವಾರದ-ಬಿಜೆಪಿಯ ಮೆದುಳಿನಲ್ಲಿ ನಡೆಯುತ್ತಿರುವ ದುಷ್ಟತಂತ್ರಗಳು,

ಭಯೋತ್ಪಾದನೆ ಮುಸ್ಲಿಂ ಮತಾಂಧರು ಬಿಜೆಪಿಯ ಕೈಯಲ್ಲಿಟ್ಟಿರುವ ಒಂದು ಬ್ರಹ್ಮಾಸ್ತ್ರ. ಅದನ್ನು ಪೂರ್ಣವಾಗಿ ಬಳಸಿಕೊಳ್ಳಲು ಭಯೋತ್ಪಾದನೆಯ

ರೇಷನ್‌ಕಾರ್ಡ್‌ಗೆ ಒತ್ತಾಯಿಸಿ ಜನರ ಪ್ರತಿಭಟನೆ



ವಿರುದ್ಧ ಅಭಿಯಾನವನ್ನು ಆರಂಭಿಸುವ, ಎಲ್ಲಾ ಶಿಕ್ಷಣ ಸಂಸ್ಥೆಗಳ ಮೇಲೆ ಈ ಅಭಿಯಾನವನ್ನು ಹೇರುವ, ಸರ್ಕಾರದ ಆಡಳಿತ ಯಂತ್ರವನ್ನು ಮುಸ್ಲಿಮರ ವಿರುದ್ಧದ ತೀವ್ರ ದ್ವೇಷವಾಗಿ ಪರಿವರ್ತಿಸುವ ಕುತಂತ್ರವನ್ನು ರೂಪಿಸಿದ್ದಾರೆ.

ಬೆಂದ ಮನೆಯಲ್ಲಿ ಗಳ ಹಿರಿಯುವುದು

ಮುಂಬಯಿಯಲ್ಲಿ ಭಯೋತ್ಪಾದಕರ ಪೈಶಾಚಿಕ ಧಾಳಿಯಾದ ಕೂಡಲೆ ಬಿಜೆಪಿಯ, ಆರೆಸ್ಸೆಸ್‌ನ ತಲೆಗಳು ಬಹಳವೇಗವಾಗಿ ಓಡಲಾರಂಭಿಸಿದುವು. ನಂತರ ನಡೆದ ವಿಧಾನ ಸಭೆ ಚುನಾವಣೆಗಳಲ್ಲಿ ಮುಖ್ಯವಾಗಿ ಕೋಟ್ಯಾಂತರ ರೂ ವೆಚ್ಚದಲ್ಲಿ ಜಾಹೀರಾತುಗಳು ಇತರ ಸಾಮಗ್ರಿಗಳನ್ನು ಹರಿಬಿಡಲಾಯಿತು. ತಮ್ಮ ಪಕ್ಷ ಎಲ್ಲಾ ರಾಜ್ಯಗಳನ್ನು ಬಾಚಿಕೊಳ್ಳುತ್ತದೆ. ಕೇಂದ್ರದ ಸಿಂಹಾಸನವೂ ತಮಗೆ ಸಿಕ್ಕಿಯೇ ಬಿಟ್ಟಿತು, ಸ್ವರ್ಗಕ್ಕೆ ಮೂರೇಗೇಣು ಬಾಕಿ ಎಂದು ಅಳೆಯಲಾರಂಭಿಸಿದರು. ಆದರೆ ರಾಜಸ್ಥಾನ ದೆಹಲಿಗಳ ಮತದಾರರು ಭಯೋತ್ಪಾದನೆಯ ನೋವು ಸಂಕಟಗಳನ್ನೂ ಸ್ವತಃ ಅನುಭವಿಸಿದವರು. ಕೋಮುವಾದವೇ, ಕೋಮುಗಲಭೆಗಳೇ ಭಯೋತ್ಪಾದನೆಯ ಅಡಿಪಾಯ ಎಂದು ಅರಿತವ[ರು] ಬಿಜೆಪಿಯನ್ನು ತಿರಸ್ಕರಿಸಿದರು. ಇದರಿಂದ ಸಂಘ ಪರಿವಾರಕ್ಕೆ ಶಾಕ್ ಹೊಡೆದಂತಾಗಿದೆ. ಅದಕ್ಕಾಗಿ ಭಯೋತ್ಪಾದನೆಯ ಪ್ರಯೋಜನ ಪಡೆಯಲಾಗುವುದಿಲ್ಲ. ತಾವು ಹೇಳುವದನ್ನೇ ಜನರು ತಾವಾಗಿಯೇ ತಮ್ಮ ಬಾಯಿಂದಲೇ ಹೇಳುವಂತಾಗಬೇಕು. ಅದರಲ್ಲಿ ಮುಖ್ಯವಾಗಿ ಕಾಲೇಜುಗಳ ತರುಣರನ್ನು ಭಾವೋದ್ರೇಕ ಗೊಳಿಸಬೇಕು. ಇದು ಭಯೋತ್ಪಾದನೆಯ ಅಭಿಯಾನದ ಮುಖ್ಯದುರುದ್ದೇಶ. ಅದಕ್ಕಾಗಿ ಚರ್ಚಾಸ್ಪರ್ಧೆ, ಭಾಷಣಸ್ಪರ್ಧೆ, ವಿಚಾರ ಸಂಕಿರಣ, ರಂಗೋಲಿಸ್ಪರ್ಧೆ ಇತ್ಯಾದಿಗಳು ಇವೆಲ್ಲವುಗಳ ಮೂಲಕ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ವಿಷಕಾರಿ ಮದರಸಗಳು ಭಯೋತ್ಪಾದಕರನ್ನು ತಯಾರು ಮಾಡುವ ಮಾಡುವ ಕಾರಖಾನೆಗಳು ಎಂದು ನಿರಂತರ ಅಪಾದನೆ ಮಾಡುವ ಇವ[ರು] ಕಾಲೇಜುಗಳನ್ನು ಕೋಮುವಾದಿ ಭಯೋತ್ಪಾದಕ[ರ] ಸೃಷ್ಟಿ ಮಾಡುವ ತಾಣಗಳನ್ನಾಗಿ ಮಾಡಲು ಹೊರಟಿದ್ದಾರೆ. ರಾಜ್ಯದ ಪ್ರಜಾಸತ್ತಾತ್ಮಕ ಶಕ್ತಿಗಳು, ಜಾತ್ಯಾತೀತ ರಾಜಕೀಯ ಪಕ್ಷಗಳು ಈ ಬಗ್ಗೆ ಧ್ವನಿಯೆತ್ತಬೇಕಾಗಿದೆ.

ಮತ್ತೊಂದು ಭಾವೋದ್ರೇಕ

ಕರ್ನಾಟಕದಲ್ಲಿ ಅತೀವ ಭಾವೋದ್ರೇಕ ಉಂಟುಮಾಡುವ ಮತ್ತೊಂದು ಖಾತರಿ ವಿಷಯವೆಂದರೆ ಕನ್ನಡ ಭಾಷೆ. ಮಹಾರಾಷ್ಟ್ರದಲ್ಲಿ ಶಿವಸೇನೆ ಹೇಗೆ ಭಾಷಾಂಧತೆಯನ್ನು ಬಳಸಿಕೊಂಡು ಕೋಮುವಾದಕ್ಕೆ ತಿರುಗಿತು ಎಂಬುದು ಅನುಭವವಿರುವ ಬಿಜೆಪಿ ಕರ್ನಾಟಕದಲ್ಲಿ ಮತ್ತೆ ಸರ್ಕಾರಿ ಯಂತ್ರವನ್ನು ಬಳಸಿಕೊಂಡು ನೆಲ, ಜಲ, ನುಡಿಯ ಹೆಸರಿನಲ್ಲಿ ... ಸೂತ್ರಗಳನ್ನೂ ರೂಪಿಸಿ ಕನ್ನಡದಶ್ರಯ[ದ] ಹಿಂದಿರುವ ಕನ್ನಡಿಗರ ಅಭಿಮಾನವ[ನ್ನು] ಮತ ಬ್ಯಾಂಕ್ ಆಗಿಕೂಡಿಸಿ ಕೊಳ್ಳ[ಲು] ಶ್ರಮಿಸುತ್ತಿದೆ.

ಈ ಪ್ರಶ್ನೆಗಳನ್ನು ತನ್ನ ಮತ ಬ್ಯಾಂಕ್ ವಿಸ್ತಾರಗೊಳಿಸಲು ಬಳಸಿಕೊಂಡರೆ ತಾನು ಕಷ್ಟಪಟ್ಟು ರೂಢಿಸಿಕೊಂಡ, ಗುಡ್ಡೆಹಾಕಿ ಕೊಂಡ ಮತಬ್ಯಾಂಕ್ ಕರಗಿಹೋಗುವುದನ್ನು ತಪ್ಪಿಸುವ ಮತ್ತೊಂದು ಮಹಾ ದುಷ್ಟಯೋಜನೆಗೆ ಕೈ ಹಾಕಿದೆ. ಜಾತ್ಯಾತೀತ ಪ್ರಜಾಸತ್ತಾತ್ಮಕ ವಿಚಾರಗಳನ್ನು ಹರಡುವ ಕೋಮುವಾದದ ವಿರುದ್ಧ ಜನರನ್ನು ಎಚ್ಚರಿಸುವ ಶಕ್ತಿಗಳ ಮೇಲೆ ಮೇಲೆಧಾಳಿ. ಇದರಲ್ಲಿ ಪತ್ರಿಕಾರಂಗದಲ್ಲಿ ಇನ್ನೂ ಪ್ರಜಾಸತ್ತಾತ್ಮಕ ಜಾತ್ಯಾತೀತ ಚಿಂತನೆ ಇರುವವರನ್ನು ಆಸೆ ಆಮಿಷಗಳ ಮೂಲಕ ಬುಟ್ಟಿಗೆ ಹಾಕಿಕೊಳ್ಳುವುದು, ಬುಟ್ಟಿಗೆ ಬೀಳದ ಪತ್ರಕರ್ತರ ಮೇಲೆ ಧಾಳಿ ಮಾಡುವುದು ಒಂದು ಭಾಗ, ಬುದ್ಧಿಜೀವಿಗಳ ಮೇಲೆ ಧಾಳಿಮಾಡುವುದು ಮತ್ತೊಂದು ಭಾಗ ಮಂಗಳೂರಿನಿಂದ ಪ್ರಕಟವಾಗುತ್ತಾ ಕಾರವಾರದಿಂದ ಕಾಸರಗೋ[ಡಿ]ನವರೆಗೆ ಪ್ರಸಾರ ಹೊಂದಿರುವ, ನಿರಂತರವಾಗಿ

ಪುಟ 12ಕ್ಕೆ

ಕರ್ನಾಟಕ: ಹಿಂದುತ್ವವಾದಿಗಳ ಭಯೋತ್ಪಾದಕ ಜಾಲ

ವಿಧಾನಸಭಾ ಚುನಾವಣೆ ನಿರ್ಣಾಯಕ ಘಟ್ಟದಲ್ಲಿತ್ತು, ಬಿಜೆಪಿಗೆ ಬಹುಮತ ಸಿಗುವುದು ಕಷ್ಟವಿತ್ತು. ಹುಬ್ಬಳ್ಳಿ ನ್ಯಾಯಾಲಯದಲ್ಲಿ ಸಿಡಿಯಿತು ಬಾಂಬು. ಅದರ ಹಿಂದೆ ಮುಸ್ಲಿಮರ ವಿರುದ್ಧ ಅಪಪ್ರಚಾರ. ಬಿಜೆಪಿಗೆ ಫಲಿತಾಂಶದ ಕುಯಿಲು. ಹೇಗೋ ಬಿಜೆಪಿ 'ದಡ ಸೇರಿತು'. ಇದೆಲ್ಲಾ ನಿಮಗೂ ಗೊತ್ತು. ಯಾವುದೋ ಕೊಲೆಯ ಸಂಬಂಧದ ಸುಳಿವಿನ ಎಳೆ ಹಿಡಿದು ಎಳೆದ ಪೊಲೀಸರಿಗೆ ಶ್ರೀರಾಮಸೇನೆಯ ಭಾರಿ ಜನಗಳೇ ಸಿಕ್ಕಿಬಿದ್ದಿದ್ದಾರೆ. ಸಿಬಿಐ ತನಿಖೆಯಿಂದ ಪೂರ್ಣ ಸತ್ಯಾಂಶ ಹೊರಬೀಳಬೇಕಾದ ಭಯಾನಕ ಪ್ರಕರಣ ಇದು.

ಮೇ 9, 2008, ಕರ್ನಾಟಕ ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುತ್ತಿದ್ದ ಸಮಯ. ಉತ್ತರ ಕರ್ನಾಟಕದ ಒಂದು ಅತಿ ಪ್ರಮುಖ ನಗರವಾದ ಹುಬ್ಬಳ್ಳಿಯ ನ್ಯಾಯಾಲಯದಲ್ಲಿ ಬಾಂಬೊಂದು ಸ್ಫೋಟಿಸಿತು. ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಲಿಲ್ಲ. ಆದರೂ ಜನರಲ್ಲಿ ಆತಂಕ. ಎಲ್ಲೋ ದೂರದಲ್ಲಿ ಆಗೀಗ ಕೇಳಿ ಬರುತ್ತಿದ್ದ ಭಯೋತ್ಪಾದನೆ ದಾಳಿಯ ಗುಮ್ಮ ನಮ್ಮ ರಾಜ್ಯದ ನಡುಮನೆಗೂ ಬಂದೇ ಬಿಟ್ಟಿತಲ್ಲ ಅಂತ.

ಯಾರೂ ಬಾಂಬ್ ಸಿಡಿಸಿದ್ದು, ಸಿಮಿ, ಲಷ್ಕರ್ ಇ ತೊಯ್ಬಾ...ಹೀಗೆ ಸಂಘಟನೆಗಳ ಹೆಸರು ಮಾಧ್ಯಮಗಳ ನಾಲಿಗೆಯಲ್ಲಿ ಕುಣಿದಾಡಿದವು. ಚುನಾವಣೆಯ ಪ್ರಚಾರಕ್ಕೆ, ಜನರಲ್ಲಿ ಮುಸ್ಲಿಂ ದ್ವೇಷವನ್ನು ಹರಡುವುದಕ್ಕೆ ಸಿಕ್ಕ ಅವಕಾಶವನ್ನು ಬಿಜೆಪಿ ಮತ್ತು ಸಂಘ ಪರಿವಾರ ಬಿಡುವುದೇ? ಸಾಕಷ್ಟು ಪ್ರಚಾರವೂ ನಡೆಯಿತು. ಚುನಾವಣೆಯಲ್ಲಿ ಬಿಜೆಪಿಗೆ ಒಳ್ಳೆ ಲಾಭವೂ ದಕ್ಕಿತು.

ಜನವರಿ 11, 2009ರಂದು ಇದೇ ಕರ್ನಾಟಕ ರಾಜ್ಯದ ಬಾಗಲಕೋಟೆ ನವನಗರದ ಪೋಲೀಸರು ಒಟ್ಟು ಏಳು ಮಂದಿ ಭಯೋತ್ಪಾದಕರನ್ನು ಬಂಧಿಸಿದರು. ಹುಬ್ಬಳ್ಳಿ ಬಾಂಬ್ ಸ್ಫೋಟದ ರೂವಾರಿಗಳಿವರು. ಬರೀ ನ್ಯಾಯಾಲಯ ಸ್ಫೋಟ ಪ್ರಕರಣ ಮಾತ್ರವಲ್ಲ, ಧಾರವಾಡ ಸಮೀಪದಲ್ಲಿ ಉದ್ದೇಶಿತ ಹೆದ್ದಾರಿ ಸೇತುವೆ ಸ್ಫೋಟ ಪ್ರಕರಣದಲ್ಲೂ ಇವರದ್ದೇ ಕೈವಾಡ. ಜನವರಿ 12 ರಂದು ಬಾಗಲಕೋಟೆ ಪೋಲೀಸರು ಮತ್ತಿಬ್ಬರು ಭಯೋತ್ಪಾದಕರನ್ನು ಬಂಧಿಸಿದರು.

ಬಾಂಬ್ ಸಿಡಿಸಿ ಶಸ್ತ್ರಾಸ್ತ್ರ ಬಳಸಿ ಜನಗಳಲ್ಲಿ ಆತಂಕ ಭಯ ಹುಟ್ಟಿಸುವುದೇ ಭಯೋತ್ಪಾದನೆ ಎಂದಾದರೆ ಇವರೂ ಸಹ ಭಯೋತ್ಪಾದಕರೇ ಹೌದು. ಆದರೆ ಯಾಕೋ ಏನೋ ಪಾಪ ನಮ್ಮ ಹಲವು ಪತ್ರಿಕೆ, ಮಧ್ಯಮದವರಿಗೆ ಅವರನ್ನು ಭಯೋತ್ಪಾದಕರು ಅಂತಾಗಲಿ, ಶಂಕಿತ ಭಯೋತ್ಪಾದಕರು ಅಂತಾಗಲಿ ಕರೆಯುವುದಕ್ಕೇ ಮನಸ್ಸಿಲ್ಲ. ಯಾಕೆ? ಬಂಧಿತ 9 ಜನರ ಪಟ್ಟಿ ನೋಡಿದರೇ ಯಾಕೆಂದು ತಿಳಿದು ಬಿಡುತ್ತದೆ.

ಬಂಧಿತ ಆರೋಪಿಗಳು ನಾಗರಾಜ ಹೊಳೆಬಸಪ್ಪ ಜಂಭಗಿ, ರಮೇಶ್ ಬೈರೂಬಾ ಪದರ್, ಬಸವರಾಜ ಹನುಮಂತ ರೂಗಿ, ಬಸವರಾಜ ಯಮುನಪ್ಪ ಡಿಗ್ಗಿ, ಲಿಂಗರಾಜ್ ಗುರುನಾಥ್ ಜಾಲಗಾರ್, ಮಂಜುನಾಥ್ ಅಂಬಣ್ಣ ಜಿಂಬವಾಡಗಿ, ದೀಪಕ್ ಪರಶುರಾಂ, ಗೋವಿಂದಕರ್, 12 ರಂದು ಬಂಧಿತರಾದ ಆರೋಪಿಗಳ ಹೆಸರು, ಹನುಮಂತಪ್ಪ ಅರ್ಜುನ್ ಸಕಾಳಿ, ಚಿನ್ನಬಸಪ್ಪ ರೇವಣ್ಣ ಸಿದ್ದಪ್ಪ ಹುಣಸಗಿ.

ಅರೆ ಒಂದಾದರೂ ಅಬ್ದುಲ್ಲಾ, ರಫೀಕ್, ಬಷೀರ್.... ಇತ್ಯಾದಿ ಹೆಸರಿಲ್ಲದ ಮೇಲೆ ಇವರು ಭಯೋತ್ಪಾದಕರಾದರೂ ಹೇಗಾದಾರೂ?!! ಅದೇ ನಮ್ಮ ಹಲವು ಮಾಧ್ಯಮದವರ ಸಮಸ್ಯೆ.

ಶ್ರೀರಾಮಸೇನೆ ಕಾರ್ಯಕರ್ತರು

ಬಂಧಿತರು ಸಾಮಾನ್ಯರೇನಲ್ಲ. ಇವರೆಲ್ಲಾ ಶ್ರೀರಾಮಸೇನೆಯ ಕಾರ್ಯಕರ್ತರು. ಮೊದಲಿಗೆ ಈ ಬಗೆಗೆ ಕೇಳಿದಾಗ ಶ್ರೀರಾಮಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್. 'ನಮ್ಮದು ದೇಶಭಕ್ತರ ಸಂಘಟನೆ, ಬಂಧಿತರಿಗೂ ನಮಗೂ ಸಂಬಂಧವೇ ಇಲ್ಲ' ಎಂದರು. ಆದರೆ ಅದರ ಬೆನ್ನ ಹಿಂದೆಯೇ ಪ್ರಮುಖ ಆರೋಪಿ ನಾಗರಾಜ ಹೊಳೆಬಸಪ್ಪ ಜಂಭಗಿಯ ಹೆಗಲ ಮೇಲೆ ಪ್ರಮೋದ್ ಮುತಾಲಿಕ್ ಮತ್ತಿತರ ಶ್ರೀರಾಮಸೇನೆಯ ಮುಖಂಡರು ಕೈ ಹಾಕಿ ತೆಗೆಸಿಕೊಂಡಿರುವ ಫೋಟೋಗಳು ಮಾಧ್ಯಮಗಳಲ್ಲಿ ಸಾಕ್ಷ್ಯ ಹೇಳಲು ಶುರು ಮಾಡಿದವು.



ನಾಗರಾಜ ಜಂಬಗಿ ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್‌ನೊಂದಿಗೆ

ಗಲಭೆ - ಕೋಮು ವಿಭಜನೆ ಗುರಿ

ಇವರ ಉದ್ದೇಶವೇನು? ಸಮಾಜದಲ್ಲಿ ಹಿಂದೂ ಮುಸ್ಲಿಂ ವಿಭಜನೆ ತರುವುದು. ಅದಕ್ಕಾಗಿ ಏನನ್ನೂ ಮಾಡಲು ಇವರು ಹೇಸುವುದಿಲ್ಲ. ಕಳೆದ ವರ್ಷ ಬೆಂಗಳೂರಿನ ಜೆ.ಸಿ.ನಗರದ ಮಸೀದಿಯೊಂದರ ಆವರಣದಲ್ಲಿ ಸತ್ತ ಹಂದಿಯ ತಲೆಯನ್ನು ಎಸೆದಿದ್ದ ಪ್ರಕರಣದಲ್ಲಿ ಇದೇ ಶ್ರೀರಾಮಸೇನೆಯ ಕಾರ್ಯಕರ್ತರು ಬಂಧನಕ್ಕೆ ಗುರಿಯಾಗಿದ್ದು, ವಿಚಾರಣೆ ನಡೆಯುತ್ತಿದೆ. ಇದೇ ನಿಟ್ಟಿನಲ್ಲಿ ಮಾರಕಾಸ್ತ್ರಗಳನ್ನು ಬಳಸಿ 'ಸಿಮಿ' ಸಂಘಟನೆಯ ಸದಸ್ಯರೆಂಬ ಆರೋಪದ ಮೇಲೆ ಬಂಧಿತರಾಗಿರುವ ಮುಸ್ಲಿಂ ಯುವಕರ ಮೇಲೆ ಮೇಲೆ ದಾಳಿ ಮಾಡಲು ಉದ್ದೇಶಿಸಿದ್ದರೆಂದು ಹೇಳಲಾಗಿದೆ.



ಸ್ಫೋಟಗೊಂಡ ಹುಬ್ಬಳ್ಳಿ ನ್ಯಾಯಾಲಯ

ಕ್ರಿಮಿನಲ್ ಗ್ಯಾಂಗ್

ಕೋಮುವಾದಿ ಗಲಭೆ, ದಾಳಿಗಳು ಮಾತ್ರವಲ್ಲ ಇದೊಂದು ದೊಡ್ಡ ಕ್ರಿಮಿನಲ್ ಚಟುವಟಿಕೆಗಳನ್ನು ನಡೆಸುವ ಗ್ಯಾಂಗ್ ಕೂಡ ಎಂಬ ಅಂಶವೂ ಬಯಲಾಗಿದೆ. ಅಸಲಿಗೆ ಈ ಒಟ್ಟು ಪ್ರಕರಣ ಬಯಲಿಗೆ ಬಂದಿದ್ದೇ ನಾಗರಾಜ ಜಂಭಗಿಯನ್ನು ಕೊಲೆ ಪ್ರಕರಣವೊಂದರಲ್ಲಿ ಪೋಲೀಸರು ವಿಚಾರಣೆ ನಡೆಸುವಾಗ. ಈ ಕ್ರಿಮಿನಲ್‌ಗಳು ಕೊಲೆ ಮಾತ್ರವಲ್ಲ, ಶಾಸಕರು, ಪ್ರಮುಖ ರಾಜಕಾರಣಿಗಳು, ಅವರ ಮಕ್ಕಳನ್ನು ಅಪಹರಿಸಿ ಹಣ ಸುಲಿಗೆ ಮಾಡಲು ಉದ್ದೇಶಿಸಿದ್ದರು ಎಂಬ ಅಂಶವೂ ಬಯಲಿಗೆ ಬಂದಿದೆ.

ಬಾಗಲಕೋಟೆ ನಗರದ ಶಾಸಕ ವೀರಣ್ಣ ಚರಂತಿ ಮಠ ಅವರ ಮಗ ನವೀನ್ ಎಂಬುವವರನ್ನು, ಬಾಗಲಕೋಟೆಯ ಮಾಜಿ ಶಾಸಕ ಪೂಜಾರದಿಂದ ಹಣ ಸುಲಿಗೆ ಮಾಡುವ ಯೋಜನೆ ಇತ್ತಂತೆ ಇವರಿಗೆ. ಅದೇ ರೀತಿ ಬಾಗಲಕೋಟೆಯ ಚಿನ್ನದ ವ್ಯಾಪಾರಿ ದಿನೇಶ್ ಬಾಷಿ, ರವಿ ಕೋಡೇಕರ ಅವರನ್ನು ಕೊಂದು ದರೋಡೆ ಮಾಡುವ ಸಂಚು ಇತ್ತು ಎಂಬ ಅಂಶ ಕೂಡ ಬಯಲಿಗೆ ಬಂದಿದೆ.

ಪ್ರಮುಖ ರಾಜಕಾರಣಿಗಳನ್ನು ಕೊಂದು ಆ ಆರೋಪವನ್ನು ಸಿಮಿ ಕಾರ್ಯಕರ್ತರ ತಲೆಗೆ ಕಟ್ಟುವ ಸಂಚು ಕೂಡ ಇವರಿಗೆತ್ತೆಂದು ಆಘಾತಕಾರಿ ಅಂಶಗಳು ಒಂದೊಂದಾಗಿ ಬಯಲಾಗುತ್ತಿದೆ. ಕೆಲವೊಂದು ಪ್ರಕರಣಗಳ ವಿಚಾರಣೆಗಾಗಿ ತಮಗೆ 'ಕಿರುಕುಳ' ನೀಡಿದ ಪೋಲೀಸ್ ಅಧಿಕಾರಿಗಳನ್ನು ಕೊಲೆ ಮಾಡಲು ಸಂಚು ಮಾಡಿದ್ದರು ಎಂದರೆ ಈ ತಂಡದ ಕೊಲೆ ಪಾತಕನ ಯಾವ ಮಟ್ಟದಲ್ಲಿದೆ ಎಂಬುದು ಅರಿವಾಗುತ್ತದೆ.

ಹಿಂದೂಗಳು ಭಯೋತ್ಪಾದಕರಾಗಲೂ ಸಾಧ್ಯವೇ ಇಲ್ಲ ಅಂತ ಈಗಲೂ ಕೆಲವರು ಬಡಬಡಿಸುವುದನ್ನು ನಾವು ಕೇಳುತ್ತಿದ್ದೇವೆ. ಅಂತಹವರು ಈ ಪ್ರಕರಣದ ಬಗೆಗೆ ಸ್ವಲ್ಪ ಸಾವಧಾನಚಿತ್ತರಾಗಿ ದೃಷ್ಟಿ ಹರಿಸಬೇಕು:

ಇದೆಲ್ಲಾ ಬೆಳವಣಿಗೆಯನ್ನು ನೋಡುವಾಗ ಪ್ರಜ್ಞಾವಂತರಾದ ಯಾರಿಗೇ ಆದರೂ ರಾಜ್ಯದ ವಿಧಾನಸಭಾ ಚುನಾವಣೆಗಳ ಮತ ಎಣಿಕೆ ನಡೆಯುವಾಗಿನ ಪರಿಸ್ಥಿತಿ ನೆನಪಿಗೆ ಬರಲೇ ಬೇಕು.

ಒಂದು ಹಂತದಲ್ಲಿ ಬಿಜೆಪಿಯ ಸ್ಥಾನಗಳು 90-100 ರ ನಡುವೆ ನಿಲ್ಲಬಹುದು. 100ರ ಗಡಿ ದಾಟುವದಿಲ್ಲ ಎಂಬಂತ್ತಿತ್ತು. ಮತ್ತೊಂದು ಕಡೆ ಜೆಡಿ(ಎಸ್) 36-38 -40 ರ ನಡುವೆ ಏರಿಳಿತ ಕಾಣುತ್ತಿತ್ತು. ಕಾಂಗ್ರೆಸ್ ಮುನ್ನಡೆ 70 ರಿಂದ 80ರ ನಡುವೆ ಹೊಯ್ದಾಡುತ್ತಿತ್ತು. ಆಗ ಬಿಜೆಪಿಯ ಮುಖಂಡರೂ ಕೆಲವರು ನಿರಾಶೆಯಿಂದ ಕೈ ಚೆಲ್ಲಿದಂತೆ ಮಾತನಾಡಿದ್ದರು. ಕೊನೆಗೆ ಬಿಜೆಪಿ ಮುನ್ನಡೆ ಪ್ರಯಾಸ ಪಟ್ಟು 110ಕ್ಕೆ ನಿಂತಿತು. ಸರಳ ಬಹುಮತ ಸಿಗಲಿಲ್ಲ.

ಗೆಲುವು ಎಂಬುದು ತೀರಾ ಪ್ರಯಾಸ ಎಂಬುದು ಬಿಜೆಪಿ ಮುಖಂಡರಿಗೆ ಮೊದಲೇ ಅರಿವಿತ್ತು. ಸಮಾಜದಲ್ಲಿ ಕೋಮುಭಾವನೆ ಕೆರಳಿಸದೇ, ಜನರನ್ನು ಉದ್ರೇಕಿಸದೇ ಗೆಲುವು ಅಸಾಧ್ಯ ಎಂಬುದು ಸ್ಪಷ್ಟವಾಗಿತ್ತು. ಹುಬ್ಬಳ್ಳಿ ಸುತ್ತಮುತ್ತಲ ಭಾಗದಲ್ಲಿ ಹುಬ್ಬಳ್ಳಿ ನ್ಯಾಯಾಲಯ ಬಾಂಬ್ ಸ್ಫೋಟದಿಂದ ಬಿಜೆಪಿ ಲಾಭವಾಗಿದೆ ಎಂಬುದು ನಿಚ್ಚಳವಾಗಿದೆ. ಹಾಗಿದ್ದರೆ ಇದನ್ನೆಲ್ಲಾ ಯೋಜಿಸಿದವರು ಯಾರು?

ಈ ಒಟ್ಟು ಪ್ರಕರಣದಲ್ಲಿ ಕೇವಲ ಶ್ರೀರಾಮಸೇನೆ ಮಾತ್ರವೇ ಇದೆಯೋ? ಇಲ್ಲಾ ತೆರೆಯ ಮರೆಯಲ್ಲಿ ಇನ್ನಷ್ಟು ಕೈಗಳಿವೆಯೋ? ಇದೆಲ್ಲಾ ತನಿಖೆಯಾಗಬೇಕಿದೆ. ಏಕೆಂದರೆ ಜನತೆಗೆ ಸತ್ಯ ತಿಳಿಯುವ ಹಕ್ಕಿದೆ ಮತ್ತು ತಿಳಿಯ ಎಚ್ಚರವಹಿಸಬೇಕಾದ ಅಗತ್ಯವೂ ಇದೆ.

ಇದೇನಾ ಆತ್ಮಹತ್ಯಾ ದಳ?

ಹಿಂದೆ ಒಮ್ಮೆ ಇದೇ ಪ್ರಮೋದ್ ಮುತಾಲಿಕ್ ಪತ್ರಿಕಾಗೋಷ್ಠಿ ನಡೆಸಿ ಬಹಿರಂಗವಾಗಿ ತಮ್ಮ ಸಂಘಟನೆಯು ಹಿಂದೂ ಆತ್ಮಹತ್ಯಾ ದಳ ರಚಿಸಿದೆ ಎಂದೂ ಘೋಷಿಸಿದ್ದರು. 'ಆತ್ಮಹತ್ಯಾ ದಾಳಿ ಮಾಡುತ್ತೀರಾ' ಎಂಬ ಪ್ರಶ್ನೆಗೆ ಇಲ್ಲಾ ಆತ್ಮಹತ್ಯಾ ದಾಳಿ ಮಾಡುವುದಿಲ್ಲ. ಕೊಲ್ಲುತ್ತೇವೆ ಎಂದು ಉತ್ತರಿಸಿದ್ದರು. ಈ ದೇಶದಲ್ಲಿ ಕಾನೂನಿನ ಆಡಳಿತ, ಈ ದೇಶಕ್ಕೊಂದು ಸಂವಿಧಾನ, ಕಾನೂನು ಇದೇ ಅಂತಾ ಇದ್ದಿದ್ದರೆ ಅಂದೇ ಪ್ರಮೋದ್ ಮುತಾಲಿಕ್‌ನ ಬಂಧನ ಆಗಬೇಕಾಗಿತ್ತು. ಯಾವ ಅಪರಾಧವನ್ನು ಮಾಡದೆಯೂ ಮುಸ್ಲಿಂ ಎಂಬ ಒಂದೇ ಕಾರಣಕ್ಕೆ ಅನುಮಾನದ ಅಪಮಾನ, ಬಂಧನ, ವಿಚಾರಣೆ, ಕಿರುಕುಳ ಎದುರಿಸ ಬೇಕಾಗಿರುವ ಭಾರತದ ಪರಿಸ್ಥಿತಿಯಲ್ಲಿ 'ಕೊಲ್ಲುತ್ತೇವೆ, ಸುಡುತ್ತೇವೆ, ಆತ್ಮಹತ್ಯಾ ದಳ ರಚಿಸಿದ್ದೇವೆ' ಎಂದವರ ಬಗೆಗೆ ಏನೆಂದೂ ಕಾನೂನು ಕ್ರಮಗಳಿಲ್ಲ ಎಂಬುದು ಎಂತಹ ಆತಂಕಕಾರಿಯಾದ ವಿಚಾರ. ಬಹುಶಃ ಮುತಾಲಿಕ್ ಹೇಳಿದ 'ದಳ' ಇದೇ ಇರಬಹುದೇ? ಇನ್ನಾದರೂ ತನಿಖೆಯಾಗಲಿ.

ಪ್ರಮೋದ್ ಮುತಾಲಿಕ್ ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲರನ್ನೂ ಕೂಡಲೇ ಬಂಧಿಸಿ ವಿಚಾರಣೆಗೆ ಗುರಿಪಡಿಸಬೇಕು. 'ಅದಮ್ಯ ಹಿಂದುತ್ವ ಪ್ರೇಮ'ವನ್ನೇ ಎದೆಯಲ್ಲಿ ತುಂಬಿಕೊಂಡ 'ಹಿಂದೂಪರ' ಬಿಜೆಪಿ ಸರ್ಕಾರದ ಅಡಿಯಲ್ಲಿ ನಡೆಯುವ ವಿಚಾರಣೆ ಯಾವ ರೀತಿ ನಡೆಯಬಹುದು ಎಂಬುದನ್ನು ಯಾರಾದರೂ ಸುಲಭವಾಗಿಯೇ ಊಹಿಸಬಹುದು. ಆದ್ದರಿಂದ ಈ ಒಟ್ಟು ಪ್ರಕರಣದ ವಿಚಾರಣೆ ಸಿಬಿಐ ನಿಂದ ಆಗಬೇಕು.

ಈ ಬಾರಿಯೂ ಬಿಕ್ಕಟ್ಟು ಆರಂಭವಾದದ್ದು ಬಂಡವಾಳಶಾಹಿಯ ಕೋಟೆಯೆನಿಸಿದ ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲೇ. ಸುಮಾರು ಒಂದು ವರ್ಷದಿಂದ ಈ ಬಗ್ಗೆ ಸಂಕೇತಗಳು ದೊರೆಯುತ್ತಿದ್ದವು. ಈ ಅಕ್ಟೋಬರ್ ತಿಂಗಳಲ್ಲಿ ಇದು ಭುಗಿಲೆದ್ದಿತು. ಇದರ ಮೂಲವನ್ನು 1980ರ ಮತ್ತು 1990ರ ದಶಕದಲ್ಲಿ ಅದು ಜಗತ್ತಿಗೆಲ್ಲಾ ಬೋಧಿಸಿದ, ಹೇರಿದ ನವ-ಉದಾರವಾದಿ ನೀತಿಗಳಲ್ಲಿ, ಅವುಗಳ ಭಾಗವಾಗಿ ಬಂದ ಹಣಕಾಸಿನ 'ಉದಾರೀಕರಣ'ದಲ್ಲಿ ಕಾಣಬಹುದು.

ಜಾಗತೀಕರಣದ ಹೆಸರಿನಲ್ಲಿ ಅಮೆರಿಕಾ ನೇತೃತ್ವದ ಸಾಮ್ರಾಜ್ಯಶಾಹಿ ದೇಶಗಳು ಮುಂದೊತ್ತಿದ ಆರ್ಥಿಕ ನೀತಿಗಳಿಂದಾಗಿ ಹಣಕಾಸು ಬಂಡವಾಳ ಜೂಜುಕೋರತನದಲ್ಲಿ ತೊಡಗಲು ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿತು. ಹಣ ಹೂಡಿಕೆಗಳು, ಸಾಲಗಳು ಸರಕುಗಳನ್ನು ಮತ್ತು ಸೇವೆಗಳನ್ನು ಉತ್ಪಾದಿಸುವ ನಿಜವಾದ ಆರ್ಥಿಕ ವ್ಯವಸ್ಥೆಗೆ ಹೋಗದೆ ಹಣಕಾಸು ಮಾರುಕಟ್ಟೆಯ ಜೂಜುಕೋರ ಚಟುವಟಿಕೆಗಳಿಗೆ ಹೋದವು. ಶೇರು ಮಾರುಕಟ್ಟೆ, ಸಾಲ ಮಾರುಕಟ್ಟೆ, ವಿದೇಶೀ ವಿನಿಮಯ ಮಾರುಕಟ್ಟೆ ಮುಂತಾದವುಗಳಲ್ಲಿ ಹಣ ಹೂಡಿಕೆ ಬ್ಯಾಂಕುಗಳು ಎನಿಸಿಕೊಂಡವುಗಳು, ಹೆಡ್ಜ್ (ಪಣಭದ್ರ) ಫಂಡ್‌ಗಳು, ಮ್ಯುಚುವಲ್ ಫಂಡ್ ಗಳು ಇತ್ಯಾದಿಗಳಲ್ಲಿ 'ನವೀನ' ವಿಧಗಳ ಕ್ಲಿಷ್ಟ ವ್ಯವಹಾರಗಳು ನಡೆಯಲಾರಂಭಿಸಿದವು. ವಾಯಿದಾ ವ್ಯವಹಾರ'ಫ್ಯೂಚರ್ಸ್) ಇತ್ಯಾದಿ 'ನವೀನ' ಸಾಧನಗಳ ಮೂಲಕ ಈ ಜೂಜುಕೋರ ಚಟುವಟಿಕೆಗಳು ಭರದಿಂದ ನಡೆಯಲಾರಂಭಿಸಿದವು. ಇವುಗಳ ಮೇಲೆ ಯಾವುದೇ ನಿಯಂತ್ರಣಗಳಿಲ್ಲ.

ವಾಸ್ತವವಾಗಿ 1999ರಲ್ಲಿ ಅಮೆರಿಕನ್ ಸರಕಾರ 'ಹಣಕಾಸು ಸೇವೆಗಳ ಆಧುನೀಕರಣ ಕಾನೂನ'ನ್ನು ಪಾಸು ಮಾಡಿ ಎಲ್ಲಾ ಹಣಕಾಸು ನಿಯಂತ್ರಣಗಳನ್ನು ತೆಗೆದು ಹಾಕಿತು. ಈ ಮೂಲಕ ಹಣಕಾಸು ಸಂಸ್ಥೆಗಳು ಅತ್ಯಂತ ಬೇಜವಾಬ್ದಾರಿಯಿಂದ, ಅತ್ಯಂತ ಮಿತಿಮೀರಿದ ದುರಾಸೆಯಿಂದ, ಧನಲೋಭದಿಂದ ವರ್ತಿಸಲು ಸಂಪೂರ್ಣ ಅವಕಾಶ ಕಲ್ಪಿಸಲಾಯಿತು. ಇದು ಸಂಪೂರ್ಣ ಆರ್ಥಿಕವನ್ನು ಏರುಪೇರು ಮಾಡಿದುದರಲ್ಲಿ ಆಶ್ಚರ್ಯವಿಲ್ಲ. ತೈಲಮಾರುಕಟ್ಟೆಯಲ್ಲಿ ಇಂತಹ ವಾಯಿದಾ ವ್ಯವಹಾರಗಳು, ಅದೇ ರೀತಿ ಆಹಾರಧಾನ್ಯಗಳ ಮಾರುಕಟ್ಟೆಯಲ್ಲಿ ವಾಯಿದಾ ವ್ಯವಹಾರಗಳಿಂದಲೇ ತೈಲ ಬೆಲೆ ಬ್ಯಾರಲ್ಲಿಗೆ 140ಡಾಲರುಗಳಿಗೇರಿದ್ದು, ವಿಶ್ವಾದ್ಯಂತ ಆಹಾರ ಬಿಕ್ಕಟ್ಟು ಬಡಜನಗಳ ಬದುಕನ್ನು ಇನ್ನಷ್ಟು ಅಸಹನೀಯಗೊಳಿಸಿದ್ದು.

ಪ್ರಸಕ್ತ ಬಿಕ್ಕಟ್ಟಿಗೆ ಬರೋಣ. ಇದಕ್ಕೆ ತಕ್ಷಣದ ಕಾರಣ 'ಸಬ್ ಪ್ರೈಮ್' ಅಂದರೆ ಸರಿಯಾದ ಭದ್ರತೆಯಿಲ್ಲದೆ ಬೇಕಾಬಿಟ್ಟಿ ಮನೆಸಾಲಗಳನ್ನು ನೀಡಿದ್ದು ಎಂಬುದನ್ನು ಈಗ ಎಲ್ಲರೂ ಒಪ್ಪುತ್ತಾರೆ.

ಏನಿದು ಸಬ್-ಪ್ರೈಮ್ ಅಂದರೆ ಭದ್ರತೆಯಿಲ್ಲದ ಸಾಲಗಳು ಮತ್ತು ಅವುಗಳಿಗೂ ಈ ಬಿಕ್ಕಟ್ಟಿಗೂ ಏನು ಸಂಬಂಧ?

ಎಕ್ಸ್ ಎಂಬ ಒಬ್ಬ ಸಾಲ ಬೇಕಾದ ವ್ಯಕ್ತಿಯಿದ್ದಾನೆ




ಅಮೆರಿಕಾದಿಂದ ಬಂದೆರಗಿರುವ ಆರ್ಥಿಕ ಬಿಕ್ಕಟ್ಟೆಂಬ ಮಹಾ ಸುನಾಮಿ ಜಗತ್ತನ್ನೇ ಅಲುಗಾಡಿಸುತ್ತಿದೆ. ಈ ಬಿಕ್ಕಟ್ಟು ಹುಟ್ಟಿದ್ದು ಯಾಕೆ? ಅದಕ್ಕೆ ಯಾರು ಹೊಣೆ?


ಆರ್ಥಿಕ ಬಿಕ್ಕಟ್ಟೆಂಬ ಮಹಾಸುನಾಮಿ

ಎಂದಿಟ್ಟುಕೊಳ್ಳಿ. ಆತನಿಗೊಂದು ನಿಯಮಿತ ಕೆಲಸವಿಲ್ಲ ಅಥವ ಬೇರೆ ಯಾವುದೇ ಆಸ್ತಿಯೂ ಇಲ್ಲ. ಇಂತವನನ್ನು ಸಬ್ ಪ್ರೈಮ್ ಸಾಲಗಾರ ಅಂದರೆ ಸರಿಯಾದ ಭದ್ರತೆ ಅಥವ ಅಡಮಾನ ಕೊಡಲಾಗದ ಸಾಲಗಾರ ಎನ್ನಲಾಗುತ್ತದೆ. ಆತನಿಗೆ ಮನೆಸಾಲ ಕೊಟ್ಟರೆ ಅದನ್ನು ಮರುಪಾವತಿ ಮಾಡುವ ಆದಾಯವಾಗಲೀ, ಆಸ್ತಿಯಾಗಲೀ ಆತನ ಬಳಿಯಿಲ್ಲ. ಅಂತವನಿಗೆ ಒಬ್ಬ ಅಡಮಾನ ಏಜೆಂಟ್ ಬಂದು ತಾನು ಅವನಿಗೆ ಕಡಿಮೆ ಬಡ್ಡಿದರದಲ್ಲಿ ಮನೆ ಸಾಲ ಕೊಡಿಸುತ್ತೇನೆ ಎನ್ನುತ್ತಾನೆ. ಮುಂದಿನ ಎರಡು ವರ್ಷಗಳಲ್ಲಿ ಬಡ್ಡಿದರ ಏರುತ್ತದೆ ಎಂದೇನೂ ಅವನಿಗೆ ಹೇಳುವುದಿಲ್ಲ (ಇಂತಹ ಏಜೆಂಟರು ಬಹಳ ಮಂದಿ ಮನೆಸಾಲಗಳನ್ನು ಪಡೆಯುವಂತೆ ಜನಗಳಿಗೆ ಪ್ರಲೋಭನೆ ಒಡ್ಡಿದರು. ಅಪಾರ ಪ್ರಮಾಣದಲ್ಲಿ ಇಂತಹ ವ್ಯವಹಾರಗಳು ನಡೆಯುವಂತಾಯಿತು). ಈ ಎಲ್ಲಾ ಸಾಲಗಳನ್ನು ಮತ್ತು ಇನ್ನಿತರ ಕೆಲವು ಸಾಲಗಳನ್ನು ಒಟ್ಟುಗೂಡಿಸಿ ಆ ಅಡಮಾನ ಕಂಪೆನಿ ಅದನ್ನೊಂದು ಹಣಕಾಸು ಸಾಧನವಾಗಿ ಅಂದರೆ ಮಾರುಕಟ್ಟೆಯಲ್ಲಿ ಮಾರಬಹುದಾದ, ಕೊಂಡುಕೊಳ್ಳಬಹುದಾದ ಒಂದು ಸಾಧನವಾಗಿ ಪರಿವರ್ತಿಸುತ್ತದೆ. ಅದನ್ನು ಒಂದು 'ಡಿರೈವೇಟಿವ್' ಅಂದರೆ ಆ ಹಣಕಾಸು ಚಟುವಟಿಕೆಯಿಂದ 'ವ್ಯುತ್ಪತ್ತಿ'ಯಾದದ್ದು ಎನ್ನಲಾಗುತ್ತದೆ.

ಇಂತಹ ಸಬ್ ಪ್ರೈಮ್ ಅಥವಾ ಕಡಿಮೆ ಭದ್ರತೆಯ ಸಾಲಗಳನ್ನು ಸೇರಿಸಿ ಇದಕ್ಕೆ 'ಕೊಲ್ಲೇಟರಲ್ ಡೆಟ್ ಒಬ್ಲಿಗೇಶನ್ಸ್' (ಸಿಡಿಒ) ಅಂದರೆ ಪರೋಕ್ಷ



ಸಾಲ ಬಂಧಗಳು ಅಥವಾ ಮುಚ್ಚಳಿಕೆಗಳು ಎಂಬ ಹೆಸರು ಕೊಡಲಾಯಿತು. ಉದಾಹರಣೆಗೆ ಆ ಅಡಮಾನ ಕಂಪನಿ ಇಂತಹ ಒಂದು ಕೋಟಿ ರೂಪಾಯಿಗಳ ಮೊತ್ತದ ಸಿಡಿಒ ಸೃಷ್ಟಿಸಿತು ಎಂದಿಟ್ಟುಕೊಳ್ಳೋಣ. ಈ ಸಿಡಿಒ ಒಂದು ಆಸ್ತಿಯಂತೆ ಭಾಗಶಃ ಅಥವ ಪೂರ್ಣವಾಗಿ ಮಾರಾಟ ಮಾಡಬಲ್ಲ ಅಥವಾ ಕೊಂಡುಕೊಳ್ಳ ಬಲ್ಲ ಒಂದು ಹಣಕಾಸು ಸಾಧನವಾಗುತ್ತದೆ. ಆ ಅಡಮಾನ ಕಂಪನಿ ಈ ಸಿಡಿಒ ಗಳನ್ನು ಬೇರೆ ಬೇರೆ ಹೂಡಿಕೆದಾರರಿಗೆ ಅಂದರೆ ಅಡಮಾನ ಕಂಪನಿಗಳು, ಬ್ಯಾಂಕುಗಳು ಇತ್ಯಾದಿಗಳಿಗೆ ಮಾರುತ್ತದೆ. ಸಹಜವಾಗಿಯೆ ಮೇಲೆ ಹೇಳಿದ ಕಂಪನಿ ತನ್ನ ಸಿಡಿಒ ಗಳನ್ನು ಒಂದು ಕೋಟಿ ರೂ.ಗಿಂತ ಹೆಚ್ಚಿನ ಮೊತ್ತಕ್ಕೆ ಮಾರುತ್ತದೆ. ಅದೇ ಅದರ ಲಾಭ. ಈ ಸಿಡಿಒಗಳನ್ನು ಹೆಚ್ಚಿನ ಬೆಲೆ ಕೊಟ್ಟು ಇನ್ನೊಂದು ಕಂಪನಿ ಏಕೆ ತೆಗೆದುಕೊಳ್ಳುತ್ತದೆ? ಏಕೆಂದರೆ ಅದಕ್ಕೆ ಈ ಒಂದು ಕೋಟಿ ರೂ. ಸಾಲದ ಮೇಲೆ ಮುಂದಿನ ವರ್ಷಗಳಲ್ಲಿ ಬಡ್ಡಿ ಬರುತ್ತದೆ, ಜತೆಗೆ ಅಡಮಾನವಾದ ಮನೆಗಳ ಮೌಲ್ಯವೂ ಹೆಚ್ಚುತ್ತದೆ ಎಂಬ ನಿರೀಕ್ಷೆಯಿರುತ್ತದೆ. ಕೆಲವೊಮ್ಮೆ ಇದನ್ನು ಕೊಂಡುಕೊಂಡ ಹೂಡಿಕೆದಾರರು ಅದರ ಭವಿಷ್ಯದ ಮೌಲ್ಯದ ಮೇಲೆ ಪಣ(ಜೂಜಿನಲ್ಲಿದ್ದಂತೆ) ಕಟ್ಟಿ ಅದನ್ನು



'ವಾಯಿದಾ'(ಫ್ಯೂಚರ್ಸ್) ಸಾಧನ ವಾಗಿಯೂ ಮಾರುತ್ತಾರೆ. ಹೀಗೆ ಎಕ್ಸ್ ಎಂಬಾತನ ಮನೆಸಾಲವೇ ಒಂದು ಆಸ್ತಿಯಾಗಿ ಪರಿವರ್ತನೆಗೊಂಡು ಬೇರೆ-ಬೇರೆಯವರ ಕೈಗಳಲ್ಲಿರುತ್ತದೆ. ಅವರಿಗೆ ಅದರ ಮೂಲ ಸ್ವರೂಪ ಏನೆಂದೇ ತಿಳಿದಿರುವುದಿಲ್ಲ.!

ಆದರೆ ಬಡ್ಡಿದರಗಳು ಏರಲಾರಂಭಿಸಿದಾಗ ಮೂಲ ಸಾಲಗಾರ ಎಕ್ಸ್ ಗೆ ತನಗೆ ಸಾಲ ಮರುಪಾವತಿ ಮಾಡುವ ಶಕ್ತಿಯಿಲ್ಲ ಎಂದು ತಿಳಿಯುತ್ತದೆ, ಆತನದು ಸುಸ್ತಿ ಸಾಲವಾಗುತ್ತದೆ. ಅಂತಹ ಸಂದರ್ಭದಲ್ಲಿ ಅದರ ಸಿಡಿಒ ಯಾರ ಕೈಯಲ್ಲಿದೆಯೋ ಆ ಹೂಡಿಕೆದಾರ ಎಕ್ಸ್ ನ ಮನೆಯನ್ನು ಹರಾಜು ಹಾಕಬಹುದು. ಆದರೆ ಕೋಟಿಗಟ್ಟಲೆ ಸಬ್ ಪ್ರೈಮ್ ಸಾಲಗಾರರು ಸಾಲ ಬಾಕಿ ಮಾಡಿಕೊಂಡಾಗ ವಸತಿ ಮಾರುಕಟ್ಟೆಯಲ್ಲಿ ಕೇವಲ ಮಾರುವವರೇ ಇರುತ್ತಾರೆ, ಕೊಂಡುಕೊಳ್ಳುವವರೇ ಇರುವುದಿಲ್ಲ. ಸಹಜವಾಗಿಯೇ ಆ ಮನೆಗಳ ಮೌಲ್ಯ ಕುಸಿಯುತ್ತದೆ. ಆಗ ಈ ಸಿಡಿಒ ಗಳನ್ನು ಖರೀದಿಸಿದವರು ಆತಂಕಕ್ಕೊಳ ಗಾಗುತ್ತಾರೆ. ನಿಧಾನವಾಗಿ ಇದು ಇಂತಹ ವ್ಯವಹಾರಗಳನ್ನು ನಡೆಸಿದ ಎಲ್ಲಾ ಹಣಕಾಸು ಕಂಪನಿಗಳಿಗೆ ಹರಡುತ್ತದೆ. ಒಟ್ಟು ಫಲಿತಾಂಶವೆಂದರೆ ಹಣಕಾಸು ವ್ಯವಸ್ಥೆ ದಿವಾಳಿಯಾಗುತ್ತದೆ. ಈಗ ಆಗಿರುವುದು ಅದೇ.

ಅಮೆರಿಕಾದಲ್ಲಿ ಈ ಬಿಕ್ಕಟ್ಟು ಹೇಗೆ ಪ್ರಕಟಗೊಂಡಿತು?

ಹಣಕಾಸು ನಿಯಂತ್ರಣಗಳನ್ನೆಲ್ಲ ತೆಗೆದು ಹಾಕಿದ್ದರಿಂದ ಅಡಮಾನ ಸಾಲ ಕೊಟ್ಟವರು ಅವನ್ನೆಲ್ಲಾ ಸೇರಿಸಿ 'ಸೆಕ್ಯೂರಿಟಿ'ಗಳಾಗಿ ಅಂದರೆ ಸಾಲಪತ್ರಗಳಾಗಿ ಅಥವಾ ಹುಂಡಿಗಳಾಗಿ ಮಾಡಿ ಬೇರೆ ಬೇರೆ ಹೂಡಿಕೆದಾರರಿಗೆ ಮಾರಿದರು. ಈ ಅವರಿಗೆ ಸಾಲ ಮರುಪಾವತಿಯಾದರೂ ಒಂದೇ ಆಗದಿದ್ದರೂ ಒಂದೇ, ಏನ ವ್ಯತ್ಯಾಸವಾಗುತ್ತಿರಲಿಲ್ಲ. ನಷ್ಟದ ಸಂಭವವಿರುವ ಈ 'ಸೆಕ್ಯೂರಿಟಿ'ಗಳು ಅವುಗಳ ನಿಜಸ್ವರೂಪದ ಅ ಇಲ್ಲದ ಹಲವು ಹೂಡಿಕೆದಾರರ ಕೈಬದಲಾದವ ಇದು ಮಾರುಕಟ್ಟೆ ಭಾಷೆಯಲ್ಲಿ ಒಂದು ರೀತಿಯ 'ಉತ್ಕರ್ಷ' ಅಥವಾ 'ಬೂಮ್' ಉಂಟು ಮಾಡಿತು ಇದಕ್ಕೆ ಅಲ್ಲಿಯ ಸರಕಾರದ ತೆರಿಗೆ ಕ್ರಮಗ ಪ್ರೋತ್ಸಾಹವೂ ಸಿಕ್ಕಿತು. ಈ ಅವಧಿಯಲ್ಲಿ ಮನೆಗ ಬೆಲೆಗಳೂ ಏರುತ್ತಿದ್ದವು. ಆದ್ದರಿಂದ ಎಲ್ಲರು ಖುಶಿಯಲ್ಲಿದ್ದರು. ಏಕೆಂದರೆ ಈ ಹಣಕಾಸ ಸಾಧನಗಳಲ್ಲಿ ವ್ಯವಹಾರ ನಡೆಸಿದವರಿಗೆ ಒಳ್ಳೆ ಪ್ರತಿಫಲ ಸಿಗುತ್ತಿತ್ತು. ಈ 'ಉತ್ಕರ್ಷ ಜಗತ್ತಿಗೆಲ್ಲಾ ಹರಡಿತು. ಎಲ್ಲರೂ 'ಸೆಕ್ಯುರಿಟಿ'ಗಳನ್ನು ಕೊಳ್ಳುವ-ಮಾ ವ್ಯವಹಾರಗಳಲ್ಲಿ ಅತ್ಯಂತ ಉತ್ಸಾಹದಿಂ ಭಾಗವಹಿಸಲಾರಂಭಿಸಿದರು.

ಈ ವ್ಯವಹಾರಗಳಲ್ಲಿ ಬ್ಯಾಂಕುಗಳಿಗ ಹೆಚ್ಚಿನ ಆಸಕ್ತಿ ಉಂಟಾಗಲಾರಂಭಿಸಿತು ಅವುಗಳಿಗೂ ಈ ವ್ಯವಹಾರಗಳ ಭಾಗಿಗಳಾದರೆ ಸಿಗುವ ಶುಲ್ಕಗಳು ಮ ಕಮಿಶನ್‌ಗಳ ಮೂಲಕ ಲಾಭಗಳಲ್ಲಿ ಹೆಚ್ಚ ಪಾಲು ಸಿಗಲಾರಂಭಿಸಿತು. ಪ್ರಲೋಭ ಹೆಚ್ಚಿತು. ತಾವು ಸಾಲ ಕೊಟ್ಟು ಅದರಿಂದ ಪಡೆಯು ಬಡ್ಡಿಯ ಆದಾಯಕ್ಕಿಂತ ಈ 'ಸೆಕ್ಯೂರಿಟಿ 'ಡಿರೈವೇಟಿವ್' ಇತ್ಯಾದಿಗಳಲ್ಲೇ ಅವುಗಳ ಆ ಹೆಚ್ಚಲಾರಂಭಿಸಿತು. ಇವನ್ನೆಲ್ಲಾ 'ಹಣಕಾಸು ನವೀನ ಎಂದು ಪ್ರಸ್ತುತ ಪಡಿಸಲಾಯಿತು. ಈ'ನವೀನತೆ'ಯ ಅಡಿಯಲ್ಲಿ ಸಬ್‌ಪ್ರೈಮ್ ಅಥವಾ ಈ ಅಭ ಸಾಲಗಳ ವಾಸ್ತವ ಅಪಾಯ ಅಡಗಿ ಹೋಯಿತು ಈ 'ಉತ್ಕರ್ಷ' ಸಾಕಷ್ಟು ದೀರ್ಘ ಮುಂದುವರೆಯಿತು. ಆದರೆ ಕೊನೆಗೂ ಈ ಕೃ 'ಉತ್ಕರ್ಷ'ದ ಗುಳ್ಳೆ ಒಡೆಯಲೇ ಬೇಕಿತ್ತು. ಬಂದಾಗ ಜೋರಾಗಿಯೇ ಬಂತು.

ಬಡ್ಡಿದರಗಳು ಹೆಚ್ಚಲಾರಂಭಿಸಿದಾಗ ಅದರ ಬ ಸಬ್ ಪ್ರೈಮ್ ಸಾಲಗಳ ಮೇಲೆ ಬೀಳಲಾರಂಭಿಸಿತ ಬಹಳಷ್ಟು ಸಾಲಗಾರರಿಗೆ ತಾವೀಗ ಸಾ ಮರುಪಾವತಿ ಮಾಡುವ ಸ್ಥಿತಿಯಲ್ಲಿಲ್ಲ ಎಂದು ಕಂ ಬಂತು. ಸುಸ್ತಿ ಸಾಲಗಳ ಸಂಖ್ಯೆ ಹೆಚ್ಚಿದಂತೆ ಮನೆ ಮೌಲ್ಯಗಳು ಇಳಿಯಲಾರಂಭಿಸಿದವು. 200 ಆರಂಭದಲ್ಲೆ ಇದು ಕಂಡು ಬರಲಾರಂಭಿಸಿತು. ಇ ಸಾಲಗಾರರ ಮೇಲೆ ಇನ್ನಷ್ಟು ಪ್ರಭಾವ ಬೀರಿತ ತಮ್ಮ ಮನೆಗಳ ಪ್ರಸಕ್ತ ಮೌಲ್ಯಕ್ಕಿಂತ ತಾ ತೀರಿಸುತ್ತಿರುವ ಸಾಲದ ಪ್ರಮಾಣವೇ ಹೆ ಎಂಬುದು ಅವರಿಗೆ ಕಂಡು ಬಂತು. ಆದ್ದರಿಂದ ಕಳಕೊಳ್ಳುವ ವ್ಯವಹಾರಕ್ಕಿಂತ ಸಾ ಮರುಪಾವತಿಯಿಂದ ತಪ್ಪಿಸಿಕೊಳ್ಳುವುದೇ ಮೇ ಎಂದು ಬಹಳ ಮಂದಿಗೆ ಅನಿಸಲಾರಂಭಿಸಿ ಅದರಿಂದ ಬಹಳಷ್ಟು ಸಾಲಗಳು ಹಿಂದಿರು ಬರಲಾರದ ಸಾಲಗಳಾದವು. ಇದರಿಂದ ಈ ಅ ಮೌಲ್ಯಗಳು ಹದಗೆಡ ಲಾರಂಭಿಸಿದವು. ಅದರ

ಪುಟ 15



ಮಹಾನಗರದ ಮಧ್ಯೆ ಗುಡಿಸಲು ಕೇಳುವವರಿಲ್ಲ ಕೊಳಗೇರಿ ಗೋಳು


ಲಿಂಗರಾಜು

ರಾಜಾತಿ, ವಯಸ್ಸು 55, ಇಲ್ಲಿಗೆ ಬಂದು 80 ವರ್ಷವಾಗಿದೆ. ಹರಕಲು ಸೀರೆ, ಆಡುವ ಮಾತು ತಮಿಳು ಮಿಶ್ರಿತ ಕನ್ನಡ. ಊರೂರು ತಿರುಗಿ ಚಿಂದಿ ಆಯುವ ಚಾಕರಿ. ಆ ಚಿಂದಿ ಮಾರಿದ ಹಣದಲ್ಲೇ 5 ಜನರ ದೊಡ್ಡ ಸಂಸಾರದ ಹೊಟ್ಟೆ ಹೊರೆಯಬೇಕು. ಕಳೆದ 42 ವರ್ಷಗಳಿಂದ ಇದೇ ಕಾಯಕ. ಚಿಂದಿಯಲ್ಲಿ 'ಕಾಪರ್' ಸಿಕ್ಕಿದರೆ ಮನೆ ಮನೆಯಲ್ಲೂ ಸುದ್ದಿ. ಆ ದಿನ ಅದೃಷ್ಟ, ಮಲಗಿ ಕಾಲು ಚಾಚಲು ಆಗದ ಸಣ್ಣದೊಂದು ಹಂದಿಗೂಡಿನಂತಹ ಗುಡಿಸಲು. ರಾಜಾತಿಯ ಮನೆಯ ದೊಡ್ಡವರು ಹೊರಗೆ, ಚಿಕ್ಕವರು ಒಳಗೆ ಮಲಗಬೇಕೆನ್ನುವ ಹಲವು ವರ್ಷಗಳ ಸಂಪ್ರದಾಯ. ಮುಂಜಾನೆ 4 .30ಕ್ಕೆ ಜನರ ಚಾಕರಿ ಶುರು. ಚಪ್ಪಲಿ ಇಲ್ಲದ ಕಾಲು. ತಿರುಗಬೇಕು ಬೆಂಗಳೂರು ಸುತ್ತ. ಪೇಪರ್, ಪ್ಲಾಸ್ಟಿಕ್ ಡಬ್ಬ, ವೈರ್ ಹೀಗೆ ಸಿಕ್ಕಿದ್ದನ್ನೆಲ್ಲಾ ತಂದು ಗುಡಿಸಲು ಮುಂದೆ ಹಾಕಿ ಅದನ್ನು ಬೇರ್ಪಡಿಸಿ, ವಾರಕ್ಕೊಮ್ಮೆ ಕಾಂಟ್ರಾಕ್ಟರ್‌ಗೆ ಮಾರಬೇಕು. ಬರೀ ಪೇಪರ್ ಇದ್ದರೆ ಇವರ ಲಾಭ ಅಷ್ಟಕ್ಕಷ್ಟೇ. ಬದಲಾಗಿ 'ಕಾಪರ್' ಸಿಕ್ಕರೆ ಇವರ ಮಟ್ಟಿಗೆ ದೊಡ್ಡ ಲಾಭವೇ!

ಇದು ಊಹೆಯ ಕಥೆಯಲ್ಲ. ಬೆಂಗಳೂರಿನ ಜೆ.ಸಿ. ರಸ್ತೆಯ ಸಿಮೆಂಟ್ ಹಟ್ಸ್ ಸ್ಲಂನ ನಿವಾಸಿ ರಾಜಾತಿಯ ವಾಸ್ತವ ಬದುಕಿನ ಚಿತ್ರಣ.

ಬೆಂಗಳೂರು ಮಾಹಿತಿ ತಂತ್ರಜ್ಞಾನದ ಬಹುದೊಡ್ಡ ಹೆಸರು. ಸಾರ್ವಜನಿಕ ಉದ್ದಿಮೆಗಳ ತೊಟ್ಟಿಲು, ಸಿಲಿಕಾನ್ ಸಿಟಿ. ವೊಲ್ವೋ ಬಸ್‌ಗಳ ಅಂದ, ಎ.ಸಿ. ಬಸ್‌ಸ್ಟಾಂಡ್‌ಗಳಿರುವ ವಿಶ್ವದ ಗಮನ ಸೆಳೆದ ನಗರ. ಮೆಟ್ರೋ ರೈಲಿನ ಗರಿ ಬೇರೆ! ರಾತ್ರಿಯಾದಂತೆಲ್ಲಾ ಝುಗಮಗಿಸುವ ಲೈಟ್‌ಗಳು ಬಿಎಂಡಬ್ಲ್ಯೂ, ರೋಲ್ಸ್ ರಾಯ್, ತರಾವರಿ ಕಾರುಗಳ ಕಾರುಬಾರು. ಬೆಂಗಳೂರು 'ಅಭಿವೃದ್ಧಿ' ನಾಗಲೋಟದಲ್ಲಿದೆ ಎಂದು ಯಾರಿಗಾದರೂ ಅನಿಸದಿರದು.

ಬೆಂಗಳೂರು ಅತ್ಯಂತ ದೊಡ್ಡ ಸ್ಲಂನ್ನು ಹೊಂದಿರುವ ನಗರವೆಂಬ ಖ್ಯಾತಿಯೂ ಇದೆ. ಬಹುಶಃ ಈ ವಿಷಯ ಯಾವ ಮಾಧ್ಯಮದಲ್ಲೂ ಎಂದೂ ಸುದ್ದಿಯಾಗುವುದಿಲ್ಲ. ಬಿಕಿನಿತೊಟ್ಟ ಫ್ಯಾಷನ್ ಮೇಳ ಮುಖಪುಟದ ಸುದ್ದಿಯಾಗುತ್ತದೆ. ಬಣ್ಣಬಣ್ಣದ ಲೈಟುಗಳ ಮಧ್ಯೆ ಕತ್ತಲಲ್ಲಿ ಮುಳುಗಿರುವ ಕೊಳಗೇರಿ ಮಾತ್ರ ಯಾರ ಕಣ್ಣಿಗೂ ಬೀಳುವುದಿಲ್ಲ. ಸ್ಲಂಗೆ ಬೆಂಕಿ ಬಿದ್ದರೂ ಬೆಳಗಿನಂತೆ ಉರಿವ ಲೈಟ್‌ಗಳ ಮಧ್ಯೆ ಬೆಂಕಿಯ ಉರಿ ತುಸು ಸಪ್ಪೆಯಾಗುತ್ತದೆ.



ಸ್ಲಂ ಎಂದರೇನು...?

ಬಣ್ಣ ಬಣ್ಣದ 'ಕಾರು' 'ಬಾರು'ಗಳ ಜನರಿಂದ ಈ ಪ್ರಶ್ನೆಗೆ ಉತ್ತರ ಖಂಡಿತ ಸಿಗಲಾರದು. ಬೆಂಗಳೂರಿನ ಶೇ. 25 ರಷ್ಟು ಜನ ಅಂದರೆ ಸರಿ ಸುಮಾರು 20 ಲಕ್ಷಕ್ಕೂ ಹೆಚ್ಚಿನ ಜನ ಅಂದಾಜು 800ಕ್ಕೂ ಹೆಚ್ಚು ಸ್ಲಂಗಳಲ್ಲಿ ವಾಸಿಸುತ್ತಿದ್ದಾರೆ. ಇವರಲ್ಲಿ ಶೇ. 75 ರಷ್ಟು ದಲಿತರು, ಅಸ್ಪೃಶ್ಯರು, ಉಳಿದವರು ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರು. ರೈಲ್ವೆ ಹಳಿಯ ಪಕ್ಕದಲ್ಲೋ, ಕೆರೆ ಏರಿಯ ಹತ್ತಿರದಲ್ಲೋ ಅಥವಾ ಸ್ಮಶಾನದ ಸಮೀಪದಲ್ಲೋ ಈ ಜನ ಠಳವೂರಿದ್ದಾರೆ. ಇವೇ ಸ್ಲಂಗಳಾಗಿ ಮಾರ್ಪಟ್ಟಿವೆ. ಹೆಚ್ಚಾನೆಚ್ಚು ಬದುಕಿಗಾಗಿ ಕೂಲಿ ಅರಸಿ ಬಂದ ... ಭಾರತದ ಬಡಕೂಲಿಕಾರರೆ.

ಹೀಗಿದೆ ನಮ್ಮೂರು...

ಮದುವೆ ದಿಬ್ಬಣದಲ್ಲಿ ಗಿಜುಗಿಡುವಂತೆ ಜನಜಂಗುಳಿ. ಸಂಭ್ರಮವಿಲ್ಲ, ರಸ್ತೆ ಎಲ್ಲಿದೆ ಎಂದು ಹುಡುಕಬೇಕು, ಮನೆ ಮುಂದೆ ಮಕ್ಕಳ ಪಾಯಖಾನೆ, ಬೆಂಕಿ ಪೊಟ್ಟಣದಂತ 12x6 ಅಡಿಯ ಮನೆಗಳು, ಗುಡಿಸಲು, ಗುಡಿಸಲು ತಬ್ಬಿವೆ. ಆಪರೇಷನ್ ಥಿಯೇಟರ್‌ನ ಜಿಗ್‌ಜಾಗ್ ಮಾರ್ಕಿನಂತೆ. ಹೆಂಗಸರಾದಿಯಾಗಿ ಮನೆ ಮುಂದೆಯೇ ಸ್ನಾನ. ಎಲ್ಲೆಂದರಲ್ಲಿ ಪಾತ್ರೆ ಪಗಡೆಗಳು ಅದರ ಮಧ್ಯೆಯ ರದ್ದಿ, ಮಳೆರಾಯ ಮುನಿದರಂತೂ ಇವರ ಬದುಕು ಅಸಹನೀಯ. 'ಗುಡಿಸಲು ಬೀಳುವಾಗ ಬಂಗಲೆ ನಗುತ್ತಿದ್ದೋ, ನಮ್ಮೂರ ಮೋರಿ ಹೆಣ ತುಂಬಿ! ಹರಿಯಿತು ರಕ್ತದ ಕೋಡಿ ಊರೆಲ್ಲಾ' ಎಂಬ ಸಿದ್ದಲಿಂಗಯ್ಯನವರ ಹಾಡಿನಂತೆ. ಇಷ್ಟೇ ಅಲ್ಲ ಇವು ಆಳುವ ವರ್ಗದ ರಾಜಕೀಯ ಪಕ್ಷಗಳ ನೆಚ್ಚಿನ ತಾಣಗಳೂ ಹೌದು. ಆದರೇ ಅದು ಚುನಾವಣೆ ಬಂದಾಗ ಮಾತ್ರ. ದಿಲ್ಲಿಯ ನಾಯಕರು ಬಂದಾಗ ಚಪ್ಪಾಳೆ ತಟ್ಟಲು ಇವರೇ ಬೇಕು...!

ಎಲೆಕ್ಷನ್ ಮುಂಚಿನ ಒಂದು ವಾರ ಕೊಳಗೇರಿಯಲ್ಲಿ ಹಬ್ಬವೋ ಹಬ್ಬ. ಕುಡಿದಷ್ಟು ಕುಡಿತ, ಬಾಡೂಟ, ಸೀರೆ, ಕುಪ್ಪಸ, ಎಲ್ಲವೂ! ಚುನಾವಣೆ ಬಳಿಕ ಮತ್ತದೇ ಚಿಂದಿಯ ಬದುಕು. ಮಕ್ಕಳಾದಿಯಾಗಿ ಬಹುತೇಕರು ನಿರಕ್ಷರಕುಕ್ಷಿಗಳು. ನಗರದಲ್ಲಿ ಕಳ್ಳತನ, ದರೋಡೆ, ಕೊಲೆಗಳು ನಡೆದಾಗ ಪೊಲೀಸರ ಲಗ್ಗೆ ನೇರ ಸ್ಲಂಗೆ. ಇವರ ಲಾಠಿಯ ತೆವಲಿಗೆ ಬಲಿಯಾಗುವುದು ಇಲ್ಲಿನ ಯುವಕರು. ಇದೇ ಪೊಲೀಸರೇ ಹಲವು ಸಾರಿ ಸಮಾಜಬಾಹಿರ ಅಕ್ರಮ ಚಟುವಟಿಕೆಗಳಿಗೆ ಪ್ರೋತ್ಸಾಹಕರು ಕೂಡಾ. ಪ್ರತಿಬಾರಿ ಇನ್ಸ್‌ಪೆಕ್ಟರ್ ವರ್ಗಾವಣೆ ಯಾದಾಗಲಂತೂ ಈ ಯುವಕರೆಲ್ಲಾ ಖುದ್ದು ಸ್ಟೇಷನ್‌ಗೆ ದೌಡಾಯಿಸಲೇಬೇಕು. ಸಮನ್ಸ್ ಹಿಡಿದು ಬರುವ ಪೇದೆಗಳು ಸ್ಲಂಗೆ ಮಾಮೂಲು. ಗಂಭೀರವಾದ ಸಂಗತಿಯೆಂದರೆ ಇಲ್ಲಿ 'ಇಟ್ಟುಕೊಳ್ಳುವುದು' ತೀರ ತೀರಾ ಸಾಮಾನ್ಯವಾದುದು.

ಮೂಲ


ಹಿಂದೂ ಧರ್ಮದ ಅನಾಗರೀಕ ಜಾತಿ ತಾರತಮ್ಯ, ಅಸ್ಪೃಶ್ಯತೆ, ಮೇಲ್ವರ್ಗದ ದಬ್ಬಾಳಿಕೆಗೆ ನಲುಗಿದ ಹೊಲೆ-ಮಾದಿಗರು ಊರ ಹೊರಗಿನ ಹೊಲಗೇರಿಯಲ್ಲಿ ಇಂದಿಗೂ ಬದುಕು ನೂಕುತ್ತಿರುವಂತೆ ನಗರದಲ್ಲಿ ಈ ಸ್ಲಂಗಳು. ನಗರೀಕರಣದ ಫಲವಾಗಿ ಹಳ್ಳಿಗಳ ಹೊಲಗೇರಿಗಳೇ ನಗರದ ಸ್ಲಂಗಳಾಗಿ ರೂಪಾಂತರ ಗೊಂಡಿರುವುದು ಸಹ ಇದೆ. ಮತ್ತೊಂದೆಡೆ ಈ ಜಾತಿ ದಬ್ಬಾಳಿಕೆಯಿಂದ ನೊಂದ ಜನ ಮತ್ತು ಬಹಿಷ್ಕರಿಸಲ್ಪಟ್ಟಂತವರು ಹಾಗೆಯೇ ಕೂಲಿ ಅರಸಿ ಬಂದ ಬಡಜನ ನಗರಕ್ಕೆ ವಲಸಿಗರಾಗಿ ಬಂದವರು ಸೂರಿಗೆ ದಾರಿ ಕಾಣದಾದಾಗ ರೈಲ್ವೆ, ಬಸ್ ನಿಲ್ದಾಣ, ಸ್ಮಶಾನ, ಬಯಲಿನ ತುಂಡು ಜಾಗಗಳನ್ನು ಕಂಡುಕೊಳ್ಳುವಂತಾಯಿತು. ಇವೇ ಸ್ಲಂಗಳಾಗಿ ಬದಲಾದವು. ಬೆಂಗಳೂರಿಗೆ 1992 ರವರೆಗೆ ಮುಖ್ಯವಾಗಿ ಜನರು ತಮಿಳುನಾಡು ಭಾಗದಿಂದ ಬರುತ್ತಿದ್ದದ್ದು, ಕಾವೇರಿ ಗಲಾಟೆಗಳ ನಂತರದಲ್ಲಿ ಸ್ವಲ್ಪ ಕಡಿಮೆಯಾಯಿತು. ನಂತರದಲ್ಲಿ ಉತ್ತರ ಭಾರತದ ಬಿಹಾರ, ಜಾರ್ಖಂಡ್, ಉತ್ತರಾಂಚಲ ರಾಜ್ಯಗಳಿಂದ ದೊಡ್ಡ ಸಂಖ್ಯೆಯಲ್ಲಿ ವಲಸೆ ಬರುವುದು ಪ್ರಾರಂಭವಾಯಿತು. ಕಳೆದ ಆರೇಳು ವರ್ಷಗಳಲ್ಲಿ ಜಾಗತೀಕರಣ ಹಾಗೂ ಬರಗಾಲದ ಪರಿಣಾಮವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಿಂದ ಊರೂರೇ ಗುಳೆ ಏಳಲು ಶುರುವಾದದ್ದು ವಲಸೆ ನಿರಂತರ ವಾಗಿದೆ. ಜೊತೆ ಜೊತೆಗೆ ಸ್ಲಂಗಳ ಸಂಖ್ಯೆಯೂ ಬೆಳೆಯುತ್ತಲೇ ಹೋಗುತ್ತಿದೆ. ನಗರದಲ್ಲೊಂದು ಗುಲ್ಬರ್ಗಾ ಕಾಲೋನಿ. ಅಂತಲೇ ಹಲವು ಕೊಳಗೇರಿಗಳನ್ನು ಕಾಣಬಹುದು. ಸರ್ಕಾರಗಳ ಬಡಜನರ ಬಗೆಗಿನ ದಿವ್ಯ ನಿರ್ಲಕ್ಷ್ಯ ಹಾಗೂ ಜಾತಿ ದೌರ್ಜನ್ಯದ ಪಾಪದ ಕೂಸುಗಳಾಗಿ ಸ್ಲಂಗಳು ತಲೆ ಎತ್ತುವಂತಾಯಿತು.

ದುಡಿದುಡಿದು ಧೂಳಾದವರು...

ಅಕ್ಷರವಿಲ್ಲದ ಜನ ಬೇರೇನು ತಾನೆ ಮಾಡಿಯಾರು..? ಬೆವರಿಳಿಸಿ ದುಡಿಯದಿದ್ದರೆ ಬದುಕು ಅತಂತ್ರ. ಚಿಂದಿ ಆಯುವುದು, ಕಸ ಗುಡಿಸುವುದು, ಮೋರಿ-ಚರಂಡಿ ಕ್ಲೀನ್ ಮಾಡುವುದು, ಪಾಯಖಾನೆ, ಮ್ಯಾನ್‌ಹೋಲ್ ಸ್ವಚ್ಛಗೊಳಿಸುವುದು, ಕಸ ವಿಲೇವಾರಿ ಮಾಡುವುದು, ದಿಕ್ಕಿಲ್ಲದ ಹೆಣಗಳಿಗೆ ಮೋಕ್ಷ ಒದಗಿಸುವುದು, ಸತ್ತ ನಾಯಿಗಳನ್ನು ಹೂಳುವುದು, ಮಾರ್ಕೆಟ್‌ಗಳಲ್ಲಿ ಮೂಟೆ ಹೊರುವುದು, ಚಪ್ಪಲಿ ಹೊಲೆಯುವುದು, ಯಾರೂ ಮೀಸಲಾತಿ ಕೇಳದ, ಯಾರಿಗೂ ಬೇಡವಾದ ಉದ್ಯೋಗ ಇವರದು. ಒಂದು ರೀತಿ ಶತಶತಮಾನಗಳಿಂದ ಸಾಂಪ್ರದಾಯಿಕ ವಾಗಿ ಮಾಡಿಕೊಂಡು ಬಂದ ದುಡಿಮೆಯ ಮುಂದುವರಿಕೆ ಅಷ್ಟೇ. ಇವರ ದುಡಿಮೆಯಿಂದ ಅಂದಿನ ದಿನದ ಹೊಟ್ಟೆ ಹೊರೆಯಬಹುದೇ ವಿನಃ ಕನಿಷ್ಟ ಕಾಯಿಲೆ ಬಂದಾಗಲೂ ಡಾಕ್ಟರ್ ಬಳಿ ಹೋಗಲಾಗದ ಸ್ಥಿತಿ.

ಕಾಣದ ಸಾಮಾಜಿಕ ನ್ಯಾಯ, ಕೊಳಚೆ ನಿರ್ಮೂಲನ ಮಂಡಳಿಯ ಬೇಜವಾಬ್ದಾರಿತನ

ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಕೊಳಗೇರಿಗಳಲ್ಲಿ ಸುಧಾರಣೆ ತರಬೇಕೆಂಬ ಸಂವಿಧಾನಿಕ ಆಶಯಗಳ ಫಲಶೃತಿಯಾಗಿ ಕೊಳಗೇರಿ ಕಾನೂನುಗಳನ್ನು ಸಿದ್ದಪಡಿಸಲಾಯಿತು. ಈ ಭಾಗವಾಗಿ ಕೊಳಚೆ ನಿರ್ಮೂಲನಾ ಮಂಡಳಿಯನ್ನು ರಚಿಸಲಾಯಿತು. ನಂತರದಲ್ಲಿ ಸ್ಲಂಗಳನ್ನು ಗುರ್ತಿಸಿ ಅಧಿಕೃತ ಸ್ಲಂಗಳೆಂದು ಘೋಷಣೆ ಮಾಡುವ ಪ್ರಕ್ರಿಯೆ ಆರಂಭವಾಯಿತು. ಆದರೆ ಈ ಪ್ರಕ್ರಿಯೆ ನಿರಂತರವಾಗಿ ನಡೆಯಲಿಲ್ಲ. ಹೀಗಾಗಿ ಬೆಂಗಳೂರಿನ



ಶೇ. 50 ರಷ್ಟು ಸ್ಲಂಗಳನ್ನು ಇನ್ನೂ ಅಧಿಕೃತವಾಗಿ ಘೋಷಣೆ ಮಾಡಿಲ್ಲ. ಕೊಳಚೆ ಮಂಡಳಿಯ ಬೇಜವಾಬ್ದಾರಿತನಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲ. ಸ್ಲಂ ಕಾಯ್ದೆ ಕಲಂ 4 ರ ಪ್ರಕಾರ ಸ್ಲಂ ನಿವಾಸಿಗಳಿಗೆ ವಿತರಿಸಬೇಕಿದ್ದ ನೋಂದಣಿ ಪತ್ರವನ್ನು ವಿತರಿಸದೇ ಸ್ಲಂ ಕಾಯ್ದೆಯನ್ನೇ ಉಲ್ಲಂಘಿಸಲಾಗಿದೆ.


ಪುಟ 12ಕ್ಕೆ

ಕೇಳುವವರಿಲ್ಲ ಕೊಳಗೇರಿ ಗೋಳು

ಪುಟ 11 ರಿಂದ

ಸ್ಲಂಗಳೆಂದು ಘೋಷಿಸುವ (ನೋಟಿಫೈಡ್) ಜೊತೆಗೆ ಸ್ಲಂ ಜನರಿಗೆ ನಿವೇಶನ ನೀಡುವ ಕಲಂ17 ರ ಅಡಿಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆಗೆ ಅವಕಾಶ ನೀಡಿದ್ದಾಗ್ಯೂ ಈವರೆಗೆ ಭೂ ಸ್ವಾಧೀನಕ್ಕೆ ಮಂಡಳಿ ಮುಂದಾಗಿಲ್ಲ. ಅಲ್ಲದೆ ಕಲಂ 26 ರ ಅನ್ವಯ ಸ್ಲಂ ಜನರಿಗೆ ಭೂಮಿ ಖರೀದಿ ಮಾಡುವ ಅವಕಾಶವಿದೆ. ಕಲಂ 27 ರ ಪ್ರಕಾರ ಸರ್ಕಾರಿ ಜಮೀನುಗಳನ್ನು ಮಂಡಳಿಗೆ ವರ್ಗಾಯಿಸುವ ಅವಕಾಶವಿದೆ. ಅಂದರೆ ಸ್ಲಂ ಜನರಿಗೆ ಶಾಶ್ವತ ನಿವೇಶನ ಒದಗಿಸಬಹುದಾದ ಕಾನೂನಿನ ಸಾಕಷ್ಟು ಅವಕಾಶಗಳಿದ್ದರೂ ಈ ಬಗ್ಗೆ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಹಾಗೂ ಅಧಿಕಾರಶಾಹಿ ಧೋರಣೆ ಯಾರ ಪರ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಕಲಂ 66 ರ ಪ್ರಕಾರ ಕೊಳಗೇರಿಯ ಯಾವುದೇ ವಿವಾದಗಳು ಉಚ್ಚ ನ್ಯಾಯಾಲಯದಲ್ಲಿ ಮಾತ್ರ ಇತ್ಯರ್ಥವಾಗಬೇಕೆಂಬ ನಿಯಮವಿದೆ. ಆದರೆ ಕೆಳ ನ್ಯಾಯಾಲಯಗಳಲ್ಲಿ ಸ್ಲಂ ವಿವಾದದ ಕೇಸುಗಳು



ಹಲವು ವರ್ಷಗಳಿಂದ ಕೊಳೆಯುತ್ತಿವೆ. ಸ್ವಾರಸ್ಯಕರ ಸಂಗತಿ ಎಂದರೆ ಮುಂಬೈ ಹೈಕೋರ್ಟ್ ಸ್ಲಂಗಳಿಗೆ ಭೂಮಿ ಸ್ವಾಧೀನ ವಿವಾದದ ಕುರಿತು 2004 ರಲ್ಲಿ ನೀಡಿದ ಅಂತಿಮತೀರ್ಪು ಇಂತಿದೆ - 'ಕೊಳಗೇರಿಗಳಿಗೆ ಭೂಮಿ ನೀಡುವುದೆಂದರೆ ಪಿಕ್ ಪಾಕೆಟರ್ಸ್‌ಗೆ ಸನ್ಮಾನ ಮಾಡಿದಂತೆ'. ಸಂವಿಧಾನದ ಆಶಯಗಳನ್ನು ರಕ್ಷಿಸುವ, ಸಾಮಾಜಿಕ ನ್ಯಾಯದ ಹೊಣೆ ಹೊತ್ತಿರುವ ಕೋರ್ಟುಗಳೇ ಈ ರೀತಿಯ ತೀರ್ಪುಗಳನ್ನ ನೀಡಿದರೆ ಸಂವಿಧಾನದ ರಕ್ಷಣೆ ಯಾರು ಹೊರಬೇಕು?

ಕೊಳಚೆ ನಿರ್ಮೂಲನಾ ಮಂಡಳಿ ರಚನೆಯಾಗಿ ಎಷ್ಟೋ ವರ್ಷಗಳಾದರೂ ಕೊಳಗೇರಿಗಳಿಗೆ ಕನಿಷ್ಠ ಅಗತ್ಯ ಮೂಲಭೂತಭೂತ ಸೌಕರ್ಯಗಳನ್ನು ಒದಗಿಸುವ ಪ್ರಯತ್ನ ಗಂಭೀರವಾಗಿ ನಡೆದಿಲ್ಲ. ಬೆಂಗಳೂರು ಮಹಾನಗರ ಪಾಲಿಕೆ ಕೂಡಾ ನಿರ್ಲಕ್ಷ್ಯ ವಹಿಸಿದೆ. ಸ್ಲಂ ಮಂಡಳಿಗೂ ಸ್ಲಂಗೂ ಸಂಬಂಧವಿಲ್ಲವೆಂಬಂತೆ ಮಂಡಳಿ ವರ್ತಿಸುತ್ತಿದೆ. ಇತ್ತೀಚೆಗೆ ಜೆ.ಸಿ.ರಸ್ತೆಯ ಸಿಮೆಂಟ್ ಹಟ್ಸ್ ಸ್ಲಂಗೆ ಬೆಂಕಿ ಬಿದ್ದು ಅಲ್ಲಿದ್ದ 57 ಕುಟುಂಬಗಳು ಬೀದಿ ಪಾಲಾದರೂ ಮಂಡಳಿ ಯಾವೊಬ್ಬ ಅಧಿಕಾರಿ ಸ್ಥಳಕ್ಕೆ ಧಾವಿಸಿಲ್ಲ.

ಬಿ.ಬಿ.ಎಂ.ಪಿ.ಯ ದಿವ್ಯ ನಿರ್ಲಕ್ಷ್ಯ.

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ ಯಾವುದೇ ಪ್ರದೇಶವಾಗಿರಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾದದ್ದು ಅದರ ಆದ್ಯ ಕರ್ತವ್ಯ. ಆದರೆ ಈ ಕರ್ತವ್ಯದಿಂದ ಸ್ಲಂಗಳು ಹೊರತಾಗಿವೆ. ಬಿ.ಬಿ.ಎಂ.ಪಿ. ವ್ಯಾಪ್ತಿಯ ಸ್ಲಂ ಕಾಲೋನಿಗಳಲ್ಲಿ ಕುಡಿಯುವ ನೀರಿಗಾಗಿ ಹಾಕಿದ್ದ ಸುಮಾರು 4 ಸಾವಿರಕೊಳಾಯಿ (ನಲ್ಲಿ)ಗಳನ್ನು BWSSB ಕಿತ್ತುಹಾಕಿದೆ. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದರೆ ಪಾಲಿಕೆಯು ಬಿಲ್ ಪಾವತಿ ಮಾಡಿಲ್ಲ ಎಂಬ ಕಾರಣಗಳನ್ನು ನೀಡುತ್ತಾರೆ. ಇನ್ನೊಂದೆಡೆ ನೀರು ಪೂರೈಕೆ ಹಾಗೂ ಒಳಚರಂಡಿ ವ್ಯವಸ್ಥೆಗಾಗಿ ಜೆಬಿವಾಸ್ ಯೋಜನೆಯಡಿ ಬಿಬಿಎಂಪಿ ತನ್ನ ಎಲ್ಲಾ ಪ್ರದೇಶಗಳಿಗೂ ಪೈಪ್‌ಗಳನ್ನು ಹಾಕಿದ್ದರೂ ಸ್ಲಂಗಳಿಗೆ ಮಾತ್ರ ಹಾಕಲಾಗಿಲ್ಲ. ಹಾಗಿದ್ದರೆ ಸ್ಲಂ ನಲ್ಲಿ ವಾಸಿಸುವವರು ಬೆಂಗಳೂರಿನ ನಾಗರೀಕರಲ್ಲವೇ? ಈ ತಾರತಮ್ಯ ಏಕೆ?

2007-08 ರ ಬಿಬಿಎಂಪಿ ಬಜೆಟ್ ಅಲೋಕೇಶನ್‌ನಲ್ಲಿ ಶೇ. 25 ರಷ್ಟು ಜನಸಂಖ್ಯೆ ಇರುವ ಸ್ಲಂಗಳ ಅಭಿವೃದ್ಧಿಗೆ ನೀಡಿರುವ ಹಣ ಕೇವಲ 7 ಕೋಟಿ. ಅಂದರೆ ಒಟ್ಟು ಜನಸಂಖ್ಯೆಗೆ ಭಾಗಿಸಿದರೆ ಕೇವಲ 35 ರೂ.ಗಳು. ಇದರಿಂದ ಯಾವ ಅಭಿವೃದ್ಧಿ ಸಾಧಿಸಲು ಸಾಧ್ಯ? ಅದೇ ಒಂದೇ ಒಂದು ಫ್ರೀಡಂ ಪಾರ್ಕಿನ ಅಭಿವೃದ್ಧಿಗಾಗಿ ಪಾಲಿಕೆ ನೀಡಿದ ಹಣ ಏಳು ಕೋಟಿ!


ಕೊಳಗೇರಿಗಳ ಒಕ್ಕಲೆಬ್ಬಿಸುವಿಕೆ

ಸ್ಲಂ ಜನರನ್ನು ಒಕ್ಕಲೆಬ್ಬಿಸುವುದು ಇಂದಿನದಲ್ಲ. ಭೂಮಿಯ ಬೆಲೆ ಗಗನ ಮುಟ್ಟಿದಂತೆಲ್ಲಾ ಸ್ಲಂಗಳನ್ನು ಒಕ್ಕಲೆಬ್ಬಿಸುವುದು ತೀವ್ರಗೊಂಡಿದೆ. ಇದ್ದಕ್ಕಿದ್ದಂತೆ ಸ್ಲಂಗೆ ಬೆಂಕಿ ಬೀಳುತ್ತದೆ. ಗ್ಯಾಸ್‌ಸ್ಟವ್‌ಗೂ - ಸೊಸೆಗೂ ಇರುವ ಸಂಬಂಧದಂತೆ ಬೆಂಕಿಗೂ, ಸ್ಲಂಗೂ ಅವಿನಾಭಾವ ಸಂಬಂಧ. ರಾತ್ರೋರಾತ್ರಿ ಬುಲ್ಡೋಜರ್ ಬಂದು ಕ್ಷಣಾರ್ಧದಲ್ಲಿ ಕಾಲೋನಿಯನ್ನು ನೆಲಸಮ ಮಾಡುತ್ತದೆ. ಬೇರೊಂದೆಡೆ ಜಾಗ ಗೊತ್ತು ಮಾಡಲಾಗಿದೆ ಎಂದು ಯಾಮಾರಿಸುವುದೂ ನಡೆಯುತ್ತದೆ. ಇವೆಲ್ಲವೂ ನಿರಂತರವಾಗಿ ಸದ್ದಿಲ್ಲದೆ ನಡೆಯುತ್ತಲೇ ಇವೆ. ಇತ್ತೀಚೆಗೆ ಮುಂಬೈ ನಗರದಲ್ಲಿ ಸ್ಲಂ ಕಾಲೋನಿಯೊಂದರ ಒಂದು ಲಕ್ಷದ ಐವತ್ತು ಸಾವಿರ ಮನೆಗಳನ್ನು ನೆಲಸಮ ಮಾಡಲಾಗಿದೆ. ಆದರೆ ಇದು ಅಪ್ಪಿತಪ್ಪಿಯೂ ಯಾವ ಮಾಧ್ಯಮದಲ್ಲೂ ಸುದ್ದಿಯಾಗಲೇ ಇಲ್ಲ. ಈ ಕುರಿತು ಪತ್ರಕರ್ತ ಪಿ.ಸಾಯಿನಾಥ್ ಹೀಗೆ ಹೇಳುತ್ತಾರೆ - "ಸುನಾಮಿ ಬಂದಾಗ ಇಡೀ ಆಡಳಿತ ಯಂತ್ರ, ಮಾಧ್ಯಮ ಎಲ್ಲವೂ ನೆರವಿಗೆ ಬರುತ್ತವೆ. ಸುದ್ದಿ ವಿಜೃಂಭಿಸುತ್ತದೆ. ಸಂತ್ರಸ್ತರ ನೆರವಿಗಾಗಿ ನೆರವಿನ ಮಹಾಪೂರವೇ ಹರಿದುಬರುತ್ತದೆ. ಆದರೆ ಪ್ರತಿದಿನವೂ ಸ್ಲಂ ಕಾಲೋನಿಗಳಲ್ಲಿ ಸಾವಿರಾರು ಕುಟುಂಬಗಳು ಬೀದಿಪಾಲಾಗುತ್ತಿವೆ. ಪ್ರತಿದಿನವೂ ಇಲ್ಲಿ ಸುನಾಮಿ ಸಂಭವಿಸುತ್ತದೆ. ಆದರೆ ಇವರ ನೆರವಿಗೆ ಯಾರೂ ಇಲ್ಲ" ಎಂದು. ಹೌದು ಇದೊಂದು ಅತ್ಯಂತ ಕಟು ಸತ್ಯ. ಆದರೆ ಮಾಧ್ಯಮಗಳಿಗೆ ಸುದ್ದಿ ಅಲ್ಲವೇ ಅಲ್ಲ.

ಸಂಘಟನೆ ಅನಿವಾರ್ಯ...

ಕೊಳಗೇರಿಯ ಜನ ತೀರ ನಿಕೃಷ್ಟ ಜೀವನ ನಡೆಸುತ್ತಿದ್ದಾರೆ. ಶಿಕ್ಷಣ, ಆಹಾರ, ಆರೋಗ್ಯ, ಸಾಮಾಜಿಕ ನ್ಯಾಯದಿಂದ ವಂಚಿತರಾಗಿದ್ದಾರೆ. ಸರ್ಕಾರ ಮತ್ತು ಆಳುವ ವರ್ಗಗಳಿಂದ ಸ್ಲಂ ಜನ ತಿರಸ್ಕರಿಸಲ್ಪಟ್ಟಿದ್ದಾರೆ. ಕನಿಷ್ಠ ನಾಗರೀಕ ಸೌಲಭ್ಯಗಳು ದೂರವಾಗಿವೆ. ಬೆಂಗಳೂರು ನಗರವನ್ನು ಶುಚಿಯಾಗಿಸುವ ಇವರ ಬದುಕು ಶುಚಿಯಾಗಿಲ್ಲ. ಇಡೀ ನಗರವನ್ನು ಸುಂದರ ಮಾಡುವ ಇವರ ಬದುಕು ಕಸದ ತಿಪ್ಪೆಯಲ್ಲಿ. ಶತಶತಮಾನಗಳಿಂದ ಅನ್ಯಾಯ, ದೌರ್ಜನ್ಯಕ್ಕೊಳಗಾದ ಜನರಿಗೆ ಸಾಮಾಜಿಕ ನ್ಯಾಯ ದಕ್ಕುವಂತಾಗಬೇಕು. ಸಾಮಾಜಿಕ, ಆರ್ಥಿಕ, ರಾಜಕೀಯ ವಂಚನೆಗೊಳಗಾದ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸ್ಲಂ ಜನರಲ್ಲಿ ಜಾಗೃತಿ ಮೂಡುವಂತಾಗಬೇಕು. ಈ ನಿಟ್ಟಿನಲ್ಲಿ ಜನಪರ ಸಂಘಟನೆಗಳು ಕಾರ್ಯಪ್ರವೃತ್ತರಾಗಬೇಕು.

ಬಡವರ ಜೋಪಡಿ ನೆಲಸಮವಾದ
ನೋವಿನ ಕಥೆ ಕೇಳಿ
ದುಡಿಯುವ ಜನಗಳ ಪ್ರಾಣವು ಹೋದ



ಗೋಳಿನ ಕಥೆ ಹೇಳಿ

ಎಂಬ ಡಾ. ಸಿದ್ದಲಿಂಗಯ್ಯ ಅವರ ಕವನ ಸಾರುವಂತೆ ಬೆಂಗಳೂರಿನ ನಾಗರಿಕರು, ರಾಜ್ಯ 'ಸಂಭಾವಿತ' ಜನರು ಸ್ಲಂ ಜನರ ನೋವಿನ ಕತೆಗಳನ್ನು ಗಮನವಿಟ್ಟು ಕೇಳಬೇಕಿದೆ. ಸ್ಲಂ ಜನರ ಬದುಕನ್ನು ಉತ್ತಮಪಡಿಸುವ, ಅಲ್ಲಿನ ಪರಿಸ್ಥಿತಿಯನ್ನು ಸುಧಾರಿಸುವ ರಾಜಕೀಯ ಇಚ್ಛಾಶಕ್ತಿ ತೋರದ ಸರ್ಕಾರಗಳ ಕಿವಿಹಿಂಡಿ ಒತ್ತಡ ಹಾಕಬೇಕಿದೆ.

ಈ ನಿಟ್ಟಿನಲ್ಲಿ ಸ್ಲಂ ಜನರು, ಪ್ರಗತಿಪರ ಸಂಘಟನೆಗಳು ನಡೆಸುವ ಹೋರಾಟಗಳ ಬೆಂಬಲಕ್ಕೆ ನಿಲ್ಲಬೇಕಿದೆ.

ಮಾತುಕತೆ - ಸಾರಿಗೆ ಮುಷ್ಕರ ಮುಂದಕ್ಕೆ

ಜನವರಿ 19 ರಂದು ಆರಂಭಿಸಬೇಕೆಂದಿದ್ದ ಸಾರಿಗೆ ಮುಷ್ಕರವನ್ನು ರಾಜ್ಯದ ನಾಲ್ಕು ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಆಡಳಿತ ಮಂಡಳಿಗಳು 'ಐಕ್ಯತಾ ಹೋರಾಟ ಸಮಿತಿ'ಯ ಮುಖಂಡರೊಂದಿಗೆ ಮಾತುಕತೆಗೆ ಬಂದು ಬೇಡಿಕೆಗಳ ಬಗೆಗೆ ಪರಿಶೀಲಿಸುವ ಸಕಾರಾತ್ಮಕ ನಿಲುವು ತೋರಿರುವುದರಿಂದಾಗಿ ಮುಂದೂಡಲಾಗಿದೆ.

ಹೆಚ್ಚುವರಿ ಕಾರ್ಮಿಕ ಆಯುಕ್ತರ ಸಮ್ಮುಖದಲ್ಲಿ ಐಕ್ಯತಾ ಹೋರಾಟ ಸಮಿತಿಯ ಎಂಟು ಜನ ಸಂಚಾಲಕರಲ್ಲದೆ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್‌ರವರ ಸಮ್ಮುಖದಲ್ಲಿ ಆಡಳಿತ ಮಂಡಳಿಯೊಡನೆ ಸಂಧಾನ ಮಾತುಕತೆ ನಡೆದಿದೆ. ನೌಕರರ ಬೇಡಿಕೆಗೆ ಸಂಬಂಧಿಸಿ ದಾಖಲೆ ಒದಗಿಸಲು, ಕಿರುಕುಳದ ಕುರಿತು, ವರ್ಗಾವಣೆ ಕುರಿತು ಪರಿಶೀಲಿಸಲು ಆಡಳಿತ ಮಂಡಳಿ ಒಪ್ಪಿದೆ.

ಮುಂದಿನ ಸಂಧಾನ ಮಾತುಕತೆ ಫೆಬ್ರವರಿ 19 ಕ್ಕೆ ನಿಗದಿಯಾಗಿದೆ ಹಾಗೂ ಮಾತುಕತೆಗೆ ಅನುಕೂಲವಾಗಲೆಂಬ ಕಾರಣದಿಂದ ಉದ್ದೇಶಿತ ಮುಷ್ಕರವನ್ನು ಮುಂದೂಡಲು ಸಮಿತಿ ತೀರ್ಮಾನಿಸಿದೆ.

ಜನರ ಬದುಕು ಅಸ್ಥಿರ...

ಪುಟ 8 ರಿಂದ

ಕೋಮುವಾದ, ಮೂಢನಂಬಿಕೆಗಳು ಮಠಮಾನ್ಯಗಳ ಬೂಟಾಟಿಕೆಗಳ ವಿರುದ್ಧ ದನಿಯೆತ್ತುವ 'ಕರಾವಳಿ ಅಲೆ' ಯ ಮೇಲೆ ಅದರ ಸಂಪಾದಕ ಪ್ರಕಾಶಕರ ಮೇಲೆ ಧಾಳಿ ಇಂತಹ ಒಂದು ಕ್ರಮ. ಲೋಕಸಭಾ ಚುನಾವಣೆಗೆ ಮೊದಲು ಕರಾವಳಿ ಅಲೆಯ ಬಾಯಿ ಮುಚ್ಚಿಸಿದರೆ ತಮ್ಮ ಮತ ಬ್ಯಾಂಕ್ ಸೋರಿಹೋಗುವುದನ್ನು ತಪ್ಪಿಸಬಹುದು, ತಮ್ಮ ಕೋಮುವಾದಿ ವಿಚಾರಗಳಿಗೆ ಎದುರಿಲ್ಲದಂತಾಗುತ್ತದೆ ಎಂದು ಭಾವಿಸಿ ಕರಾವಳಿ ಅಲೆಯ ಕಛೇರಿಯ ಮೇಲೆ ರಾತ್ರೋರಾತ್ರಿ ಕಳ್ಳರಂತೆ ಧಾಳಿಮಾಡಿಸಲಾಯಿತು, ಕರಾವಳಿ ಅಲೆಯ ಮಾರಾಟಗಾರರ ಮೇಲೆ ಧಾಳಿ ನಡೆಸಲಾಯಿತು, ನಂತರ ಕರಾವಳಿ ಅಲೆಯ ಸಂಪಾದಕರನ್ನು ಬಂಧಿಸಿಡಲಾಗಿದೆ. ಕೈ ಕೋಳಹಾಕಿ ಮೆರೆಸಲಾಗಿದೆ. ಹೀಗೆ ಅನೇಕ ಪತ್ರಿಕೆಗಳು ಸಂಘಪರಿವಾರದ ಪಟ್ಟಿಯಲ್ಲಿವೆ. ಒಂದೊಂದಾಗಿ ಅವುಗಳನ್ನು ಮುಗಿಸಬೇಕೆಂಬುದು ಅವರ ಕುತಂತ್ರ..

ಜೊತೆಗೆ ವಿಜಯಕರ್ನಾಟಕದ ನೆರವಿನಿಂದ ವಿಶ್ವವಿದ್ಯಾನಿಲಯದ ಕೇಂದ್ರಗಳ ಮೇಲೆ ತಾರತಮ್ಯ ಜ್ಞಾನವೇ ಇಲ್ಲದಧಾಳಿ ನಡೆಸಲಾಗುತ್ತಿದೆ. ಪಿಎಚ್‌ಡಿ ಪ್ರಬಂಧಗಳ ಹೆಸರಿನಲ್ಲಿ ವಿವಿಕೇಂದ್ರಗಳ ಬಗ್ಗೆ, ಪ್ರಾಧ್ಯಾಪಕರ ಬಗ್ಗೆ ಜನರಲ್ಲಿರುವ ಗೌರವವನ್ನು ಕುಗ್ಗಿಸಿದರೆ ಅವರ ಸ್ಥೈರ್ಯ ವನ್ನು ಕಸಿದುಕೊಂಡರೆ ರಾಜ್ಯದಲ್ಲಿ ಜಾತ್ಯಾತೀತ, ಪ್ರಜಾಸತ್ತಾತ್ಮಕ ಮನೋಭಾವದ ಒಂದು ದೊಡ್ಡ ಆಧಾರವನ್ನು ಸಡಿಲಗೊಳಿಸಬಹುದು ಎಂಬುದು ಸಂಘ ಪರಿಹಾರದ ಹುನ್ನಾರ. ಈ ಹುನ್ನಾರ ಗೊತ್ತಿಲ್ಲದ ಅನೇಕರು ಅಮಾಯಕರಾಗಿ, ಬಲಿಬೀಳುವ ಸಾಧ್ಯತೆ ಇದೆ.

ಒಟ್ಟಿನಲ್ಲಿ ಸಂಘಪರಿವಾರ ಕರ್ನಾಟಕದಲ್ಲಿ ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳಲು ಒಂದು ಕಡೆ ಬೀದಿ ಗೂಂಡಾಗಿರಿಯನ್ನೂ, ಮತ್ತೊಂದು ಕಡೆ ಬೌದ್ಧಿಕ ಧಾಳಿಯನ್ನೂ ನಿರಂತರವಾಗಿ ನಡೆಸುತ್ತಿದೆ, ಯೋಜಿಸುತ್ತಿದೆ. ಇವುಗಳ ಬಗ್ಗೆ ಪ್ರಜಾಪ್ರಭುತ್ವಪ್ರೇಮಿಗಳೆಲ್ಲರೂ ನಿರಂತರವಾಗಿ ಎಚ್ಚರದಿಂದಿರಬೇಕಾಗಿದೆ. ಸಂಯೋಜಿತವಾಗಿ ಕೆಲಸ ಮಾಡಬೇಕಾಗಿದೆ.

ಅಧಿಕಾರಕ್ಕೆ ಬಿಜೆಪಿ : ಅಪಾಯಕಾರಿ ಹೌದು. ಆದರೆ ಅದು ಹೊಸ ಬೆಳವಣಿಗೆಗೆ ಅವಕಾಶವೂ ಹೌದು !!

ಪ್ರಕಾಶ್ ಕಾರಟ್ ಸಂದರ್ಶನ

ಜನಶಕ್ತಿ : ಮುಂಬಯಿಯಲ್ಲಿ ಭಯೋತ್ಪಾದಕರ ಧಾಳಿಯ ನಂತರ ಎರಡು ಕಾಯ್ದೆಗಳನ್ನು ತರಲು ಕೇಂದ್ರ ಸರ್ಕಾರ ಹೊರಟಿದೆ. ಈ ಮಸೂದೆಗಳ ಬಗ್ಗೆ...

ಪ್ರಕಾಶ್ ಕಾರಟ್ : ಕೇಂದ್ರ ಸರ್ಕಾರ ಎರಡು ಮಸೂದೆಗಳನ್ನು ಸಂಸತ್ತಿನಲ್ಲಿ ಮಂಡಿಸಿತ್ತು. ಒಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಇನ್ನೊಂದು ಕಾನೂನು ಬಾಹಿರ ಚಟುವಟಿಕೆಗಳು (ತಡೆ) (ಯು.ಎ.ಪಿ.ಎ) ಶಾಸನಕ್ಕೆ ತಿದ್ದುಪಡಿಗಳು ಭಯೋತ್ಪಾದನಾ ಕೃತ್ಯಗಳು ರಾಜ್ಯದಲ್ಲಿ ನಡೆದರೂ ಅದರ ಬೇರು, ಜಾಲ ರಾಷ್ಟ್ರಮಟ್ಟದಲ್ಲಿಯೂ ಅದರಾಚೆಗೂ ಇರಬಹುದಾದ್ದರಿಂದ ರಾಷ್ಟ್ರೀಯ ಏಜೆನ್ಸಿಯೊಂದು ಅಗತ್ಯವಿದೆ. (ಗುಪ್ತಚರ ಇಲಾಖೆಗಳ ನಡುವೆಯೇ ಸಮನ್ವಯ ಬೇಕು. ಮುಂಬಯಿ ಪ್ರಸಂಗದಲ್ಲಿ ದಾಳಿ ಬಗೆಗೆ ಮೊದಲೇ ಮಾಹಿತಿ ...ತ್ತು. ಆದರೆ ವಿವಿಧ ಗುಪ್ತಚರ ಇಲಾಖೆಗಳ ನಡುವೆ ಸಮನ್ವಯ ಇರಲಿಲ್ಲ) ಆದರೆ ಇದು ರಾಜ್ಯಗಳನ್ನು ಹೊರತಾಗಿಸಿ ಇರಬಾರದು. ಅವರು ರಾಜ್ಯಗಳೊಂದಿಗೆ ಸಮಾಲೋಚಿಸಲಾಗುವುದು ಎಂದಿದ್ದಾರೆ. ಇದು ಸಾಕಾಗದು. ಆದ್ದರಿಂದಲೇ ನಾವು ಮತದಾನಕ್ಕೆ ಒತ್ತಾಯಿಸಿದೆವು. ಎಡಪಕ್ಷಗಳನ್ನು ಟಿಡಿಪಿ, ಎಐಎಡಿಎಂಕೆ, ಬಿಎಸ್‌ಪಿ, ಬೆಂಬಲಿಸಿದವು. ಎರಡನೆ ಮಸೂದೆ ತಿದ್ದುಪಡಿಗಳು ಅತ್ಯಂತ ಕ್ರೂರ ಅವಕಾಶಗಳನ್ನು ಕಲ್ಪಿಸುತ್ತದೆ. (ಈ ಕುರಿತು ವಿವರವಾದ ಲೇಖನಗಳು ಪ್ರಕಟಣೆ ಯಾಗಿವೆ) ಆ ಮೂರು ತಿದ್ದುಪಡಿಗಳನ್ನು ಖಡಾಖಂಡಿತವಾಗಿ ವಿರೋಧಿಸಿದೆವು.

ಜನಶಕ್ತಿ: ಇತ್ತೀಚಿನ ದಿನಗಳಲ್ಲಿ ಭಾರತದ ವಿಷಯದಲ್ಲಿ ಅಮೇರಿಕಾದ ಮಧ್ಯ ಪ್ರವೇಶದ ಪಾತ್ರ ಹೆಚ್ಚಾಗಿದೆ. ಮುಂಬಯಿ ಸ್ಫೋಟದ ನಂತರ ಅದು ಇನ್ನೂ ಹೆಚ್ಚಿದಂತೆ ಅನಿಸುತ್ತಿಲ್ಲವೇ?

ಪ್ರಕಾಶ್‌ಕಾರಟ್: ಭಾರತ ಈಗ ಅಮೇರಿಕಾದ ವ್ಯೂಹಾತ್ಮಕ ಮೈತ್ರಿಯಲ್ಲಿದೆ. ಇದು ಗೂಢಾಚಾರ ಇಲಾಖೆಯವರೆಗೂ ಹೋಗಿದೆ. ಈಗಾಗಲೇ ನಮ್ಮದೇಶದಲ್ಲಿ ಅಮೇರಿಕಾದ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ (ಎಫ್‌ಬಿಐ) ಕಛೇರಿ ಇದೆ. ಅದು ನಮ್ಮ ಕೈ ಕಟ್ಟುತ್ತಿದೆ. ವಿಚಾರ ಹೆಚ್ಚು ಗಂಭೀರವಾಗುತ್ತಿದೆ. ಮುಂಬಯಿ ಸ್ಫೋಟದ ನಂತರ ಭಾರತ ಹೆಚ್ಚು ಹೆಚ್ಚಾಗಿ ಅಮೇರಿಕಾವನ್ನು ಅವಲಂಬಿಸಿತು. ಪಾಕಿಸ್ತಾನದ ಮೇಲೆ ಒತ್ತಡ ಹೇರಲು ವಿಳಂಬಿಸಲಾಯಿತು. ಈ ಭಾಗದಲ್ಲಿ ತಾಲಿಬಾನಿನ ವಿರುದ್ಧ ಧಾಳಿ ಮಾಡಲು ಅಮೇರಿಕಾ ಭಾರತದ ನೆರವನ್ನು ಕೇಳುತ್ತಿದೆ. ಮುಂಬಯಿ ಸ್ಫೋಟದ ವಿಷಯದಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಹೋಗಬೇಕಿತ್ತು. ಈ ಕುರಿತು ವಿಶ್ವ ಸಂಸ್ಥೆಯ ಸಮಗ್ರ ನಿರ್ಣಯವಿದೆ. ಪಾಕಿಸ್ತಾನವನ್ನು ಕೇಳಬಹುದು. ಹಲವು ಕ್ರಮ ಅನುಸರಿಸಬಹುದು. ಆದರೀಗ ನಾವು ದಕ್ಷಿಣ ಏಶಿಯಾದಲ್ಲಿ ಅಮೇರಿಕಾದ ವ್ಯೂಹಾತ್ಮಕ ವ್ಯವಸ್ಥೆಯಲ್ಲಿದ್ದೇವೆ. ಇದು ಹಲವು ಸಂಕೀರ್ಣ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಇದು ಕೇವಲ ಪಾಕಿಸ್ತಾನದ ಭಯೋತ್ಪಾದನೆ ಮಾತ್ರವಲ್ಲ. ಇತರೆ ದೇಶಗಳನ್ನು ಒಳಗೊಳ್ಳುತ್ತದೆ. ನಾವು ಹೆಚ್ಚು ಹೆಚ್ಚು ಅಮೇರಿಕಾದೊಂದಿಗೆ ಗುರುತಿಸಿಕೊಂಡರೆ ಪಶ್ಚಿಮ ಏಶಿಯಾದಲ್ಲಿ ಹೆಚ್ಚು ಹೆಚ್ಚು ಅಪಾಯಗಳನ್ನು ಆಹ್ವಾನಿಸಿದಂತಾಗುತ್ತದೆ.

ಜ.ಶ : ಕರ್ಕರೆ ಹತ್ಯೆ ಬಗ್ಗೆ ಅಂತುಲೆ ಕೆಲವು ಪ್ರಶ್ನೆ ಎತ್ತಿದ್ದಾರಲ್ಲ....

ಪ್ರ.ಕಾ : ಕರ್ಕರೆ ಮತ್ತಿತರರ ಸಾವಿನ ಬಗ್ಗೆ ವ್ಯಾಪಕ ಕಾಳಜಿ ವ್ಯಕ್ತವಾಗಿದೆ. ಮುಖ್ಯ ಪ್ರಶ್ನೆ ಕರ್ಕರೆ ನೇತೃತ್ವದಲ್ಲಿ ಭಯೋತ್ಪಾದನಾ ವಿರೋಧಿ ದಳವು ಮಾಲೆಗಾಂವ್ ಸ್ಫೋಟವನ್ನು ಆಳವಾಗಿ ತನಿಖೆ ನಡೆಸುತ್ತಿತ್ತು. ಇದು ಹಿಂದುತ್ವದ ಭಯೋತ್ಪಾದನೆಯನ್ನು ಹೊರತಂದಿತು. ಕರ್ಕರೆ ಸಾವು ಇಂತಹ ತನಿಖೆಯು ನಿಲ್ಲಬಹುದೇ ಎಂಬ ಆತಂಕ ಹುಟ್ಟಿಸಿದೆ. ಆದ್ದರಿಂದ ಕೇಂದ್ರ ಸರ್ಕಾರ ಮತ್ತು ಮಹಾರಾಷ್ಟ್ರ ಸರ್ಕಾರ ಸಮರ್ಥ ರೀತಿಯಲ್ಲಿ ಈ ತನಿಖೆಯನ್ನು ಪೂರ್ಣಗೊಳಿಸಲು ಕ್ರಮ ವಹಿಸಬೇಕು. ಇದೇ ಮಹತ್ವದ ಪ್ರಶ್ನೆ.

ಜ.ಶ : ಮೂರನೆಯ ಪರ್ಯಾಯದ ಪ್ರಕ್ರಿಯೆ ಹೇಗಿದೆ?

ಪ್ರ.ಕಾ: ನಾವು ಮೂಲಭೂತ ಸಾಮಾನ್ಯ ಪ್ರಶ್ನೆಗಳ ಆಧಾರದಲ್ಲಿ ಜಂಟಿ ಹೋರಾಟಗಳನ್ನು ನಡೆಸಲು ಬಯಸುತ್ತೇವೆ. ಇದಕ್ಕಾಗಿ ಪ್ರಯತ್ನಿಸುತ್ತೇವೆ.

ಈಗ ಸದ್ಯಕ್ಕೆ ಚುನಾವಣಾ ಹೊಂದಾಣಿಕೆ ಯತ್ನವಿದೆ. ಚುನಾವಣಾ ತಂತ್ರದ ಭಾಗವಾಗಿ ಕಾಂಗ್ರೆಸ್ ಹೊರತುಪಡಿಸಿದ ಸೆಕ್ಯುಲರ್ ಪಕ್ಷಗಳು ಒಂದೆಡೆ ಕಲೆತು ಚುನಾವಣಾ ಹೋರಾಟವನ್ನು ಪರಿಣಾಮಕಾರಿಯಾಗಿ ನಡೆಸಬೇಕಿದೆ. ತೆಲುಗು ದೇಶಂ. ಎಐಎಡಿಎಂಕೆ, ಜೆಡಿ(ಎಸ್) ಒಂದು ಅಭಿಪ್ರಾಯಕ್ಕೆ ಬಂದಿವೆ. ಇನ್ನೂ ಇತರರನ್ನು ಸೇರಿಸುವ ಯತ್ನವಿದೆ.

ಜ.ಶ: ಇತ್ತೀಚಿನ ವಿಧಾನಸಭೆಗಳ ಚುನಾವಣಾ ಫಲಿತಾಂಶ ಹೇಗೆ ಪ್ರಭಾವಿಸಬಲ್ಲದು?

ಪ್ರ.ಕಾ: ಕಾಂಗ್ರೆಸ್ ಅಥವಾ ಬಿಜೆಪಿಗೆ ನಿರ್ಣಾಯಕ ಬೆಂಬಲವಿಲ್ಲದಿರುವುದು ಈ ಚುನಾವಣೆಯಲ್ಲಿ ಕಂಡಿತು. ಮಧ್ಯಪ್ರದೇಶ, ಛತ್ತೀಸ್‌ಘಡದಲ್ಲಿ ಬಿಜೆಪಿ ಸರ್ಕಾರದ ವಿರುದ್ಧ ಜನರ ಅತೃಪ್ತಿ ಇದ್ದರೂ ಕಾಂಗ್ರೆಸ್ ಬಿಜೆಪಿಯನ್ನು ಅಧಿಕಾರದಿಂದ ಹೊರಗಟ್ಟಲಾಗಲಿಲ್ಲ. ಕಾಂಗ್ರೆಸ್ ಶೇ.7.8 ಮತ ಕಳೆದುಕೊಂಡಿತು. ಬಿಜೆಪಿ ಅದನ್ನು ಗಳಿಸಲಿಲ್ಲ, ರಾಜಸ್ಥಾನ ಕಾಂಗ್ರೆಸ್‌ಗೆ ಅತೀ ಪ್ರಯಾಸದ ಬಹುಮತ. ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ ಶೇ. 29 ರಿಂದ 30 ರವರೆಗೆ ಕಾಂಗ್ರೆಸ್ ಬಿಜೆಪಿಯೇತರ ಪಕ್ಷಗಳು ಮತ ಗಳಿಸಿವೆ. ಇದು ಸಕಾರಾತ್ಮಕ ವಾದುದು. ಈ ಹಂತದಲ್ಲಿ ಯುಪಿಎ ಅಥವಾ ಎನ್.ಡಿ.ಎ.ಗಳು ತಾವೇ ಎಂದು ಹೇಳುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಮೂರನೆಯ ಪರ್ಯಾಯಕ್ಕೆ ಅವಕಾಶಗಳು ಹೆಚ್ಚಿವೆ.

ಜ.ಶ: ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿದೆ....ಆ ಕುರಿತು...

ಪ್ರ.ಕಾ: ಬಿಜೆಪಿ ಅಧಿಕಾರದಲ್ಲಿದ್ದ ಬೇರೆ ರಾಜ್ಯಗಳನ್ನು ನೋಡಬಹುದು. ಆರ್.ಎಸ್.ಎಸ್. ಸಂಘ ಪರಿವಾರವು ಬಿಜೆಪಿ ಅಧಿಕಾರದಲ್ಲಿರುವ ಸಂದರ್ಭವನ್ನು ತನ್ನ ಕೋಮುವಾದೀಕರಣಕ್ಕೆ ಬಳಸಲು ಪೂರ್ಣವಾಗಿ ಯತ್ನಿಸುತ್ತದೆ. ಸಂಘ ಪರಿವಾರದ ಕೃತ್ಯಗಳಿಗೆ ಬಿಜೆಪಿ ಸರ್ಕಾರ ಬೆಂಬಲಿಸುತ್ತದೆ. ಅದರ ಸೂಚನೆ ಪಾಲಿಸುತ್ತದೆ. ಶಿಕ್ಷಣ ಹಾಗೂ ಸಮಾಜದ ಕೋಮುವಾದೀಕರಣವು ಗಂಭೀರ ವಿಷಯವಾಗಿದೆ. ಆರ್ಥಿಕ ನೀತಿಗಳಲ್ಲಿಯೂ ಅತ್ಯಂತ ಬಲಪಂಥೀಯ ಪ್ರತಿಗಾಮಿಯಾಗಿದೆ. ರೈತರು, ಕಾರ್ಮಿಕರು, ಕೂಲಿಕಾರರು, ಕುಶಲಕರ್ಮಿ ಇತ್ಯಾದಿ ದುಡಿಯುವ ಜನಸಮುದಾಯಗಳು ಅತೀ ಹೆಚ್ಚಿನ ಸಂಕಷ್ಟಕ್ಕೆ ಗುರಿಯಾಗುತ್ತವೆ. ಬಿಕ್ಕಟ್ಟು ಹೆಚ್ಚುವುದು, ಪರಿಹಾರ ಸಿಗುವುದಿಲ್ಲ.

ಆದ್ದರಿಂದ ಜನಸಾಮಾನ್ಯರ ಜೀವನದ ಪ್ರಶ್ನೆ ಎತ್ತಿ ಹೋರಾಟ ನಡೆಸಬೇಕು. ಈ ಮೂಲಕ ಬಿಜೆಪಿ ಸರ್ಕಾರದ ನೀತಿಗಳನ್ನು ಎದುರಿಸಬೇಕು. ಅದೇ ರೀತಿಯಲ್ಲಿ ಕೋಮುವಾದೀಕರಣ ಅಲ್ಪಸಂಖ್ಯಾತರ ಮೇಲಿನ ಧಾಳಿಗಳ ವಿರುದ್ಧ ನಿರಂತರ ಮಧ್ಯಪ್ರವೇಶವೂ ಅತ್ಯಗತ್ಯ. ಈ ದಿಶೆಯಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ, ಧರ್ಮನಿರಪೇಕ್ಷ ಶಕ್ತಿಗಳನ್ನು ಬಲಪಡಿಸಬೇಕು.

ಇಂತಹ ಸ್ಥಿತಿಯು ಬೆಳೆಯಲು ಇರುವ ಹೊಸ ಅವಕಾಶವೂ ಹೌದು

- ಎಸ್.ವೈ.ಗುರುಶಾಂತ್

ಅದು ಲಜ್ಜಗೇಡಿ ಸರ್ಕಾರ...

ಪುಟ 5 ರಿಂದ

ವಿಧಾನವಿದೆ. ಆಚಾರ್ಯರು ಯಾರನ್ನ ಬೇಕಾದರೂ ಅರೆಸ್ಟ್ ಮಾಡಬಹುದು ಎಂದು ಕೊಂಡಿದ್ದರೆ ಅದು ತಪ್ಪು' (ವಿಜೆಕೆಯವರ ಮಾತಿನ ಪೂರ್ಣ ಪಾಠ ಹಾಗೂ ಅವರು ಆಚಾರ್ಯರಿಗೆ ಬರೆದ ಪತ್ರದ ವಿವರಕ್ಕಾಗಿ ಬಾಕ್ಸ್‌ನೋಡಿ)

- ವಿ.ಜೆ.ಕೆ.ನಾಯರ್, ರಾಜ್ಯ ಕಾರ್ಯದರ್ಶಿಗಳು, ಸಿಪಿಐ(ಎಂ)

ಗೋಡ್ಸೆ ಆದರ್ಶ

"ಗೋಡ್ಸೆಯನ್ನು ಆದರ್ಶ ವಾಗಿಟ್ಟುಕೊಂಡಿರುವ ಬಿಜೆಪಿ ಮತ್ತು ಸಂಘ ಪರಿವಾರ ವಿವೇಕಾನಂದ ಜಯಂತಿ ಹೆಸರಿನಲ್ಲಿ, ಭಯೋತ್ಪಾದನೆ ವಿರುದ್ದದ ಪ್ರಚಾರದ ಹೆಸರಿನಲ್ಲಿ ಶಾಲಾ ಕಾಲೇಜುಗಳಲ್ಲಿ ಅಲ್ಪಸಂಖ್ಯಾತರ ವಿರುದ್ದ ದ್ವೇಷಭಾವನೆ ಹರಡುತ್ತಿವೆ. ಮತ್ತೊಂದೆಡೆ ಕರಾವಳಿ ಅಲೆಯಂತಹ ಪತ್ರಿಕೆಯ ಮೇಲೆ ದಾಳಿ ನಡೆಸುತ್ತಿದೆ. ಇದನ್ನು ನಾವೆಲ್ಲಾ ಒಕ್ಕೊರಲಿನಿಂದ ಖಂಡಿಸುತ್ತೇವೆ.

ಮಾವಳ್ಳಿ ಶಂಕರ್, ರಾಜ್ಯ ಸಂಚಾಲಕರು ಡಿಎಸ್‌ಎಸ್(ಅಂಬೇಡ್ಕರ್‌ವಾದ)

ಇದು ಅತ್ಯಾಚಾರ

"ಇದು ಮಾಧ್ಯಮ ಸ್ವಾತಂತ್ರ್ಯ ಮೇಲೆ ನಡೆದ ಅತ್ಯಾಚಾರ. ಮೈಸೂರು ಅರಮನೆಗೆ ಸಂಬಂಧಿಸಿ ಬೆಳಕು ಧ್ವನಿ ಕಾರ್ಯಕ್ರಮ ರೂಪಿಸಿದ ಸರ್ಕಾರ ಅದರಲ್ಲಿ ಟಿಪ್ಪು ಕೊಡುಗೆಯನ್ನು ಗುರುತಿಸಲೇ ಇಲ್ಲ. ಈ ಬಗ್ಗೆ ಶ್ರೀಕಂಠದತ್ತ ಒಡೆಯರ್ ಅವರು ಕೂಡ ಆಕ್ಷೇಪ ಎತ್ತಿದ್ದಾರೆ".

- ಅಬ್ದುಲ್ ಖುರೇಶಿ, ಟಿಪ್ಪುಸುಲ್ತಾನ್ ಸಂಯುಕ್ತರಂಗ

ಬಾವುಟ, ಸಂವಿಧಾನ ಎಲ್ಲಾ ಯಾಕೆ?

ಹಿಂದೆ ಜರ್ಮನಿ, ಪೋಲೆಂಡ್‌ನಲ್ಲಿ ಆಗಿದ್ದು ಇಲ್ಲಿ ಈಗ ಆಗುತ್ತಿದೆ. ಇದು ಪ್ರಜಾಸತ್ತಾತ್ಮಕ ರಾಜ್ಯ ಅಲ್ಲ. ಹಿಟ್ಲರ್ ರಾಜ್ಯ. ಕರಾವಳಿಯಲ್ಲಿ ಡಿಜಿಐಗಳ ಹುಕುಂಗೂ ಯಾವ ಗೌರವವಿಲ್ಲ. ಇಲ್ಲೊಂದು ವಿಧಾನಸೌಧ, ಬಾವುಟ, ಸಂವಿಧಾನ ಎಲ್ಲಾ ಯಾಕೆ, ಮುಚ್ಚಿ ಬಿಡಿ, ಪುಂಡರ ಕೈಗೇ ಅಧಿಕಾರ ಕೊಟ್ಟು ಬಿಡಿ.... ಸೀತಾರಾಮರನ್ನು ಜೈಲಿಗೆ ಹಾಕಿದ್ದೀರಾ... ಹಿಂದೆ ಸ್ವಾತಂತ್ರ್ಯ ಹೋರಾಟದಲ್ಲಿ ಒಮ್ಮೆ 'ಇಡೀ ದೇಶವನ್ನೇ ಜೈಲಿಗೆ ಹಾಕುತ್ತೀರಾ?' ಅಂತ ಜಿನ್ನಾ ಕೇಳಿದ್ದರು.. ಇಂತಹ ದಬ್ಬಾಳಿಕೆ ವಿರುದ್ಧ ಮುಖ್ಯವಾಗಿ ಹಳ್ಳಿಗಳಲ್ಲಿ ಜನರಿಗೆ ತಿಳಿಸಬೇಕು. ವಿರೋಧ ಹಳ್ಳಿಗಳಿಂದ ಬರಬೇಕು."

- ಕೋ.ಚನ್ನಬಸಪ್ಪ, ಸ್ವಾತಂತ್ರ್ಯ ಹೋರಾಟಗಾರರು, ನಿವೃತ್ತ ನ್ಯಾಯಮೂರ್ತಿಗಳು

ನಡೆಸುತ್ತಿರುವವರೇ ಬೇರೆ

'ವಿಧಾನಸೌಧ, ಸರ್ಕಾರ ಅಂತ ನಾವು ಯೋಚನೆಯನ್ನೇ ಮಾಡಬಾರದು, ಸರ್ಕಾರದ ಎಲ್ಲವನ್ನು ನಡೆಸುತ್ತಿರುವರೇ ಬೇರೆ. ಬ್ರಾಹ್ಮಣರು ಕೊಲೆ ಮಾಡಿದರೆ ಅಪರಾಧವಲ್ಲ. ಶೂದ್ರರು ಕೊಲೆ ಮಾಡಿದರೆ ಅಪರಾಧ, ಅವರ ತಲೆ ಕತ್ತರಿಸು ಎನ್ನುತ್ತದೆ ಮನುಸ್ಮೃತಿ. ನಿವೃತ್ತ ನ್ಯಾಯಮೂರ್ತಿ ರಾಮಜೋಯಿಸರು ಮುಸಲ್ಮಾನರು ಮಾಡುವ ಭಯೋತ್ಪಾದನೆ ಮಾತ್ರ ಭಯೋತ್ಪಾದನೆ, ಹಿಂದೂಗಳು ಮಾಡಿದ ಭಯೋತ್ಪಾದನೆ ದೇಶ ಪ್ರೇಮ ಎಂದು ಬರೆದಿದ್ದಾರೆ. ಹಿಂದೂಗಳ ಪರವಾಗಿ, ಮುಸಲ್ಮಾನರ ಪರವಾಗಿ ಮಾತನಾಡುವುದು ಸುಲಭ. ದೇಶದ ಪರವಾಗಿ ಮಾತನಾಡುವುದು ಕಷ್ಟ...

- ಪ್ರೊ: ಜಿ.ಕೆ.ಗೋವಿಂದರಾಜ್, ಚಿಂತಕರು

ಮಾನವ ಹಕ್ಕು ಉಲ್ಲಂಘನೆ

ಯಾರನ್ನೇ ಆಗಲಿ ಬಂಧಿಸುವಾಗ ಅಗತ್ಯಕ್ಕಿಂತ ಹೆಚ್ಚು ಶಕ್ತಿ ಬಳಸಬಾರದು ಎಂದು ಸುಪ್ರೀಂಕೋರ್ಟ್ ತೀರ್ಪು ಕೊಟ್ಟಿದೆ. ಬಿ.ವಿ.ಸೀತಾರಾಮರನ್ನು ಬಂಧಿಸಿದ ರೀತಿ, ಕೈಕೋಳ ತೊಡಿಸಿ ಎಳೆದೊಯ್ದು ರೀತಿ ಗಂಭೀರ ಮಾನವ ಹಕ್ಕುಗಳು ಉಲ್ಲಂಘನೆಯಾಗಿದೆ...

- ಅಬ್ದುಲ್ ರಷೀದ್, ವಕೀಲರು, ಮಾನವ ಹಕ್ಕುಗಳ ಹೋರಾಟಗಾರರು

ಲೋಕಸಭಾ ಚುನಾವಣೆ ದೃಷ್ಟಿ

ಬಿಜೆಪಿ ಮತ್ತು ಸಂಘ ಪರಿವಾರದ ಕೋಮುವಾದಿ ತಂತ್ರಗಳನ್ನು ಮಠಾಧಿಪತಿಗಳ ಡಾಂಭಿಕತೆ, ಅವ್ಯವಹಾರಿಕತೆಯನ್ನು ಸತತವಾಗಿ ಬಯಲಿಗೆಳೆಯುತ್ತ ಬಂದದ್ದು ಕರಾವಳಿ ಅಲೆ ಪತ್ರಿಕೆ. ಅದನ್ನು ಹೀಗೇ ಬಿಟ್ಟರೆ ಲೋಕಸಭಾ ಚುನಾವಣೆ ಎದುರಿಸುವುದು ಕಷ್ಟ ಎಂಬ ಕಾರಣಕ್ಕೆ ಈಗ ಕರಾವಳಿ ಅಲೆ ಯನ್ನು ಮುಗಿಸಿ ಬಿಡಲು ಪ್ರಭುತ್ವ ಶಕ್ತಿಯನ್ನೇ ಬಳಸಲಾಗುತ್ತಿದೆ.

- ಎಸ್.ವೈ.ಗುರುಶಾಂತ್, ಸಂಪಾದಕರು, 'ಜನಶಕ್ತಿ ಕನ್ನಡ ವಾರ ಪತ್ರಿಕೆ

ಜನಶಕ್ತಿ ಕನ್ನಡ ವಾರಪತ್ರಿಕೆ
ಜನವರಿ 25, 200

ಜಗದಗಲ

ಶರತ್‌ಚಂದ್ರ


ಚೀನಾದಲ್ಲಿ ಸುಧಾರಣೆಗಳ ಮೂವತ್ತು ವರ್ಷದ ಸಂಭ್ರಮ

1949 ರಲ್ಲಿ ಜನತಾಪ್ರಜಾಪ್ರಭುತ್ವ ಕ್ರಾಂತಿಯನ್ನು ಸಾಧಿಸಿದ ಚೀನಾ ಜನತಾ ಪ್ರಜಾಪ್ರಭುತ್ವ ಕಾರ್ಯಕ್ರಮದ ಭದ್ರ ಆಧಾರದ ಮೇಲೆ 70 ರ ದಶಕದ ಕೊನೆಯಲ್ಲಿ ಆರಂಭಿಸಿದ ಆರ್ಥಿಕ ಸುಧಾರಣೆ ಚೀನಾದ ಪ್ರಗತಿಗೆ ಅದ್ಭುತ ವೇಗವನ್ನು ನೀಡಿದೆ. ಇದರೊಂದಿಗೆ ಹಲವು ಸವಾಲುಗಳು ಎದ್ದು ಬಂದಿವೆ. ಆರ್ಥಿಕ ಸುಧಾರಣೆಗಳ 30ನೇ ವರ್ಷಾಚರಣೆಯ ಸಂದರ್ಭದಲ್ಲಿ ಒಂದು ವಿಶ್ಲೇಷಣೆ.

ಚೀನಾದಲ್ಲಿ ಆರ್ಥಿಕ ಸುಧಾರಣೆಗಳಿಗೆ ಮೂವತ್ತು ವರ್ಷ ತುಂಬಿದವು. 1978 ರಲ್ಲಿ ಚೀನೀ ಕಮ್ಯುನಿಸ್ಟ್ ಪಕ್ಷ ಯೋಜಿಸಿ ಆರಂಭವಾದ ಆರ್ಥಿಕ ಸುಧಾರಣೆಗಳ ಮೂವತ್ತನೇ ವಾರ್ಷಿಕೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಹೊರ ಜಗತ್ತಿಗೆ ತೆರೆದುಕೊಂಡ ಚೀನಾದ ಸುಧಾರಣೆಗಳ ಎರಡು ಪ್ರಮುಖ ಅಂಶಗಳೆಂದರೆ ? ಆರ್ಥಿಕವನ್ನು ತೆರೆದು ಉತ್ಪಾದಕ ಶಕ್ತಿಗಳ ಬೆಳವಣಿಗೆಯ ಸಾಧ್ಯತೆಗಳನ್ನು ಅನಾವರಣ ಮಾಡುವುದು ಮತ್ತು ನಾಲ್ಕು ಮುಖ್ಯ ನೀತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು (ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಮಾವೋ ತ್ಸೆ ಡುಂಗ್ ಯೋಚನೆಗಳು; ಸಮಾಜವಾದಿ ಹಾದಿ; ಜನತಾ ಪ್ರಜಾಸತ್ತಾತ್ಮಕ ಸರ್ವಾಧಿಕಾರ; ಮತ್ತು ಕಮ್ಯುನಿಸ್ಟ್ ಪಕ್ಷದ ನಾಯಕತ್ವ).

ಮೂರು ದಶಕಗಳ ಸುಧಾರಣೆಗಳಲ್ಲಿ ಚೀನಾ ಅದ್ಭುತ ಸಾಧನೆಗಳನ್ನು ಮಾಡಿದೆ. ಪ್ರಮುಖ ಸಾಧನೆಗಳನ್ನು ಹೀಗೆ ಪಟ್ಟಿ ಮಾಡಬಹುದು:

- ಮೂರು ದಶಕಗಳ ದೀರ್ಘ ಅವಧಿಯಲ್ಲಿ ಚೀನಾ ಸಾಧಿಸಿದ ಸರಾಸರಿ ಶೆ. 9.8 ದರದ ವಾರ್ಷಿಕ ಆರ್ಥಿಕ ಬೆಳವಣಿಗೆಗೆ ಜಗತ್ತಿನ ಚರಿತ್ರೆಯಲ್ಲೇ ಸಾಟಿ ಇಲ್ಲ.
- ಜಿ.ಡಿ.ಪಿ. (ಒಟ್ಟು ಉತ್ಪನ್ನ) 1978 ರಲ್ಲಿ 52 ಶತಕೋಟಿ ಡಾಲರಿನಿಂದ 3600 ಶತಕೋಟಿ ಡಾಲರಿಗೆ ಏರಿದೆ ಅಂದರೆ ಸುಮಾರು 70 ಪಟ್ಟಾಗಿದೆ.
- ಚೀನಾ ಇವತ್ತು ಜಗತ್ತಿನ ಮೂರನೇ ಅತೀ ದೊಡ್ಡ ಆರ್ಥಿಕವಾಗಿದ್ದು ಮೂರನೇ ಸ್ಥಾನದಲ್ಲಿದ್ದ ಜರ್ಮನಿಯನ್ನು ಹಿಂದೆ ಹಾಕಿದೆ.
- ಅಂತರ್ರಾಷ್ಟ್ರೀಯ ವ್ಯಾಪಾರದಲ್ಲಿ ಮೂರನೇ ಅತೀ ದೊಡ್ಡ ಸ್ಥಾನ ಪಡೆದಿದೆ. ಚೀನಾದ ಅಂತರ್ರಾಷ್ಟ್ರೀಯ ವ್ಯಾಪಾರ 20 ಶತಕೋಟಿ ಡಾಲರಿನಿಂದ 2170 ಶತಕೋಟಿ ಡಾಲರಿಗೇರಿದೆ ಅಂದರೆ 105 ಪಟ್ಟಾಗಿದೆ. 1078 ರಲ್ಲಿ ಆಮದು ರಫ್ತಿಗಿಂತ 1.1 ಶತಕೋಟಿ ಡಾಲರು ಹೆಚ್ಚಿದ್ದರೆ, ಈಗ ರಫ್ತು ಆಮದಿಗಿಂತ 262 ಶತಕೋಟಿ ಡಾಲರಿನಷ್ಟು ಹೆಚ್ಚಿದೆ.
- ಚೀನಾ ಅತ್ಯಂತ ಹೆಚ್ಚಿನ ವಿದೇಶೀ ವಿನಿಮಯ ನಿಧಿ ಇರುವ ದೇಶವಾಗಿ ಹೊಮ್ಮಿದೆ.
- ನಗರವಾಸಿ ಚೀನೀಯರ ಸರಾಸರಿ ತಲಾ ಆದಾಯ 343 ಯುವಾನ್ ನಿಂದ 13,786 ಯುವಾನ್ ಗೆ ಏರಿದೆ ಅಂದರೆ 40 ಪಟ್ಟಾಗಿದೆ. ಗ್ರಾಮೀಣ ತಲಾ ಆದಾಯ 134 ಯುವಾನ್ ನಿಂದ 4,140 ಯುವಾನ್ ಗೆ ಏರಿದೆ ಅಂದರೆ 31 ಪಟ್ಟಾಗಿದೆ.
- 1978 ರಲ್ಲಿ ನಗರವಾಸಿ ಚೀನೀಯರ ಮನೆಯಲ್ಲಿ ಒಬ್ಬ ಮನುಷ್ಯನಿಗೆ 72 ಚದರ ಅಡಿ ಜಾಗ ಇದ್ದರೆ, ಇಂದು 291 ಚದರ ಅಡಿ ಜಾಗ ಇದೆ ಅಂದರೆ ನಾಲ್ಕು ಪಟ್ಟಾಗಿದೆ.
- ಬಡವರ ಸಂಖ್ಯೆ 25 ಕೋಟಿಯಿಂದ 1.4 ಕೋಟಿಗೆ ಇಳಿದಿದೆ.


ಕಾರ್ಖಾನೆಯೊಂದರ ಚಿತ್ರ

- ಮಹಿಳೆಯರ ಸರಾಸರಿ ಆಯಸ್ಸು 69.3 ರಿಂದ 73.3 ಕ್ಕೆ ಮತ್ತು ಪುರುಷರ ಸರಾಸರಿ ಆಯಸ್ಸು 66.3 ರಿಂದ 69.6 ಕ್ಕೆ ಏರಿದೆ (ಈ ಬದಲಾವಣೆ ಅಂತಹ ಗಮನಾರ್ಹವಾಗಿಲ್ಲ. ಚೀನಾದ ಆರೋಗ್ಯ ಸೇವೆಗಳು ಸುಧಾರಣೆ ಮೊದಲು ಸಹ ಪ್ರಬಲವಾಗಿದ್ದವು ಎಂದು ಇದರ ಅರ್ಥ)


ಡೆಂಗ್ ಕ್ಸಿಯೋ ಪಿಯಾಂಗ್

- ಜನಸಂಖ್ಯೆ ಏರಿಕೆ ದರ ವರ್ಷಕ್ಕೆ 1.2 ರಿಂದ 0.5ಕ್ಕೆ ಇಳಿದಿದೆ. ಇದು ಪ್ರಮುಖವಾಗಿ 'ಒಂದು-ಮಗು' ನೀತಿಯಿಂದ ಸಾಧ್ಯವಾಯಿತು. ಜನಸಂಖ್ಯೆ 96.3 ಕೋಟಿಯಿಂದ 132 ಕೋಟಿಗೆ ಏರಿದೆ.
- ಉನ್ನತ ಶಿಕ್ಷಣದ ಅಗಾಧ ಬೆಳವಣಿಗೆ ಆಗಿದೆ. 1978 ರಲ್ಲಿ 9 ಜನ ವಿಶ್ವವಿದ್ಯಾಲಯ ಶಿಕ್ಷಣ ಪಡೆದರೆ ಅವರ ಸಂಖ್ಯೆ ಇಂದು 3.12 ಲಕ್ಷಕ್ಕೆ ಏರಿದೆ.


ಚೀನಾದ ಕೃಷಿ


- 1978 ರಲ್ಲಿ 1.5 ಲಕ್ಷ ಚೀನೀಯರು ಸ್ವ-ಉದ್ಯೋಗಿಗಳಾಗಿದ್ದರು. ಖಾಸಗಿ ಉದ್ಯಮಗಳೇ ಇರಲಿಲ್ಲ. ಈಗ ಸ್ವ-ಉದ್ಯೋಗಿಗಳು ಮತ್ತು ಖಾಸಗಿ ಉದ್ಯಮಗಳ ಉದ್ಯೋಗಿಗಳ ಸಂಖ್ಯೆ 12.8 ಕೋಟಿಗೆ ಏರಿದೆ. ಇದನ್ನು ಸಾಧನೆ ಎನ್ನಲಾಗದಿದ್ದರೂ, ಇದು ಆರ್ಥಿಕ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸಿದೆ.

ಈ ಸಾಧನೆಗಳ ಜತೆ ಕೆಲವು ನ್ಯೂನ್ಯತೆಗಳು ಇಲ್ಲದಿಲ್ಲ. ಅವುಗಳಲ್ಲಿ ಕೆಲವು

- ಚೀನಾದ ಶ್ರೀಮಂತರು ಮತ್ತು ಬಡವರ ನಡುವೆ ವ್ಯತ್ಯಾಸ ಹೆಚ್ಚಿದೆ. ನಗರವಾಸಿ - ಗ್ರಾಮವಾಸಿಗಳ ಮತ್ತು ಅಭಿವೃದ್ಧಿ-ಹಿಂದುಳಿದ ಪ್ರದೇಶಗಳ ನಡುವೆ ಆರ್ಥಿಕ ಮಟ್ಟಗಳ ನಡುವೆ ವ್ಯತ್ಯಾಸ ಹೆಚ್ಚಿದೆ.
- ಸರ್ಕಾರ ಮತ್ತು ಪಕ್ಷದ ಹಲವು ಹಂತಗಳ ಪ್ರಮುಖ ಅಧಿಕಾರಸ್ಥರಲ್ಲಿ ಭ್ರಷ್ಟಾಚಾರ ಹೆಚ್ಚಿದೆ (ಕ್ರಮವಹಿಸಲಾಗುತ್ತಿದೆ).
- ಪರಿಸರ ಮಾಲಿನ್ಯ ದೊಡ್ಡ ಪ್ರಮಾಣದಲ್ಲಿ ಹೆಚ್ಚಿದೆ. ಚೀನಾದ ಶೇ. 70 ಕ್ಕಿಂತಲೂ ಹೆಚ್ಚು ಜಲಮಾರ್ಗಗಳು ಮತ್ತು ಶೇ. 90 ಕ್ಕೂ ಹೆಚ್ಚು ಭೂಗತ ನೀರು ಮಲಿನವಾಗಿದೆ.

ಚೀನಾದ ಸುಧಾರಣೆಗಳು ಹಲವು ಮಜಲುಗಳು, ಹಂತಗಳನ್ನು ಹಾದಿ ಬಂದಿದೆ. ಈ ಪಯಣದಲ್ಲಿ ಕೆಲವು ಪ್ರಮುಖ ಹೆಜ್ಜೆಗಳು

- 1978: ಚೀನೀ ಕಮ್ಯುನಿಸ್ಟ್ ಪಕ್ಷದ 11 ನೇ ಕೇಂದ್ರ ಸಮಿತಿಯ 3 ನೇ ಸಭೆಯಲ್ಲಿ 'ಆರ್ಥಿಕ ಕಟ್ಟುವ' ಸುಧಾರಣೆಗಳ ಪ್ರಸ್ತಾವ. ಅದೇ ವರ್ಷ 2.7 ಲಕ್ಷ ವಿದ್ಯಾರ್ಥಿಗಳು ರಾಷ್ಟ್ರೀಯ ಪ್ರವೇಶ ಪರೀಕ್ಷೆಯ ಆಧಾರದ ಮೇಲೆ ವಿಶ್ವವಿ'ದ್ಯಾಲಯದ ಉನ್ನತ ಶಿಕ್ಷಣ ಆರಂಭಿಸಿದರು
- 1979: ಗುವಂಗ್ ಡೊಂಗ್ ಮತ್ತು ಫೂಜಿಯನ್ ಪ್ರಾಂತ್ಯಗಳ ಶೆಂಗೆನ್, ಝೂಹಾಯ್, ಶಾಂತೌ ಮತ್ತು ಕ್ಷಿಯಮೆನ್ ನಲ್ಲಿ ವಿದೇಶೀ ಬಂಡವಾಳ ಮತ್ತು ತಂತ್ರಜ್ಞಾನ ಸೆಳೆಯಲು ನಾಲ್ಕು ವಿಶೇಷ ಆರ್ಥಿಕ ವಲಯಗಳ ರಚನೆಗೆ ಅನುಮತಿ. 'ಒಂದು-ಮಗು' ನೀತಿಯ ಅಂಗೀಕಾರ.
- 1982 : ಡೆಂಗ್ ರಿಂದ 'ಒಂದು ದೇಶ ಎರಡು ವ್ಯವಸ್ಥೆಗಳು' ಯೋಚನೆಯ ಪ್ರತಿಪಾದನೆ. ಹಾಂಗ್ ಕಾಂಗ್, ಮಕಾವು ಮತ್ತು ತೈವಾ ತಮ್ಮ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಇಟ್ಟುಕೊಂಡೇ ಚೀನಾ ಸೇರುವ ಅವಕಾಶ ಮಾಡಲು ಈ ಯೋಚನೆ.
- 1984 : 12 ನೇ ಕೇಂದ್ರ ಸಮಿತಿಯ ನೇ ಸಭೆಯಲ್ಲಿ ಆರ್ಥಿಕ ಬೆಳವಣಿಗೆಗೆ ಯೋಜಿತ ಸರಕು ಆರ್ಥಿಕ ನೀತಿಯ ಅಂಗೀಕಾರ. ಬಟ್ಟೆ ಕೈಗಾರಿಕೆಯಲ್ಲಿ ಹೇರ ಉತ್ಪಾದನೆ ಮತ್ತು ಉತ್ತಮ ಪ್ರಗತಿಯಿಂದಾಗಿ, ಕುಟುಂಬಗಳಿ ಕೂಪನ್ ಆಧಾರಿತ ಬಟ್ಟೆ ರೇಶನ್ ರದ್ದು.
- 1985 : ಚೀನಾದ ಸೈನ್ಯದಲ್ಲಿ 10 ಲಕ್ಷ ಸೈನಿಕರ ಕಡಿತ ವೈಜ್ಞಾನಿಕ-ತಾಂತ್ರಿಕ ಬಲ ಮತ್ತು ದಕ್ಷತೆ ಉತ್ತಮ ಪಡಿಸಲು ಕಾರ್ಯಕ್ರಮ ಜಾರಿ. ಒಂಬತ್ತು ತಿಂಗಳ ಕಡ್ಡಾಯ ಶಿಕ್ಷಣ ಮಾರುಕಟ್ಟೆ ಆಧಾರಿ ವೈಜ್ಞಾನಿಕ ಬೆಳವಣಿಗೆಯ ಯೋಜನೆ ತಯಾರಿ
- 1986 : ಸಾರ್ವಜನಿಕ ಉದ್ಯಮಗಳ ದಕ್ಷತೆ ಉತ್ತಮ ಪಡಿಸಲ ಪುನರ್ಸಂಘಟನೆ ಮತ್ತು ಹಲವು ನಿರ್ವಹಣೆಯ ಮಾದರಿಗಳ ಪ್ರಯೋ ಆರಂಭ
- 1988 : ಅಣು ಶಕ್ತಿ ಸಜ್ಜಿತ ಸಬ್‌ಮೆರಿನ್ ಗಳಿಂದ ರಾಕೆಟ ಹಾರಿಸುವ ಯಶಸ್ವಿ ಪ್ರಯೋಗ
- 1990 : ಸಮಾಜವಾದಿ ಮಾರುಕಟ್ಟೆ ಸುಧರಣೆಗಳ ಒಂದ ಕ್ರಮವಾಗಿ ಶೆಂಗೆನ್ ಮತ್ತು ಶಾಂಘಾಯ್ ಶೇರು ಮಾರುಕಟ್ಟೆಗ ಆರಂಭ. ಶಾಂಘಾಯ್ ನ ಅಗಾಧ ಬೆಳವಣಿಗೆಗೆ ಕಾರಣವಾ ಪುಡೊಂಗ್ ಪ್ರದೇಶದ ವಿಶೇಷ ಬೆಳವಣಿಗೆಗೆ ಯೋಜನೆ.
- 1992 : ದಕ್ಷಿಣ ಪ್ರದೇಶಗಳಿಗೆ ಡೆಂಗ್ ಭೇಟಿ ನೀ ಸಮಾಜವಾದಿ ಮಾರುಕಟ್ಟೆ ಸುಧಾರಣೆಗಳನ್ನು ತೀವ್ರಗೊಳಿಸಲು ಕುಮ್ಮ


ಚೀನಾದ ಒಂದು ಕೈಗಾರಿಕಾ ಪ್ರದೇಶ

- 1993 : ಹೆಚ್ಚಿನ ಕೃಷಿ ಮತ್ತು ಕೈಗಾರಿಕಾ ಸರಕುಗಳ ವಿಪು ಉತ್ಪಾದನೆಯೊಂದಿಗೆ, ಅವುಗಳ ಕೂಪನ್-ಆಧಾರಿತ ರೇಶನ್ ಪದ್ಧ ಮತ್ತು ಬೆಲೆ ನಿಯಂತ್ರಣ ರದ್ದು


● 1994 : ಇಂಟರ್‌ನೆಟ್ ಗೆ ಸಂಪರ್ಕ ಸಾಧಿಸಿದ 77 ನೇ ಶವಾಗುವ ಮೂಲಕ ಚೀನಾದ ಹೆಚ್ಚಿದ ಜಾಗತಿಕ ಸಂಪರ್ಕ.

● 1995 : ಮೇ 1 ರಿಂದ ಐದು ದಿನಗಳ ಕೆಲಸದ ವಾರ ಮತ್ತು ಡು ದಿನಗಳ ವಾರಾಂತ್ಯದ ರಜೆ ಮೂಲಕ ವಿಶ್ರಾಮ, ಸಾಂಸ್ಕೃತಿಕ ವಾಸೋದ್ಯಮ ಬೆಳವಣಿಗೆಗೆ ಉತ್ತೇಜನ.

● 1996 : ಯೂವಾನ್ ಅಂತರ್ರಾಷ್ಟ್ರೀಯ ಕರೆನ್ಸಿಯಾಗಿ ಇತರ ನ್ಸಿಗಳಿಗೆ ಚಾಲ್ತಿ ಖಾತೆಯಲ್ಲಿ ವಿನಿಮಯ ಆರಂಭದೊಂದಿಗೆ ಮದು-ರಫ್ತು ವ್ಯಾಪಾರ ಸುಲಭ.


● 1997 : ಪಕ್ಷದ 15 ನೇ ಮಹಾಧಿವೇಶನದಲ್ಲಿ ಸಾರ್ವಜನಿಕ ದ್ಯಮಗಳ ದೊಡ್ಡ ಪ್ರಮಾಣದ ಸಂಘಟನಾ ಸುಧಾರಣೆ, ವಿಲೀನ, ರಾಟ ಮತ್ತು ಮುಚ್ಚುವ ಕಾರ್ಯಕ್ರಮದ ಅಂಗೀಕಾರ ಮತ್ತು ಜಾರಿ ಂಭ

● 1997, 1999 : 'ಒಂದು ದೇಶ ಎರಡು ವ್ಯವಸ್ಥೆಗಳು' ಯ ಆಧಾರದ ಮೇಲೆ ಹಾಂಗ್ ಕಾಂಗ್ (1997 ಜುಲೈ) ಮತ್ತು ಕಾವು (1999) ಚೀನಾದ ಜತೆ ವಿಲೀನ. ಹಾಂಗ್ ಕಾಂಗ್ ನಲ್ಲಿ ವರ್ಷಗಳ ಬ್ರಿಟಿಷ್ ಮತ್ತು ಮಕಾವುನಲ್ಲಿ 442 ವರ್ಷಗಳ


ಚೀನಾದ ರಸ್ತೆಗಳು

ೋರ್ಚುಗೀಸ್ ವಸಾಹತು ಆಡಳಿತದ ಶಾಂತಿಯುತ ಅಂತ್ಯ

● 1999 ; ಪಶ್ಚಿಮ ಚೀನಾದ ಆರು ಪ್ರಾಂತ್ಯಗಳು ಮತ್ತು ಟ್ ಸೇರಿದಂತೆ ಐದು ಸ್ವಾಯತ್ತ ಪ್ರದೇಶಗಳ ಮೂಲರಚನೆ ಆರ್ಥಿಕ


ಚೀನಾ ಅಣೆಕಟ್ಟು

ಸಾಮಾಜಿಕ ಪರಿಸರ ಬೆಳವಣಿಗೆಗೆ ವಿಶೇಷ ಯೋಜನೆಯಿಂದ ತೀವ್ರ ಬೆಳವಣಿಗೆ

● 2000 : ಚೀನಾದ ಒಟ್ಟು ಉತ್ಪಾದನೆ (ಜಿ.ಡಿ.ಪಿ.) ಒಂದು ಸಾವಿರ ಶತಕೋಟಿ ಡಾಲರು ಮೈಲಿಗಲ್ಲು ದಾಟಿ ಜಗತ್ತಿನ ಆರನೇ ಅತಿ ದೊಡ್ಡ ಆರ್ಥಿಕ.

● 2001 : 15 ವರ್ಷಗಳ ದೀರ್ಘ ದುರ್ಗಮ ಮಾತುಕತೆ-ಚೌಕಾಸಿಯ ನಂತರ ಚೀನಕ್ಕೆ ಡಬ್ಲ್ಯೂ.ಟಿ.ಒ. (ವಿಶ್ವ ವ್ಯಾಪಾರ ಒಪ್ಪಂದ) ಸದಸ್ಯತ್ವ.

● 2002 : ಪಕ್ಷದ 16 ನೇ ಮಹಾಧಿವೇಶನದಲ್ಲಿ ವೇಗವಾದ ಆರ್ಥಿಕ ಬೆಳವಣಿಗೆ ಆಧಾರದ ಮೇಲೆ ಆರ್ಥಿಕ-ಸಾಮಾಜಿಕ ಜೀವನ ಮಟ್ಟ ಏರಿಸುವ ಸ್ಥಿತಿವಂತರ ಸಮಾಜ ಕಟ್ಟಲು ನಿರ್ಧಾರ

● 2003 : ಬಾಹ್ಯಾಕಾಶಕ್ಕೆ ಮಾನವನನ್ನು ಕಳಿಸಿದ (ಅಮೆರಿಕ ಮತ್ತು ಸೋವಿಯೆಟ್ ಒಕ್ಕೂಟದ ನಂತರ) ಮತ್ತು ವೈಜ್ಞಾನಿಕ ಬಲದಲ್ಲಿ ಮೂರನೇ ಪ್ರಬಲ ದೇಶವಾಗಿ ಚೀನಾ.

● 2004 : ಸಾರ್ವಜನಿಕ ಒಡೆತನದ ಎರಡು ಬ್ಯಾಂಕುಗಳನ್ನು ಬಲಪಡಿಸುವ ಸುಧಾರಣೆಗಳ ಪ್ರಯೋಗ ಮತ್ತು ಇತರ ಬ್ಯಾಂಕುಗಳಿಗೆ ಅದರ ವಿಸ್ತರಣೆ

● 2005 : 10 ನೇ ರಾಷ್ಟ್ರೀಯ ಜನತಾ ಕಾಂಗ್ರೆಸ್ (ಚೀನಾದ ಪಾರ್ಲಿಮೆಂಟು) ಅದೀವೇಶನದಲ್ಲಿ ಕೃಷಿ ತೆರಿಗೆ ರದ್ದು ಮಂಜೂರು. 2008 ರಲ್ಲಿ ಗ್ರಾಮೀಣ ಆದಾಯ ಮತ್ತು ಕೃಷಿ ಚಟುವಟಿಕೆ ಹೆಚ್ಚಿಸಲು ರೈತರು ತಮ್ಮ ಭೂಮಿಯನ್ನು ಲೀಸ್ ಅಥವಾ ಭೂ-ಬಳಕೆ ಹಕ್ಕು ವರ್ಗಾಯಿಸಲು ಅನುಮತಿ ಕೊಡುವ ನೀತಿಯ ಘೋಷಣೆ.

● 2005 : 1949 ರ ತೈವಾನ್ ಪ್ರತ್ಯೇಕವಾದ ನಂತರ ಮೊದಲ ಬಾರಿಗೆ ಕೊಮಿಂಟಾಂಗ್ ಅಧ್ಯಕ್ಷನ ನಾಯಕತ್ವದ ಉನ್ನತ ತಂಡದ ಚೀನಾ ಭೇಟಿ. ಪೋಸ್ಟ್ ಸಾಗಾಣಿಕೆ ಸಂಬಂಧ ಆರಂಭದೊಂದಿಗೆ ಸಂಬಂಧ ಸುಧಾ'ರಣೆ.

● 2005 : ಚೀನಾ ಕರೆನ್ಸಿ ಯೂವಾನ್ ಗೆ ಡಾಲರಿನ ಜತೆ ವಿನಿಮಯ ದರದ ಬಗ್ಗೆ ಇದ್ದ ವಿಶೇಷ ಕೊಂಡಿ ಕಳಚಿ ಯಾವುದೇ ಕರೆನ್ಸಿ ಜತೆ ವಿನಿಮಯ ದರದ ಸ್ವತಂತ್ರ ಚಲನೆ.

● 2006 : ಜಗತ್ತಿನ ಅತ್ಯಂತ ದೊಡ್ಡ ಜಲವಿದ್ಯುತ್ ಯೋಜನೆ - 2309 ಮೈಲಿ ಉದ್ದದ ತ್ರೀ ಗೋರ್ಜಸ್ ಯೋಜನೆ - ಪೂರ್ಣ. ಟಿಬೆಟ್ ಗೆ ಜಗತ್ತಿನ ಅತ್ಯಂತ ಎತ್ತರದ (ಒಂದು ಸಾವಿರ ಕಿ.ಮಿ. ನಾಲ್ಕು ಸಾವಿರ ಮೀಟರಕ್ಕಿಂತ ಎತ್ತರದಲ್ಲಿ ಓಡುವ) ರೈಲು ಮಾರ್ಗ ಪೂರ್ಣ.

● 2006 : ವಿದೇಶ ವಿನಿಮಯ ನಿಧಿಯ ಮೊತ್ತದಲ್ಲಿ ಒಂದು ಸಾವಿರ ಶತಕೋಟಿ ಡಾಲರು ಮೈಲಿಗಲ್ಲು ದಾಟಿತು. ಆರು ವರ್ಷದ ಮೊದಲು ಒಟ್ಟು ಉತ್ಪನ್ನ (ಜಿ.ಡಿ.ಪಿ.) ಒಂದು ಸಾವಿರ ಶತಕೋಟಿ ಡಾಲರು ಇತ್ತು.

● 2007 : ದೇಶದಾದ್ಯಂತ ತೀವ್ರ ವಾದ-ವಿವಾದದ ನಂತರ ಖಾಸಗಿ, ಸಾರ್ವಜನಿಕ ಮತ್ತು ಸರ್ಕಾರದ ಆಸ್ತಿಗಳಿಗೆ ಸಮಾನ ರಕ್ಷಣೆ ಕೊಡುವ ಕಾನೂನಿಗೆ ಚೀನಾದ ಪಾರ್ಲಿಮೆಂಟಿನ ಮಂಜೂರಾತಿ.

● 2007 : ಅಮೆರಿಕವನ್ನು ಹಿಂದೆ ಹಾಕಿ ಜಗತ್ತಿನ ಅತಿ ದೊಡ್ಡ ಇಂಟರ್ ನೆಟ್ ಬಳಕೆದಾರರು (22 ಕೋಟಿ ಜನ) ಇರುವ ದೇಶವಾಗಿ ಹೊಮ್ಮಿದ ಚೀನಾ.

● 2008 : 29 ನೇ ಒಲಿಂಪಿಕ್ಸ್ ಕ್ರೀಡೆಗಳನ್ನು ಬೆಜಿಂಗ್ ನಲ್ಲಿ ಅಗಾಧ ಕಲಾತ್ಮಕ ರೀತಿಯಲ್ಲಿ ಸಂಘಟಿಸಿ ಜಗತ್ತನ್ನು ಮೆಚ್ಚಿಸಿದ ಚೀನಾ. 100 ಪದಕಗಳು ಮತ್ತು 51 ಚಿನ್ನದ ಪದಕಗಳು ಗಿಟ್ಟಿಸಿ ಜಗತ್ತಿನ ನಂಬರ್ ಒಂದು ಕ್ರೀಡಾ ದೇಶವಾಗಿ ಹೊಮ್ಮಿದ ಚೀನಾ.

● 2008 : ಮಾನವ ಬಾಹ್ಯಾಕಾಶದಲ್ಲಿ ನಡೆದಾಡಿದ (ಅಮೆರಿಕ ಮತ್ತು ಸೋವಿಯೆಟ್ ಒಕ್ಕೂಟದ ನಂತರ) ಸಾಧನೆ ಮಾಡಿದ ಮೂರನೇ ದೇಶವಾಗಿ ಚೀನಾ.

○

ಆರ್ಥಿಕ ಮಹಾಸುನಾಮಿ....

ಪುಟ 10 ರಿಂದ

...ಳು ಕೊಳ್ಳಬಹುದಾದ ಅಥವಾ ರಬಹುದಾದ ಸಾಧನಗಳಾಗಿ ವಿಭಿನ್ನ ಡಿಕೆದಾರರಲ್ಲಿ ಹಂಚಿ ಹೋಗಿದ್ದರಿಂದ ಅಗಲೂ ಸ್ಥಿತಿಯ ಗಂಭೀರತೆ ಬೆಳಕಿಗೆ ಬರಲಿಲ್ಲ.

ಆದರೆ ಈ ಸನ್ನಿವೇಶ ಹೀಗೆಯೇ ಬಹಳ ದಿನ ಂದುವರೆಯುವುದು ಸಾಧ್ಯವಿರಲಿಲ್ಲ. ಬೇರ್ ರ್ನ್ಸ್ ಎಂಬ ಅಮೆರಿಕಾದ ಶೇರು ರುಕಟ್ಟೆಯಿರುವ ವಾಲ್ ಸ್ಟ್ರೀಟ್‌ನ ಬ್ಯಾಂಕ್ ಅಡಮಾನ ಆಧಾರಿತ ಸೆಕ್ಯೂರಿಟಿಗಳಿಗೆ ಬಂಧಿಸಿದಂತೆ ನಿರ್ಮಿಸಿದ್ದ ಎರಡು ನಿಧಿಗಳಿಗೆ ಯಾವ ಬೆಲೆಯೂ ಇಲ್ಲ ಎಂದು ಪ್ರಕಟಿಸಿದಾಗ ಸ್ವಲ್ಪ ಬೆಳಕಿಗೆ ಬಂತು. ಹಲವಾರು ಹಣಕಾಸು ಸ್ಥೆಗಳು ಈಗಾಗಲೇ ದಿವಾಳಿಯ ಅಂಚಿಗೆ ಬಿದ್ದವು ಎಂಬ ಸಂಕೇತ ಇದರಿಂದ ಹೊರಟಿತು. ಅಭದ್ರ ಸಾಲಗಳ ಬಾಕಿ ಮೊತ್ತ ಸುಮಾರು 1.5 ಲಿಯನ್ (ಒಂದೂವರೆ ಲಕ್ಷ ಕೋಟಿ 00000000) ಡಾಲರುಗಳು ಅಥವಾ ಸುಮಾರು ಕೋಟಿ ರೂಪಾಯಿಗಳು ಎಂದು ಅಂದಾಜು ಡಲಾಗಿದೆ. ನಿಜವಾದ ಮೊತ್ತ ಎಷ್ಟೆಂಬುದು ವ್ಯವಹಾರದ ಅಪಾರದರ್ಶಕ ಸ್ವರೂಪದಿಂದಾಗಿ ಯಾರಿಗೂ ಸರಿಯಾಗಿ ಗೊತ್ತಿಲ್ಲ!

ಈಗ ಬೇರೆ ಬೇರೆ ದೇಶಗಳ ಹಣಕಾಸು ಸಂಸ್ಥೆಗಳಲ್ಲಿ ಇರುವ ಸಂಬಂಧಗಳಿಂದಾಗಿ ಇದು ಅಮೆರಿಕಾ ಮತ್ತು ಯುರೋಪಿನ ಸುಮಾರಾಗಿ ಎಲ್ಲಾ ಹಣಕಾಸು ಕಂಪನಿಗಳನ್ನು ತಟ್ಟಿತು. ಯಾರಿಗೂ ಯಾವ ಕಂಪನಿ ಎಷ್ಟು ಅಪಾಯದಲ್ಲಿದೆ ಎಂದು ತಿಳಿಯದ ಸ್ಥಿತಿ. ಏಕೆಂದರೆ ಹಣಕಾಸು ಉದಾರೀಕರಣ ಅವರೆಲ್ಲರಿಗೂ ತಮ್ಮ ಹಿಡುವಳಿಗಳ ನಿಜವಾದ ಮೌಲ್ಯಗಳನ್ನು ಬಚ್ಚಿಡಲು ಅವಕಾಶ ಕೊಟ್ಟಿತ್ತು. ಆದರೆ ಈಗ ಇದರಿಂದ ಭಯ ಅವರನ್ನೆಲ್ಲಾ ಆವರಿಸಿತು. ಅವರು ತಮ್ಮ ಎಂದಿನ ವ್ಯವಹಾರಗಳನ್ನು ನಡೆಸಲು ಮತ್ತು ತಕ್ಷಣದ ನಗದಿನ ಅಗತ್ಯಗಳಿಗೆ ಪರಸ್ಪರ ಸಾಲಗಳ ಕೊಡುವ-ಕೊಳ್ಳುವ ವ್ಯವಹಾರ ನಡೆಸುತ್ತಿದ್ದರು. ಆದರೆ ಈಗ ಸೃಷ್ಟಿಯಾದ ಭಯ ಅದಕ್ಕೆ ತಡೆಯೊಡ್ಡಿತು. ಆಮೂಲಕ ಎಲ್ಲಾ ಹಣಕಾಸು ಸಂಸ್ಥೆಗಳ ಸಾಮಾನ್ಯ ವ್ಯವಹಾರಗಳಿಗೇ ಸಂಚಕಾರ ಬಂತು.

ಅಂತಿಮವಾಗಿ, ಅಮೆರಿಕಾದ ಹಣಕಾಸು ಸಂಸ್ಥೆಗಳಲ್ಲೇ 'ಅತ್ಯುತ್ತಮ' ಎನಿಸಿದ್ದ ದೊಡ್ಡ-ದೊಡ್ಡ ಕಂಪನಿಗಳೇ ದಿವಾಳಿಯ ಬೆದರಿಕೆಗೆ ಒಳಗಾದವು. ಅಮೆರಿಕಾದ ಅತಿ ದೊಡ್ಡ ಹೂಡಿಕೆ ಬ್ಯಾಂಕುಗಳಾದ ಬೇರ್ ಸ್ಟೆರ್ನ್ಸ್, ಲೆಹ್ಮಾನ್ ಬ್ರದರ್ಸ್, ಮೆರಿಲ್ ಲಿಂಚ್, ಮಾರ್ಗನ್ ಸ್ಟಾನ್ಲಿ ಮತ್ತು ಗೋಲ್ಡ್‌ಮನ್ ಸ್ಯಾಕ್ಸ್ ಒಂದೋ ಮುಚ್ಚಿಯೇ ಹೋದವು ಅಥವಾ ಬೇರೆ ದೊಡ್ಡ ಬ್ಯಾಂಕುಗಳೊಂದಿಗೆ ವಿಲೀನಗೊಂಡವು ಅಥವ ಕಟ್ಟುನಿಟ್ಟಾದ ನಿಯಂತ್ರಣಗಳಿರುವ ಸಾಮಾನ್ಯ ಬ್ಯಾಂಕುಗಳಾಗಿ ಪರಿವರ್ತನೆಗೊಂಡವು. ಎಲ್ಲೆಲ್ಲೂ ಮುಚ್ಚುವಿಕೆಗಳು, ವಿಲೀನಗಳು ಮತ್ತು ಕಂಪನಿಗಳ ಮಾರಾಟಗಳ ಭರಾಟೆ! ಇವೆಲ್ಲಾ ಹಣಕಾಸು ವ್ಯವಸ್ಥೆಯ ಮೇಲಿನ ವಿಶ್ವಾಸವನ್ನೇ ಸಂಪೂರ್ಣ ಬುಡಮೇಲು ಮಾಡಿದವು. ಅಮೆರಿಕಾದ ವಾಲ್ ಸ್ಟ್ರೀಟ್‌ನಿಂದ ಹಿಡಿದು ಮುಂಬೈಯ ದಲಾಲ್ ಸ್ಟ್ರೀಟ್‌ನಲ್ಲಿರುವ ಎಲ್ಲ ಶೇರು ಮಾರುಕಟ್ಟೆ ಸೂಚ್ಯಂಕಗಳು ಕುಸಿದವು.

ಬಿಕ್ಕಟ್ಟು ಈಗ ಹಣಕಾಸು ವಲಯಕ್ಕೆ ಮಾತ್ರ ಸೀಮಿತವಾಗಲಿಲ್ಲ. ಅದು ಜನಗಳ ಗ್ರಾಹಕ ಶಕ್ತಿಯನ್ನು ಕುಂದಿಸಿ ನಿಜವಾದ ಉತ್ಪಾದಕ ವಲಯಗಳನ್ನೂ ತಟ್ಟಿದೆ. ಈಗಾಗಲೇ ಚಿಲ್ಲರೆ ಮಾರಾಟಗಳು, ಕೈಗಾರಿಕಾ ಉತ್ಪಾದನೆಗಳು ಇಳಿಮುಖಗೊಂಡಿವೆ. ಇದರಿಂದ ಈ ಮೊದಲು ಹೇಳಿದಂತೆ ಒಂದು ವರ್ಷದಲ್ಲಿಯೆ ಅಮೆರಿಕಾದಲ್ಲಿ ಏಳು ಲಕ್ಷ ಕಾರ್ಮಿಕರು ಕೆಲಸ ಕಳಕೊಂಡಿದ್ದಾರೆ. ಅಲ್ಲಿಯ ಕಾರ್ಮಿಕರ ಮತ್ತು ನೌಕರರ 50 ಲಕ್ಷ ರೂಪಾಯಿಗಳಷ್ಟು ಮೌಲ್ಯದ ನಿವೃತ್ತಿ ಉಳಿತಾಯಗಳು ಈ ಬಿಕ್ಕಟ್ಟಿನ ಸುನಾಮಿಯಲ್ಲಿ ಕೊಚ್ಚಿ ಹೋಗಿವೆ!

○

ಅಮೆರಿಕಾದ ಈ ಬಿಕ್ಕಟ್ಟು ಇಷ್ಟು ಬೇಗನೇ ವಿಶ್ವವನ್ನೆಲ್ಲಾ ವ್ಯಾಪಿಸಿದ್ದೇಕೆ?

ಅಮೆರಿಕನ್ ಸಾಮ್ರಜ್ಯಶಾಹಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಹೇರಿದ ಹಣಕಾಸು ಉದಾರೀಕರಣ ನೀತಿಗಳು ಎಲ್ಲಾ ದೇಶಗಳಲ್ಲಿ ಬಂಡವಾಳ ಮಾರುಕಟ್ಟೆಗಳನ್ನು ಹೆಚ್ಚೆಚ್ಚು ಏಕೀಕೃತಗೊಳಿಸಿವೆ. ಬಂಡವಾಳದ ನೇರ ಹರಿದಾಟದ ಮೂಲಕ ಇದನ್ನು ಅವು ಸಾಧ್ಯವಾಗಿಸಿವೆ. ಹೆಚ್ಚಿನ ದೇಶಗಳಲ್ಲಿ ಈಗ ಬಹುರಾಷ್ಟ್ರೀಯ ಬ್ಯಾಂಕುಗಳು ವ್ಯವಹಾರ ನಡೆಸುತ್ತಿವೆ. ಅವು ಪರಸ್ಪರ ಎಷ್ಟು ಹೆಣೆದುಕೊಂಡಿವೆಯೆಂದರೆ ಒಂದು ಬ್ಯಾಂಕಿನ ತೊಂದರೆ ತಕ್ಷಣವೇ ಅದಕ್ಕೆ ಸಾಲ ಕೊಟ್ಟ ಎಲ್ಲ ಸಂಸ್ಥೆಗಳಿಗೂ ಹರಡುತ್ತದೆ. ಅಭಿವೃದ್ಧಿಶೀಲ ದೇಶಗಳು ತಮ್ಮ ಮಾರುಕಟ್ಟೆಗಳನ್ನು 'ತೆರೆಯಬೇಕು' ಮತ್ತು ವಿದೇಶೀ ಸಾಂಸ್ಥಿಕ ಹೂಡಿಕೆದಾರರಿಗೆ ಶೇರು ಮಾರುಕಟ್ಟೆಗಳಲ್ಲಿ ಹಣ ಹೂಡಲು ಅವಕಾಶ ಕಲ್ಪಿಸಬೇಕು ಎಂಬುದು ಜಾಗತೀಕರಣದ ಚಾಲಕ ಶಕ್ತಿ ತಾನೇ? ಈಗ ವಿಶ್ವಾದ್ಯಂತ ಶೇರು ಮಾರುಕಟ್ಟೆಗಳು ಪ್ರತಿದಿನವೂ ಒಟ್ಟೊಟ್ಟಿಗೇ ಚಲಿಸುತ್ತಿರುವಂತೆ ಕಾಣುತ್ತದೆ. ಅಮೆರಿಕಾದ ವಾಲ್ ಸ್ಟ್ರೀಟ್ ಕೆಮ್ಮಿದರೆ, ಜಗತ್ತಿನ ಎಲ್ಲಾ ಶೇರು ಮಾರಕಟ್ಟೆಗಳಿಗೆ ನೆಗಡಿಯಾಗುತ್ತದೆ- ಮುಂಬೈಯ ದಲಾಲ್ ಸ್ಟ್ರೀಟ್ ಖಂಡಿತಾ ಇದಕ್ಕೆ ಹೊರತಾಗಿಲ್ಲ. ಇದೀಗ ಉದಾರೀಕರಣದ ಫಲ- ಒಂದು ದೇಶದ ಹಣಕಾಸು ಆಘಾತ ತಕ್ಷಣವೇ ಇಡೀ ಜಾಗತಿಕ ಹಣಕಾಸು ವ್ಯವಸ್ಥೆಯನ್ನು ವ್ಯಾಪಿಸುತ್ತದೆ.



■ ನಕುಲ

'ಗಜನಿ' : ಅಮೀರ್‌ಖಾನ್ ಆಕರ್ಷಣೆಯೇ ಪ್ರಧಾನ


ಇದೊಂದು ಸಾಮಾನ್ಯ ಪ್ರೇಮ ಕಥೆಯೇ. ಆದರೆ ಸಿದ್ಧ ಸೂತ್ರಗಳಿಂದ ಸ್ವಲ್ಪ ಭಿನ್ನವಾದ ಕಥಾಹಂದರ ಇದರ ವಿಶೇಷತೆ. ಅದು ಅದ್ಭುತವೇನಲ್ಲ! ಎಂದಿನಂತೆ ಇದು Violent love Story. ಅದ್ಭುತ ಎಂಬಂತೆ ಸುದ್ದಿಯಾಗಿರುವುದು ಅಮೀರ್‌ಖಾನ್‌ನ ಮೈಕಟ್ಟು! ಈ ಚಿತ್ರಕ್ಕಾಗಿಯೇ ಹಲವು ತಿಂಗಳ ಪರಿಶ್ರಮದಿಂದ ತನ್ನ ದೇಹವನ್ನು ಹುರಿಗೊಳಿಸಿಕೊಂಡಿದ್ದಾನೆ ಅಮೀರ್. ಇದನ್ನೇ ಬಂಡವಾಳವಾಗಿಸಿಕೊಂಡ ನಿರ್ಮಾಪಕರು ಜಾಹೀರಾತುಗಳಲ್ಲಿ ಪ್ರಧಾನ ಆಕರ್ಷಣೆಯಾಗಿ ಬಳಸಿಕೊಂಡಿದ್ದಾರೆ - ಜನರೂ ಇದಕ್ಕೆ ಮರುಳಾಗಿ ಚಿತ್ರ ನೋಡಲು ಮುಗಿಬಿದ್ದಿರುವುದೂ ನಿಜ! ಆದರೆ ಚಿತ್ರದಲ್ಲಿ ತನ್ನ ದೇಹದಾರ್ಢ್ಯವನ್ನು ಅತಿಯಾಗಿ ಪ್ರದರ್ಶಿಸಕ್ಕಿಡದೇ ಅಭಿನಯಕ್ಕೇ ಹೆಚ್ಚು ಒತ್ತು ನೀಡಿರುವುದು ಅಮೀರ್‌ಖಾನನ ವಿಶೇಷತೆ!

'ಗಜನಿ' ತಮಿಳು ಚಿತ್ರದ ರಿಮೇಕ್. ತಮಿಳಿನಲ್ಲಿ ಯಶಸ್ವಿಯಾದ ಈ ಚಿತ್ರವನ್ನು ಅದೇ ನಿರ್ದೇಶಕರಾದ ಮುರುಗದಾಸ್ ಹಿಂದಿಯಲ್ಲಿ ನಿರ್ದೇಶಿಸಿದ್ದಾರೆ.

ಸಂಜಯ್ ಸಿಂಗಾನಿಯಾ (ಅಮೀರ್‌ಖಾನ್) ಬಹುಕೋಟಿ ವ್ಯವಹಾರವುಳ್ಳ ಮೊಬೈಲ್ ಕಂಪನಿಯೊಂದರ ಮಾಲೀಕ. ಸೀದಾಸಾದಾ ಹುಡುಗಿ ಕಲ್ಪನಾ(ಆಸಿನ್) ಸಾಮಾಜಿಕ ಕಳಕಳಿಯ ಹುಡುಗಿ. ಆ ಗುಣವೇ ಈತನಿಗೆ ಅಚ್ಚುಮೆಚ್ಚು. ಹೆಣ್ಣುಮಕ್ಕಳ ಸಾಗಾಣಿಕೆಯ ದಂಧೆಯಲ್ಲಿ ತೊಡಗಿದ್ದ ಗಜನಿ ಎಂಬಾತನನ್ನು ಎದುರು ಹಾಕಿಕೊಳ್ಳುತ್ತಾಳೆ ಮತ್ತು ಆತನಿಂದ ಭರ್ಬರವಾಗಿ ಹತ್ಯೆಗೀಡಾಗುತ್ತಾಳೆ. ಆಕೆಯನ್ನು ರಕ್ಷಿಸುವ ಸಂದರ್ಭದಲ್ಲಿ ನಾಯಕ ಸಂಜಯ್ ಕೂಡಾ ಹಲ್ಲೆಗೊಳಗಾಗುತ್ತಾನೆ. ಕಬ್ಬಿಣದ ಸಲಾಕೆಯಿಂದ ತಲೆಗೆ ಬಿದ್ದ ಭಾರಿ ಪೆಟ್ಟಿನಿಂದ ಆತ ತನ್ನ ನೆನಪಿನ ಶಕ್ತಿಯನ್ನು ಕಳೆದುಕೊಳ್ಳುತ್ತಾನೆ.

ಚಿತ್ರ ಆರಂಭವಾಗುವುದೇ ಇಲ್ಲಿಂದ. ಬಹುಪಾಲು ಕಥೆ ಫ್ಲಾಷ್‌ಬ್ಯಾಕ್‌ನಲ್ಲೇ. ಕೇವಲ ಹದಿನೈದು ನಿಮಿಷಗಳ ಹಿಂದಿನ ಘಟನೆಗಳನ್ನು ಮಾತ್ರ ನೆನಪಿನಲ್ಲಿರಿಸಿಕೊಳ್ಳಲು ಮಾತ್ರ ಶಕ್ತ ಈ ನಾಯಕ. ಆದರೆ ತನ್ನ ಪ್ರಿಯತಮೆಯನ್ನು ಹತ್ಯೆಗೈದ ಗಜನಿಯ ವಿರುದ್ಧ ಸೇಡು ತೀರಿಸಿಕೊಳ್ಳುವುದು ಅವನ ಜೀವನದ ಏಕೈಕ ಉದ್ದೇಶ, ಆದರೆ ಆ ಗಜನಿ ಯಾರು, ಎಲ್ಲಿದ್ದಾನೆ ಎಂಬುದು ತಿಳಿದಿರುವುದಿಲ್ಲ. ತನ್ನ ಹಗೆತನ ಮರೆತುಹೋಗಬಹುದೆಂಬ ಕಾರಣಕ್ಕೆ, ಅದನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಲು ತನ್ನ ಮೈಮೇಲೆಲ್ಲಾ ಹಚ್ಚೆ ಹಾಕಿಸಿಕೊಂಡಿರುತ್ತಾನೆ. ತನ್ನವರು ಯಾರು-ಶತ್ರುಗಳು ಯಾರು ಎಂಬುದನ್ನು ಪತ್ತೆ ಹಚ್ಚುವ ಸಲುವಾಗಿ, ಸ್ಥಳದಲ್ಲೇ ಅವರ ಫೋಟೋ ತೆಗೆದು, ಅದರ ಹಿಂದೆ ಅವರ ವಿವರ ಬರೆದುಕೊಂಡಿರುತ್ತಾನೆ. ಅವನ ಮ್ಯಾನೇಜರ್ ಕೂಡಾ ಅವನ ಬಳಿಯಿರುವ ಫೋಟೋದ ಇನ್ನೊಂದು ಪ್ರತಿಯೊಂದು ತೋರಿಸಿದಲ್ಲಿ ಮಾತ್ರ ಆತನನ್ನು ಗುರುತು ಹಿಡಿಯುತ್ತಾನೆ ನಾಯಕ. ನಿಜ ಇದು ತರ್ಕಕ್ಕೆ ಮೀರಿದ್ದು, ವೈದ್ಯಕೀಯ ಪರಿಭಾಷೆಯಲ್ಲೂ ಇಂತಹದೊಂದು ಖಾಯಿಲೆ ಇದೆಯೆಂಬ ಸುದ್ದಿ ಎಲ್ಲಿಯೂ ಕಂಡಿಲ್ಲ-ಕೇಳಿಲ್ಲ!

ವೈದ್ಯಕೀಯ ವಿದ್ಯಾರ್ಥಿಯೊಬ್ಬಳು (ಜಿಯಾ ಖಾನ್) ಇಂತಹ ವಿಕ್ಷಿಪ್ತ ವ್ಯಕ್ತಿಯ ಕುರಿತು ಆಸಕ್ತಿ ವಹಿಸಿ, ಆತನ ಬೆನ್ನಿಗೆ ಬೀಳುತ್ತಾಳೆ. ಅನಿರೀಕ್ಷಿತ ಸಂದರ್ಭಗಳಲ್ಲಿ ಗಜನಿಗೆ ನಾಯಕ ಆತನ ಹತ್ಯೆಗೆ ಯತ್ನಿಸುತ್ತಿರುವುದನ್ನು ತಿಳಿಸುತ್ತಾಳೆ ಮತ್ತು ನಾಯಕನಿಗೂ ಗಜನಿಯ ಕುರಿತು ಮಾಹಿತಿ ನೀಡುತ್ತಾಳೆ ಹಾಗೂ ಅವನ ಪರವಾಗಿಯೇ



ನಿಲ್ಲುತ್ತಾಳೆ. ಅಂತಿಮವಾಗಿ ತನ್ನ ಪ್ರಿಯತಮೆ ಹತ್ಯೆಯಾದ ರೀತಿಯಲ್ಲೇ ಗಜನಿಯನ್ನು ನಿರ್ದಯವಾಗಿ ಕೊಂದುಹಾಕುತ್ತಾನೆ ನಾಯಕ. ಹಗೆ ತೀರಿದ ನಂತರದಲ್ಲಿ ಅವನ Short Memory ಖಾಯಿಲೆ ಗುಣವಾಗಿ ಸಾಮಾನ್ಯ ಸ್ಥಿತಿಗೆ ಬರುವುದರೊಂದಿಗೆ ಸಿನಿಮಾ ಅಂತ್ಯವಾಗುತ್ತದೆ.

ತಾರ್ಕಿಕ ಆದಿ ಅಂತ್ಯಗಳಿಲ್ಲದ ಈ ಚಿತ್ರಕ್ಕೆ ಮನರಂಜನೆಯೊಂದೇ ಮಂತ್ರ. ಈ ಹಾದಿಯ ಹಿಂಸೆಯ ವೈಭವೀಕರಣವೂ ಹೆಚ್ಚು. ಬಿದ್ದ ಭಾ ಪೆಟ್ಟಿನಿಂದ ಹಿಂದಿನದನ್ನೆಲ್ಲಾ ಮರೆತ ನಾಯಕ, ಹಾ ಮರೆತು ಸುಮ್ಮನಿರಬಹುದಿತ್ತು! ಆದರೆ ಕ ಸಾಗಬೇಕಲ್ಲ, ರೋಚಕ ತಿರುವು ಬೇಕ ನಾಯಕನಿಗೂ ವಿಶಿಷ್ಟ ಮ್ಯಾನರಿಸಂ ಪ್ರದರ್ಶಿಸ ಒಂದು ಉತ್ತಮ ಅವಕಾಶ! ನೋಡಿದ ಪ್ರೇಕ್ಷಕರಿಗ ಒಂದು ಥ್ರಿಲ್! ವಾಸ್ತವ ಯಾರಿಗೆ ಬೇಕು ಹೇ ಈಗಾಗಲೇ 90 ಕೋಟಿ ವ್ಯವಹಾ ನಡೆಸಿದೆಯಂತೆ ಈ ಚಿತ್ರ. ನಾಯ ಅಮೀರ್‌ಖಾನ್ ತಮಗೆ ಸಿಕ್ಕ ಅವಕಾಶವ 'ಸಮರ್ಥ'ವಾಗಿಯೇ ಬಳಸಿಕೊಂಡಿದ್ದಾರೆ. ಚಿತ್ರ ಪ್ರಮುಖ ಆಕರ್ಷಣೆ ಅವರೇ! ಚಿತ್ರವ ಪೂರ್ತಿಯಾಗಿ ಆವರಿಸಿಕೊಂಡಿದ್ದಾರೆ. ಇತ್ತೀ ಹಲವು ಉತ್ತಮ, ಸಾಮಾಜಿಕ ಕಳಕಳ ಚಿತ್ರಗಳನ್ನು ನೀಡಿದ ಅಮೀರ್ ಇಲ್ಲಿ 'ತೀ ವ್ಯಾಪಾರಿ' ದಾರಿಗೆ ಜಾರಿದ್ದು ವಿಷಾದನೀಯ ಆದರೆ ಕಥೆ ಏನೇ ಇರಲಿ, ಒಬ್ಬ ನಟನಾಗಿ ಪಾತ್ರಕ್ಕೆ ತನ್ನನ್ನು ಸಂಪೂರ್ಣವಾ ಅರ್ಪಿಸಿಕೊಂಡು ತಾನೊಬ್ಬ ವಿಶಿ ಕಲಾವಿದನೆಂಬುದನ್ನು ಮತ್ತೊಮ್ಮ ಸಾಬೀತುಪಡಿಸಿದ್ದಾರೆ ಅಮೀರ್‌ಖಾನ್.

ಉಳಿದಂತೆ ನಾಯಕಿ ಆಸೀನ್ ಮೊದ ಬಾರಿಗೆ ಹಿಂದಿಯಲ್ಲಿ ನಾಯಕಿಯಾಗಿ ಗಮ ಸೆಳೆಯುತ್ತಾಳೆ, ಗಜನಿ ಪಾತ್ರಧಾರಿ ತನ್ನ ಕ ನೋಟದಿಂದ ನೋಡುಗರಲ್ಲಿ ಭಯ ಹುಟ್ಟಿಸು ಯಶಸ್ವಿಯಾಗಿದ್ದಾರೆ. ವಿಲನ್ ಪಾತ್ರದ ಹೆಸರ ಚಿತ್ರದ ಹೆಸರನ್ನಾಗಿಸಿರುವುದು ಇ ಪ್ರಥಮವಿರಬಹುದು. ರೆಹಮಾನ್ ಸಂಗ ಪರವಾಗಿಲ್ಲ. ಇದರ ನಿರ್ಮಾಣ ಅ ಪ್ರೊಡಕ್ಷನ್‌ದ್ದು.

ಕವಿತೆ

ಗಾಜಾ ಪಟ್ಟಿಯಲ್ಲಿ



ಧಿಗ್ಗನೆದ್ದ ಮಗುವಿಗೆ
ಎಂದೋ ಉಂಡ ನೆನಪು
ಕಾಡಿ ಬೇಡುತಿದೆ
ಬೆನ್ನಿಗಂಟಿದ ಹೊಟ್ಟೆಯ ತೋರಿ

ಸುತ್ತುವರಿದ ಅವಶೇಷಗಳಡಿಯಲ್ಲಿ
ಅವ್ವನ ಶವವಿದೆ
ಸಾವಿನ ಕ್ಷಣಗಳೆಣಿಸುವ
ಅಪ್ಪನ ಕಂಗಳಿವೆ

ಸಿಡಿವ ಕ್ಷಿಪಣಿಗಳ ತೋರಿ
ಕೂಗಿ ಕೂಗಿ ಹೇಳುತಿದೆ
'ನಾನು ಉಗ್ರನಲ್ಲ'ವೆಂದು

ನಾಲ್ಕು ಧರ್ಮಗಳುದಯಿಸಿದ
ಗಾಜಾಪಟ್ಟಿಯ ನಾಡಿನಲ್ಲಿ
ಏಸು-ಪೈಗಂಬರರು
ಕೈ-ಕೈ ಹಿಡಿದು ಆಟವಾಡಿ
ನಲಿದ ಮರಳುಗಾಡಿನಲ್ಲಿ
ಮೂಡಿದ ಹೆಜ್ಜೆಗುರುತುಗಳ
ಮೇಲೆ ರಕ್ತದೋಕುಳಿ

ಯಹೂದಿಯ ಹುಡುಗ
ಬಹಾಯದ ಹುಡುಗಿಗೆ
ಕೊಟ್ಟ ಮುತ್ತಿಗೆ
ನಸುನಾಚಿದ ನಾಡಿನಲ್ಲಿ
'ಇದೋ ಈಗ ಬಂದೆ'ಯೆಂದು
ಹೇಳಿ ಹೋದ ದೇವರ ನೆನಪಿದೆ

ಏಸು ಸ್ವಾಮಿಯ ಬೆತ್ಲಹಮ್ಮಿನ ಗುಡಿಸಲು
ಪೈಗಂಬರನ ನೆರಿಕೆಯೆಂಬ ಮಹಲು
ಸುತ್ತಿ ಬೀಸಿ ಬಂದ ಗಾಳಿಯಲ್ಲಿ
'ಏಕದೇವ'ನ ಧ್ಯಾನವಿತ್ತು.

ಈಜು ಹೊಡೆದು ಮೋಜಿನಾಟವ
ಆಡಿದ ಗ್ಯಾಲಲಿಯ ಕೊಳದಲ್ಲಿ
ಏಸುವಿನ ಗಲಿಬಿಲಿ
ಪೈಗಂಬರನ ತಳಮಳದ ಚಿತ್ರ

ಪೂರ್ವದ ಬುದ್ಧಿವಂತರ
ಕಡಲ ಪಯಣದ ಲಾಟೀನು
ಕ್ರಿಸ್ಮಸ್- ರಂಜಾನ್ ಹಬ್ಬದ ಬೆಳಕು
ತೋರಿದ ನಕ್ಷತ್ರಗಳೆಲ್ಲ
ಕ್ಷಿಪಣಿಗಳ ದಾಳಿಗೆ
ದಹಿಸುವ ಚಿತ್ರ
ಹೊತ್ತಿಬಂದ ಜ್ವಾಲೆಯ ಬಿಸಿಗೆ
ಕಳಚುತಿದೆ ಧರ್ಮ- ಧರ್ಮದ ಬೆಸುಗೆ

ಎಲ್ಲಿಂದಲೋ ಬೀಸಿ ಬರುವ ಗಾಳಿ
ಹೊತ್ತು ತರುತಿಹುದು
ಯಾರನ್ನೋ ಸುಟ್ಟ ಸುದ್ದಿ

ದೇವರು ಸಾಗಿದ
ಹಾದಿಯ ತುಂಬಾ ಕತ್ತಲು
ದೇವರುಗಳುದಯಿಸಿದ ನಾಡಿನಲ್ಲಿ
ದೇವರ ಬಿಟ್ಟು
ಉಳಿದವರೇ ಎಲ್ಲ

ಮರಳುಗಾಡಿನಲ್ಲಿ ಹುಟ್ಟಿದ
ಕಾರಂಜಿಗಳಿಗೆ
ಅದೆಂಥಾ ಮರುಳು?

ನನಗೊಂದು ಆಸೆಯಿದೆ
ಉರಿವ ಕ್ಷಿಪಣಿಗಳೆಲ್ಲವನು
ಆಗಸಕೆ ಸೇರಿಸಿ
ನಕ್ಷತ್ರಗಳ ಮಾಡಿ
ಜಗವ ಬೆಳಗುವಾಸೆ

ಸುರಿದ ರಕ್ತಪಾತದ ನೆಲದಲ್ಲಿ
ಸೆಗಣಿ ಸಾರಿಸಿ
ಹೂವು ಚೆಲ್ಲಿ
ಏಸು, ಪೈಗಂಬರರ
ಯಹೂದಿ - ಬಹಾಯದ ಗುರುಗಳ
ನಗುವ ಚಂದಿರನ ತಾಟಿನಲ್ಲಿ
ನಗು ನಗುತಾ ಉಣ್ಣುವುದ
ನೋಡುವ ಮಹದಾಸೆಯಿದೆ.

■ ಬಿ.ಶ್ರೀನಿವಾಸ್

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY
OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published
at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH